25 January 2026 Sunday | SINCE 1957 | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನದಲ್ಲಿ ಕಲಿಕೆ ನಿರಂತರ,
ಏಕೆಂದರೆ ಬದುಕು ಬೋಧಿಸುವುದನ್ನು
ಯಾವುತ್ತೂ ನಿಲ್ಲಿಸುವುದಿಲ್ಲ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಜಗಳ ಮಾಡಲು
ಬಂದವನ ಎದುರು
ಮೌನವಾಗು"ಅದು
ಜಗಳದ ಬಾಗಿಲನ್ನು
ಮುಚ್ಚುತ್ತದೆ!"
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916

ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 82 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಗಣರಾಜ್ಯೋತ್ಸವ ಭಾಷಣಕ್ಕೆ ಅಸ್ತು

### ರಾಜ್ಯ ಸರ್ಕಾರದ ಎಚ್ಚರಿಕೆ ನಡೆ | ರಾಜ್ಯಪಾಲರ ಅಧಿಕೃತ ಮುದ್ರೆ



**ಬೆಂಗಳೂರು:** ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಗಣರಾಜ್ಯೋತ್ಸವ ಭಾಷಣಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅಧಿಕೃತ ಮುದ್ರೆ ಒತ್ತಿದ್ದಾರೆ ಎನ್ನಲಾಗಿದೆ. ಲೋಕಭವನಕ್ಕೆ ಸರ್ಕಾರದಿಂದ ಗಣರಾಜ್ಯೋತ್ಸವ ಭಾಷಣ ಕಳುಹಿಸಲಾಗಿತ್ತು. ರಾಜ್ಯಪಾಲರ ಒಪ್ಪಿಗೆ ನಂತರ ಸರ್ಕಾರ ನಿಟ್ಟುಸಿರು ಬಿಟ್ಟಿದೆ.

ಜಂಟಿ ಅಧಿವೇಶನದಲ್ಲಿ ಭಾಷಣ ಓದುವ ವಿಚಾರದಲ್ಲಿ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರದ ನಡುವೆ ಏರ್ಪಟಿದ್ದ ಸಂಘರ್ಷದ ಬೆನ್ನಲ್ಲೇ ರಾಜ್ಯ ಸರ್ಕಾರ ಎಚ್ಚರಿಕೆ ಹೆಜ್ಜೆ ಇಟ್ಟಿದೆ. ರಾಜ್ಯಪಾಲರ ಆಕ್ಷೇಪದ ಬೆನ್ನಲ್ಲೇ ಗಣರಾಜ್ಯೋತ್ಸವ ಭಾಷಣ ಕುರಿತು ಸರ್ಕಾರ ಮುನ್ನೆಚ್ಚರಿಕೆ ವಹಿಸಿದೆ.

ನಾಳೆ ಭಾನುವಾರ ನಡೆಯಲಿರುವ ಗಣರಾಜ್ಯೋತ್ಸವ ಭಾಷಣವನ್ನು ರಾಜಭವನದ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ. ಆದಾದ ಬಳಿಕ ಭಾಷಣ ಓಕೆ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಜನವರಿ 26ಕ್ಕೆ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲರು ಗಣರಾಜ್ಯೋತ್ಸವ ಭಾಷಣ ಮಾಡಲಿದ್ದಾರೆ. ಈ ಬಾರಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ವಿರುದ್ಧ ಕಠಿಣ ವಾಗ್ದಾಳಿ ಇಲ್ಲದ ಭಾಷಣ ಸಿದ್ಧವಾಗಿದೆ.

ಅಂದಹಾಗೆ ಜಂಟಿ ಅಧಿವೇಶನದ ಭಾಷಣದಲ್ಲಿ 11 ಪ್ಯಾರಾಗಳಿಗೆ ಆಕ್ಷೇಪ ಎತ್ತಿದ ರಾಜ್ಯಪಾಲರು ಒಂದೇ ನಿಮಿಷದಲ್ಲಿ ಭಾಷಣ ಮುಗಿಸಿ ಹೊರನಡೆದಿದ್ದರು. ಇದರಿಂದಾಗಿ ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ಸಂಘರ್ಷ ಉಂಟಾಗಿತ್ತು. ಇನ್ನು ರಾಜ್ಯಪಾಲರ ಆಕ್ಷೇಪ ಗಮನಿಸಿದ ಸರ್ಕಾರ ಈಗ ಗಣರಾಜ್ಯೋತ್ಸವ ಭಾಷಣದಲ್ಲಿ ಪದ ಬಳಕೆಯಲ್ಲಿ ಸೂಕ್ಷ್ಮತೆ ಕಾಯ್ದುಕೊಂಡಿದೆ ಎಂದು ತಿಳಿದುಬಂದಿದೆ.

## ರಾಜ್ಯಪಾಲರ ನಿವಾಸಕ್ಕೆ ಹುಸಿ ಬಾಂಬ್ ಬೆದರಿಕೆ




**ಬೆಂಗಳೂರು:** ರಾಜ್ಯದ ಲೋಕಭವನಕ್ಕೆ ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಇ–ಮೇಲ್ ಸಂದೇಶ ಬಂದಿದ್ದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ರಾಜಭವನದ ಅಧಿಕೃತ ಇ–ಮೇಲ್ ಖಾತೆಗೆ ಬಾಂಬ್ ಬೆದರಿಕೆ ಸಂದೇಶ ರವಾನೆಯಾಗಿತ್ತು. ಇಂದು ಮಧ್ಯಾಹ್ನದೊಳಗೆ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿತ್ತು. ಆರ್‌ಡಿಎಕ್ಸ್ ಸ್ಫೋಟ ಮಾಡುವುದಾಗಿ ಎಚ್ಚರಿಕೆ ನೀಡಲಾಗಿತ್ತು. ಗೈನಾ ರಮೇಶ್ ಔಟ್ ಲುಕ್ ಎಂಬ ಇ–ಮೇಲ್ ಖಾತೆಯಿಂದ ಪುಟ 2ಕ್ಕೆ

## ಸಿಎಂ ಕಾರ್ಯಕ್ರಮದ ಕಟೌಟ್ ಮುರಿದುಬಿದ್ದು ಮೂವರು ಗಂಭೀರ

**ಹುಬ್ಬಳ್ಳಿ:** ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಹುಬ್ಬಳ್ಳಿಯಲ್ಲಿ ಹಮ್ಮಿಕೊಂಡಿರುವ ಮನೆ ಹಂಚಿಕೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಳವಡಿಸಿದ್ದ ಬೃಹತ್ ಕಟೌಟ್‌ಗಳು ಶನಿವಾರ ಬೆಳಗ್ಗೆ ಮುರಿದುಬಿದ್ದು ಮೂವರು ಗಾಯಗೊಂಡಿದ್ದಾರೆ. ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ. ಮಂಟೂರ ರಸ್ತೆಯ ಅಕ್ಕಪಕ್ಕ ಪುಟ 2ಕ್ಕೆ

## ಜನಪ್ರತಿನಿಧಿಗಳ ಕರೆ ಸ್ವೀಕಾರ ಕಡ್ಡಾಯ: ಸರ್ಕಾರದ ಆದೇಶ

**ಬೆಂಗಳೂರು:** ಜನಪ್ರತಿನಿಧಿಗಳ ದೂರವಾಣಿ ಕರೆ ಮಾಡಿದರೆ ಸರ್ಕಾರಿ ಅಧಿಕಾರಿಗಳು ಕಡ್ಡಾಯವಾಗಿ ರಿಸೀವ್ ಮಾಡಲೇಬೇಕು ಎಂದು ಸರ್ಕಾರ ಸುತ್ತೋಲೆ ಹೊರಡಿಸಿದೆ.

ಸರ್ಕಾರಿ ಅಧಿಕಾರಿಗಳು ಜನಪ್ರತಿನಿಧಿಗಳ ದೂರವಾಣಿ ಕರೆಗಳನ್ನು ಸ್ವೀಕರಿಸದೆ ಇರುವ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದಾರೆ. ಶಾಸಕರು, ಪರಿಷತ್ ಸದಸ್ಯರ, ಸಂಸದರ ಫೋನ್ ಕರೆ ಸ್ವೀಕರಿಸುವ ಸಂಬಂಧ ಸರ್ಕಾರಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸರ್ಕಾರಿ ಅಧಿಕಾರಿಗಳು ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ದೂರವಾಣಿ ಕರೆಗಳನ್ನು ಸ್ವೀಕರಿಸದೆ ಇರುವುದು, ಮರಳಿ ಕರೆ ಮಾಡದೇ ಇರುವ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ಪುಟ 2ಕ್ಕೆ

## ನಮ್ಮ ಕುಟುಂಬ ಮುಗಿಸಲು ಸಂಚು

### ಎಸ್‌ಐಟಿ ಅಧಿಕಾರಿಗಳಿಗೆ ಸರ್ಕಾರದ ಉಡುಗೊರೆ: ಎಚ್.ಡಿ.ದೇವೇಗೌಡ ವಾಗ್ದಾಳಿ



**ಹಾಸನ:** ಎಚ್.ಡಿ.ರೇವಣ್ಣ ಕುಟುಂಬವನ್ನು ಮುಗಿಸಲು ಬಳಸಿಕೊಂಡಿದ್ದ ಎಸ್‌ಐಟಿ ಪೊಲೀಸ್ ಅಧಿಕಾರಿಗಳಿಗೆ ನಮ್ಮ ಎದುರಾಳಿಗಳು ಉಡುಗೊರೆ ಕೊಟ್ಟಿದ್ದಾರೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಬೂವನಹಳ್ಳಿ ಬಳಿ ಶನಿವಾರ ನಡೆದ ಜೆಡಿಎಸ್ ಸಮಾವೇಶದಲ್ಲಿ ಅವರು ಮಾತನಾಡಿದರು. ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ ನಮ್ಮ ಎದುರಾಳಿಗಳು ರೇವಣ್ಣ ಕುಟುಂಬವನ್ನು ಮುಗಿಸಲು ಪ್ರಯತ್ನಪಟ್ಟರು. ಈ ಜಿಲ್ಲೆಯಲ್ಲಿ ಜೆಡಿಎಸ್ ಪ್ರಬಲವಾಗಿದೆ. ಜೆಡಿಎಸ್ ಮುಗಿಸಲು ಎರಡು ಬಾರಿ ಸಮಾವೇಶ ಮಾಡಿದರು. ನನಗೆ ಆನಂದ ಆಯಿತು ಎಂದು ವ್ಯಂಗ್ಯವಾಡಿದರು.

ನನಗೆ 93 ವರ್ಷ ವಯಸ್ಸು. ಈ ಆತ್ಮ ಸ್ವಚ್ಛವಾಗಿದೆ. ಜನರಿಗಾಗಿ ದುಡಿದ್ದೇನೆ, ಕಷ್ಟ ಪಟ್ಟಿದ್ದೇನೆ. ಹಾಸನ ಜಿಲ್ಲೆಯಲ್ಲಿ ಒಂದು ಬಾರಿ ನನ್ನನ್ನು ಸೋಲಿಸಿದ್ದಾರೆ. ಅದೇ ಜನ 1991 ರಲ್ಲಿ ಹಾಸನ ಜಿಲ್ಲೆಯಿಂದ ಲೋಕಸಭೆಗೆ ಕಳುಹಿಸಿದರು. ಜನಕ್ಕೆ ತಲೆ ಬಾಗುತ್ತೇನೆ. ನನ್ನನ್ನು ತುಳಿಯಬೇಕು ಎಂದು ಕೇಸ್‌ಗಳನ್ನು ಹಾಕಿಸಿದವರನ್ನು ಮೆಟ್ಟಿನಿಂತು ರಾಜಕೀಯ ಮಾಡಿದ್ದೇನೆ ಎಂದು ವಾಗ್ದಾಳಿ ನಡೆಸಿದರು.

ನಿಮ್ಮನ್ನೆಲ್ಲಾ ನೋಡಿ ನನ್ನ ಕಣ್ಣು ಕುಕ್ಕುತ್ತಾ ಇದೆ. ಯಾರು ಆಡಳಿತ ನಡೆಸುತ್ತಿದ್ದಾರೋ ಅವರಿಗೆ ನಿಮ್ಮ ಆಟ ನಡೆಯೋದಿಲ್ಲ ನಾವಿದ್ದೇವೆ ಎಂದು ನೀವು ತೋರಿಸಿದ್ದೀರಿ. ಕಾಲ ಬರುತ್ತೆ, ನನಗೆ ದೈವದಲ್ಲಿ ನಂಬಿಕೆ ಇದೆ ಎಂದರು.

ರಾಹುಲ್‌ಗಾಂಧಿ ಹತ್ತು ವರ್ಷದ ಹಿಂದೆ ಹಾಸನಕ್ಕೆ ಬಂದರು. ಜೆಡಿಎಸ್ ಬಿಜೆಪಿಯ ಬಿ ಟೀಂ ಅಂದರು. ಅವತ್ತು ನನ್ನ ಸ್ನೇಹಿತ ಸೋತ.

ಅವರ ಮಗ ಈಗ ಹಾಸನ ಎಂಎಲ್‌ಎ ಆಗಿದ್ದಾರೆ. ಇವತ್ತು ನಾವು ಎನ್‌ಡಿಎ ಪಾಲುದಾರರಾಗಿದ್ದೇವೆ. ನಾನು ಹಗಲು–ರಾತ್ರಿ ದುಡಿದು ಈ ಜಿಲ್ಲೆಗಾಗಿ ಹೋರಾಟ ಮಾಡಿದ್ದೇನೆ. ಎಚ್.ಡಿ.ಕುಮಾರಸ್ವಾಮಿ ಅವರು ದುಡ್ಡು ಕೊಟ್ಟು ಜಮೀನು ತೆಗೆದುಕೊಂಡರೆ ಅದು ಗೋಮಾಳ ಜಾಗ, ಸುಳ್ಳು ದಾಖಲೆ ಮಾಡಿಸಿದ್ದಾರೆ ಎಂದು ತನಿಖೆ ಮಾಡಿಸಿದರು ಎಂದು ಆರೋಪಿಸಿದರು.

## ಚಾಮುಂಡೇಶ್ವರಿ ದೇಗುಲ ಗೋಪುರಕ್ಕೆ ಸಮಸ್ಯೆ

### ಬೆಟ್ಟದಲ್ಲಿ ಅವೈಜ್ಞಾನಿಕವಾಗಿ ಕಾಮಗಾರಿ | ಸಂಸದ ಯದುವೀರ್ ಆತಂಕ



**ಮೈಸೂರು:** ಚಾಮುಂಡಿ ಬೆಟ್ಟದಲ್ಲಿ ದೇವಸ್ಥಾನದ ಪಕ್ಕದಲ್ಲೇ ಅವೈಜ್ಞಾನಿಕವಾಗಿ ಕಾಮಗಾರಿ ಮಾಡುತ್ತಿರುವುದರಿಂದ ದೇಗುಲದ ಗೋಪುರಕ್ಕೆ ತೊಂದರೆ ಆಗಬಹುದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆತಂಕ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಪತ್ರಕರ್ತರೊಂದಿಗೆ ಶನಿವಾರ ಮಾತನಾಡಿದ ಅವರು, ಯಾವ ರೀತಿಯಲ್ಲಿ ವೈಜ್ಞಾನಿವಾಗಿ ಕಾಮಗಾರಿ ಕೈಗೊಳ್ಳಲಾಗಿದೆ ಎಂಬುದನ್ನು ಮೊದಲು ತಿಳಿಸುವ ಕೆಲಸವನ್ನು ಜಿಲ್ಲಾಡಳಿತ ಮಾಡಬೇಕು ಎಂದು ಆಗ್ರಹಿಸಿದರು.



ಚಾಮುಂಡಿಬೆಟ್ಟದ ಅಭಿವೃದ್ಧಿ ಆಗಬೇಕಿದೆ. ನನ್ನ ಅನುಮತಿಗಿಂತ ಕಾಮಗಾರಿಗೆ ವಿರೋಧ ಮಾಡಿರುವವರ ಅನುಮತಿ ತುಂಬಾ ಮುಖ್ಯ. ಅಧಿಕಾರಿಗಳು ತರಾತುರಿಯಲ್ಲಿ ಕಾಮಗಾರಿ ನಡೆಸುತ್ತಿರುವುದು ಏಕೆಂದು ಗೊತ್ತಿಲ್ಲ. ಜನರ ಅಭಿಪ್ರಾಯವನ್ನು ಪಡೆದು ಕಾಮಗಾರಿ ಮುಂದುವರೆಸಲಿ ಎಂದು ಆಗ್ರಹಿಸಿದರು.

ಚಾಮುಂಡಿ ಬೆಟ್ಟದಲ್ಲಿ ಪ್ರಸಾದ್ ಯೋಜನೆ ಕಾಮಗಾರಿ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಿದ್ದೇನೆ. ಅಲ್ಲಿನ ಗ್ರಾಮಸ್ಥರು ಕೂಡ ಕಾಮಗಾರಿಯನ್ನು ವಿರೋಧಿಸಿದ್ದಾರೆ. ದೇವಸ್ಥಾನದ ಪಕ್ಕದಲ್ಲೇ ಕೆಲಸ ನಡೆಯುತ್ತಿದೆ. ಇದರಿಂದ ಗೋಪುರಕ್ಕೆ ತೊಂದರೆ ಆಗಬಹುದು. ಪುಟ 2ಕ್ಕೆ

### ನಗರಪಾಲಿಕೆಯಲ್ಲಿ ಅಕ್ರಮ ಹೆಚ್ಚಳ

**ಮೈಸೂರು:** ಮೈಸೂರು ಮಹಾನಗರಪಾಲಿಕೆ ಅವ್ಯವಸ್ಥೆಗಳ ಆಗರವಾಗಿದೆ. ಉತ್ತರದಾಯಿತ್ವ ಇಲ್ಲದಿರುವುದರಿಂದಾಗಿ ಅಕ್ರಮ ಹೆಚ್ಚುತ್ತಿದೆ. ಇದಕ್ಕೆ ರಾಜ್ಯ ಸರ್ಕಾರವೇ ಸಂಪೂರ್ಣ ಹೊಣೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವಾಗ್ದಾಳಿ ನಡೆಸಿದ್ದಾರೆ.

ನಗರಪಾಲಿಕೆಯಲ್ಲಿ ಸಾರ್ವಜನಿಕ ನಿಧಿಯನ್ನೇ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಮೂವರು ಮಹಿಳಾ ಸಿಬ್ಬಂದಿಯನ್ನು ಅಮಾನತು ಮಾಡಿರುವುದೇ ಇದಕ್ಕೆ ಸಾಕ್ಷಿ. ಚುನಾಯಿತ ಜನಪ್ರತಿನಿಧಿಗಳು ಇಲ್ಲದಿರುವುದು, ಸಮರ್ಥ ಮೇಲ್ವಿಚಾರಣೆ ಮಾಡದಿರುವುದು, ಸುಧಾರಣೆ ಕ್ರಮಗಳನ್ನು ಕೈಗೊಳ್ಳದಿರುವುದು, ಉತ್ತರದಾಯಿತ್ವ ಪುಟ 2ಕ್ಕೆ

## ತೆರಿಗೆ ಬಾಕಿ: ಶಾಲೆಯ ಮುಂದೆ ಪುರಸಭೆ ಮುಖ್ಯಾಧಿಕಾರಿ ಧರಣಿ



**ಮಳವಳ್ಳಿ:** ಪಟ್ಟಣದ ರೋಟರಿ ವಿದ್ಯಾಸಂಸ್ಥೆ ಮುಂಭಾಗ ಪುರಸಭೆ ಅಧಿಕಾರಿ ಹಾಗೂ ಸಿಬ್ಬಂದಿ ಶನಿವಾರ ಧರಣಿ ನಡೆಸಿ ಬಾಕಿ ಉಳಿಸಿಕೊಂಡಿರುವ 55 ಲಕ್ಷ ತೆರಿಗೆ ಪಾವತಿಸುವಂತೆ ಆಗ್ರಹಿಸಿದರು.

ಶಾಲೆಯ ಆಡಳಿತ ಮಂಡಳಿ 12 ವರ್ಷಗಳಿಂದ ಸರಿಯಾಗಿ ಕಟ್ಟಡ ಶುಲ್ಕ ಪಾವತಿ ಮಾಡಿಲ್ಲ. ಇದುವರೆಗೂ 8 ಲಕ್ಷ ಮಾತ್ರ ತೆರಿಗೆ ಪಾವತಿಸಲಾಗಿದೆ. ಬಾಕಿ ತೆರಿಗೆ ಕಟ್ಟುವಂತೆ ಪುರಸಭೆಯಿಂದ ಹಲವಾರು ಬಾರಿ ನೋಟಿಸ್ ನೀಡಿದ್ದರೂ ಸಂಸ್ಥೆ ನಿರ್ಲಕ್ಷ್ಯ ತೋರಿತ್ತು ಎಂದು ಆರೋಪಿಸಿದರು.

ಪುರಸಭೆ ಮುಖ್ಯಾಧಿಕಾರಿ ಎಂ.ಸಿ.ನಾಗರತ್ನಾ ಮಾತನಾಡಿ, ಶನಿವಾರ ನಮ್ಮ ಸಿಬ್ಬಂದಿ ತೆರಿಗೆ ಕಟ್ಟುವಂತೆ ಕೇಳಲು ಹೋದಾಗ ರೋಟರಿ ಸಂಸ್ಥೆಯಿಂದ ಸಮರ್ಪಕ ಉತ್ತರ ಬಂದಿಲ್ಲ. ನಮ್ಮ ಸಿಬ್ಬಂದಿಗೆ ಸಂಕ್ರಾಂತಿ ಹಬ್ಬಕ್ಕೆ ಸಂಬಳ ನೀಡಲು ಆಗಿಲ್ಲ. ಶಿಕ್ಷಣ ಸಂಸ್ಥೆಯಾಗಿರುವುದರಿಂದ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಬೀಗ ಹಾಕದೇ ತೆರಿಗೆ ಕಟ್ಟುವಂತೆ ಆಗ್ರಹ ಮಾಡಲಾಗುತ್ತಿದೆ ಎಂದು ಹೇಳಿದರು. ಪುಟ 2ಕ್ಕೆ

## ‘ಧಮ್ಕಿ’ ರಾಜೀವ್ ಗೌಡ ನಾಪತ್ತೆ: ಮನೆ ಮೇಲೆ ಪೊಲೀಸರ ದಾಳಿ

**ಚಿಕ್ಕಬಳ್ಳಾಪುರ:** ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತಗೌಡಗೆ ಬೆದರಿಕೆ ಹಾಕಿದ್ದ ರಾಜೀವ್ ಗೌಡ ಬಂಧನ ಭೀತಿಯಿಂದ ಪರಾರಿಯಾಗಿ 10 ದಿನಗಳು ಕಳೆದಿವೆ. ರಾಜೀವ್ ಗೌಡ ಬಂಧನಕ್ಕೆ ಪೊಲೀಸರು ಹಗಲು ರಾತ್ರಿ ಹುಡುಕಾಟ ಮುಂದುವರೆಸಿದ್ದಾರೆ.



ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆದಿದ್ದ ಪೊಲೀಸರು ಬೆಂಗಳೂರಿನ ಸಂಜಯ್ ನಗರದ ನಿವಾಸದ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ. ಆದರೆ ರಾಜೀವ್ ಗೌಡ ಪತ್ತೆಯಾಗಿಲ್ಲ. ಇನ್ನೂ ರಾಜೀವ್ ಗೌಡ ವಿದೇಶಕ್ಕೆ ಪರಾರಿಯಾಗದಂತೆ ಪಾಸ್ ಪೋರ್ಟ್ ಮೇಲೂ ಸಹ ಪೊಲೀಸರು ಕಣ್ಣಿಟ್ಟಿದ್ದಾರೆ.

ಈ ನಡುವೆಯೇ ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತಗೌಡ ಮೇಲೆ ಆಸಿಡ್ ದಾಳಿ ಆಗಲಿದೆ ಎಂಬ ಬೆದರಿಕೆ ಪತ್ರ ಅಂಚೆ ಮೂಲಕ ನಗರಸಭಾ ಪುಟ 2ಕ್ಕೆ

## ಪಾಲಿಕೆಗೆ ಲಕ್ಷಾಂತರ ನಷ್ಟ: ಮೂವರು ನೌಕರರು ಅಮಾನತು

**ಮೈಸೂರು:** ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರು ಗೈರುಹಾಜರಾದ ದಿನಗಳಿಗೂ ಹೆಚ್ಚುವರಿ ವೇತನ ಪಾವತಿಸಿರುವ ಆರೋಪದಲ್ಲಿ ಪಾಲಿಕೆಯ ಮೂವರು ನೌಕರರನ್ನು ಅಮಾನತು ಮಾಡಲಾಗಿದೆ. ಅಲ್ಲದೆ, ಈ ಹಿಂದೆ ಹೀಗೆ ನಡೆದಿರುವ ಬಗ್ಗೆಯೂ ತನಿಖೆ ನಡೆಯುತ್ತಿದೆ. ಸಮಗ್ರ ತನಿಖೆ ನಡೆದರೆ ಮತ್ತಷ್ಟು ನೌಕರರು ಸಿಕ್ಕಿಬೀಳುವ ಸಾಧ್ಯತೆ ಇದೆ.




ನಗರಪಾಲಿಕೆ ಆರೋಗ್ಯ ವಿಭಾಗದ ಪ್ರಥಮ ದರ್ಜೆ ಸಹಾಯಕಿಯರಾದ ಕೆ.ಎಲ್.ಸಿ.ಪಾಪ, ಎಂ. ಪುಷ್ಪಾವತಿ ಹಾಗೂ ದ್ವಿತೀಯ ದರ್ಜೆ ಸಹಾಯಕಿ ಎಚ್.ಸಿ.ಅನಿತಾ ಅವರನ್ನು ಆಯುಕ್ತ ಶೇಖ್ ತನ್ವೀರ್ ಆಸೀಫ್ ಅಮಾನತು ಮಾಡಿ ಆದೇಶಿಸಿದ್ದಾರೆ.

ಸೆಪ್ಟೆಂಬರ್, ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ಕೆಲವು ಪೌರಕಾರ್ಮಿಕರು ಕೆಲಸಕ್ಕೆ ಗೈರು ಹಾಜರಾಗಿದ್ದರು. ನಿಯಮದ ಪ್ರಕಾರ ಗೈರುಹಾಜರಿಗೆ ವೇತನ ಕಡಿತಗೊಳಿಸಿ ಪಾವತಿಸಬೇಕಾಗಿತ್ತು. ಆದರೆ, ಅವರಿಗೆ ಪೂರ್ಣ ಪ್ರಮಾಣದ ವೇತನ ನೀಡಿ ಕರ್ತವ್ಯಲೋಪ ಎಸಗಿರುವುದು ಪರಿಶೀಲನೆ ವೇಳೆ ಕಂಡುಬಂದಿದೆ. ಈ ಕಾರಣದಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಪೌರಕಾರ್ಮಿಕರಿಗೆ ಕೆ.ಎಲ್.ಸಿ. ಪಾಪ ಸೆಪ್ಟೆಂಬರ್‌ನಲ್ಲಿ 4,25,273, ಅಕ್ಟೋಬರ್‌ನಲ್ಲಿ 4,07,793 ಹಾಗೂ ನವೆಂಬರ್‌ನಲ್ಲಿ 5,25,455 ಹೆಚ್ಚುವರಿಯಾಗಿ ಪಾವತಿದ್ದಾರೆ. ಪುಷ್ಪಾವತಿ ಅವರು ಸೆಪ್ಟೆಂಬರ್‌ನಲ್ಲಿ ಪುಟ 2ಕ್ಕೆ

## ಕಿರುಕುಳ: ವಿಧಾನಸೌಧ ಮುಂದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನ



**ಬೆಂಗಳೂರು:** ವಿಧಾನಸೌಧದ ಮುಂದೆಯೇ ವ್ಯಕ್ತಿಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ. ವಿಧಾನಸೌಧ ಮುಂದೆ ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಯನ್ನು ಡಾ.ನಾಗೇಂದ್ರ ಎಂದು ಗುರುತಿಸಲಾಗಿದೆ.

ವಿಧಾನಸೌಧ ಪೊಲೀಸರು ತಕ್ಷಣ ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಿದ್ದಾರೆ.ವಿಷ ಸೇವಿಸುವುದನ್ನು ಗಮನಿಸಿದ ವಿಧಾನಸೌಧ ಪೊಲೀಸರು ತಕ್ಷಣ ವಿಷದ ಬಾಟಲಿಯನ್ನು ಕಿತ್ತುಕೊಂಡು ಅವರನ್ನು ಆಸ್ಪತ್ರೆಗೆ ಪುಟ 2ಕ್ಕೆ

## ಹುಲಿ ಸೆರೆ ಕಾರ್ಯಾಚರಣೆ ಸ್ಥಗಿತ

### * ವಿಮಾನ ನಿಲ್ದಾಣದ ಸಮೀಪದ ನಿವಾಸಿಗಳಲ್ಲಿ ಆತಂಕ



**ಮೈಸೂರು:** ಮೈಸೂರು ವಿಮಾನ ನಿಲ್ದಾಣದ ಆವರಣದಲ್ಲಿ ಕಾಣಿಸಿಕೊಂಡಿದ್ದ ಹುಲಿಯನ್ನು ಪತ್ತೆಹಚ್ಚಲು ವಿಫಲವಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಕೂಂಬಿಂಗ್ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ.

ಅರಣ್ಯ ಇಲಾಖೆಯು ಹುಡುಕಾಟ ನಿಲ್ಲಿಸಿರುವುದರಿಂದ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಬಡಾವಣೆ ಮತ್ತು ಗ್ರಾಮಗಳಲ್ಲಿ ಭೀತಿ ಆವರಿಸಿದೆ. ಮರಸೆ, ಮಾಕನಹುಂಡಿ, ದಡದಹಳ್ಳಿ, ಮಂಡಕಳ್ಳಿ ಮತ್ತು ಇತರ ಸುತ್ತಮುತ್ತಲಿನ ಪ್ರದೇಶಗಳ ನಿವಾಸಿಗಳು ಭಯದಿಂದ ಮನೆಯೊಳಗೆ ಇರುವಂತಾಗಿದೆ, ವಿಶೇಷವಾಗಿ ಮುಂಜಾನೆ ಮತ್ತು ಮುಸ್ಸಂಜೆ ನಂತರ ಮನೆಯಿಂದ ಹೊರಬರಲು ಗ್ರಾಮಸ್ಥರು ಭಯಪಡುತ್ತಿದ್ದಾರೆ.

ವಿಮಾನ ನಿಲ್ದಾಣದ ಭದ್ರತೆಯ ಜವಾಬ್ದಾರಿಯನ್ನು ಹೊಂದಿರುವ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಸಿಬ್ಬಂದಿ ಹುಲಿಯನ್ನು ಜನವರಿಯಲ್ಲಿ ನೋಡಿದರು. ದಿನನಿತ್ಯದ ಗಸ್ತು ತಿರುಗಾಟದ ಸಮಯದಲ್ಲಿ ಹುಲಿ ಕಾಣಿಸಿಕೊಂಡಿತ್ತು. ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಹುಲಿ ಓಡಾಡುವುದನ್ನು ಗಮನಿಸಿದರು, ಗಸ್ತು ವಾಹನದ ಕ್ಯಾಮೆರಾದಲ್ಲಿ ಹುಲಿ ಓಡಾಡುತ್ತಿರುವುದು ಕಂಡುಬಂದಿತ್ತು.

ವಿಮಾನ ನಿಲ್ದಾಣದಲ್ಲಿ ಹುಲಿ ಕಾಣಿಸಿಕೊಂಡ ನಂತರ, ನಾವು ಹೊಲಗಳಿಗೆ ಹೋಗುವುದನ್ನು ನಿಲ್ಲಿಸಿದ್ದೇವೆ. ಬೆಳಗಿನ ವಾಕಿಂಗ್ ಮತ್ತು ಸಂಜೆ ಹೊರಗೆ ಹೋಗುವುದನ್ನು ನಿಲ್ಲಿಸಿದ್ದೇವೆ. ಇಡೀ ಗ್ರಾಮ ಭಯದಿಂದ ಬದುಕುತ್ತಿದೆ ಎಂದು ವಿಮಾನ ನಿಲ್ದಾಣದ ಬಳಿಯ ಮರಸೆ ಗ್ರಾಮಸ್ಥರು ತಿಳಿಸಿದ್ದಾರೆ.

## ರೆಡ್ಡಿ ಮಾಡೆಲ್ ಹೌಸ್‌ಗೆ ಬೆಂಕಿ: 8 ಮಂದಿ ಬಂಧನ

**ಬಳ್ಳಾರಿ:** ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲುಗೆ ಸೇರಿದ ನಗರದ ನೂತನ ಬಡಾವಣೆಯ ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಇಬ್ಬರು ಅಪ್ರಾಪ್ತರು ಸೇರಿದಂತೆ 8 ಮಂದಿ ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿಯ ಕೌಲ್ ಬಜಾರ್‌ನ 8 ಯುವಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ರೀಲ್ಸ್ ಮಾಡಲು ಹೋಗಿ ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದೆ. ಘಟನೆ ಸಂಬಂಧ ಬಳ್ಳಾರಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಎಂಟರಿಂದ ಹತ್ತು ಜನ ಕಿಡಿಗೇಡಿಗಳು ಶುಕ್ರವಾರ ಸಂಜೆ ಬೆಂಕಿ ಹಚ್ಚಿದ್ದಾರೆ. ಜನಾರ್ದನ ರೆಡ್ಡಿ ಅವರ ಪತ್ನಿ ಜಿ.ಲಕ್ಷ್ಮೀ ಅವರಿಗೆ ಸೇರಿದ್ದ ಮಾಡೆಲ್ ಹೌಸ್ ಇದಾಗಿದೆ. ದುರುದ್ದೇಶದಿಂದಲೇ ಬೆಂಕಿ ಹಚ್ಚಿದ್ದಾರೆ ಎಂದು ಪುಟ 2ಕ್ಕೆ

## ಅಬಕಾರಿ ಸಚಿವರಿಗೆ ‘ಕುರ್ಚಿ ಕಂಟಕ’

### ಲೋಕಾಯುಕ್ತ ಎಫ್‌ಐಆರ್ ನಲ್ಲಿ ‘ಮಿನಿಸ್ಟರ್’ ಪದ ಉಲ್ಲೇಖ

**ಬೆಂಗಳೂರು:** ಅಬಕಾರಿ ಇಲಾಖೆಯ ಕೋಟಿ ಕೋಟಿ ಲಂಚ ಪ್ರಕರಣದ ತನಿಖೆ ಚುರುಕುಗೊಂಡಿದೆ. ಆದರೆ, ಲೋಕಾಯುಕ್ತ ದಾಖಲಿಸಿರುವ ಎಫ್‌ಐಆರ್ ನಲ್ಲಿ ‘ಮಿನಿಸ್ಟರ್’ ಪದ ಸೇರ್ಪಡೆ ಆಗಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟದ ಮತ್ತೊಂದು ವಿಕೆಟ್ ಪತನವಾಗಲಿದೆಯೇ ಎಂಬ ಬಗ್ಗೆ ಅನುಮಾನವಿದೆ.

ಲಂಚ ಪ್ರಕರಣದಲ್ಲಿ ಮಿನಿಸ್ಟರ್ ಆದೇಶದ ಬಗ್ಗೆ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿರುವ ಹಿನ್ನೆಲೆಯಲ್ಲಿ ಅಬಕಾರಿ ಸಚಿವರಿಗೆ ತಿಮ್ಮಾಪೂರ ಅವರ ಕುರ್ಚಿಗೆ ಕಂಟಕ ಆಗಲಿದೆಯಾ? ಅನ್ನೋದು ತೀವ್ರ ಕುತೂಹಲ ಹೆಚ್ಚಿಸಿದೆ. ಅಲ್ಲದೆ ವಿಪಕ್ಷಗಳು ಅಬಕಾರಿ ಸಚಿವರ ರಾಜೀನಾಮೆಗೆ ಪಟ್ಟುಹಿಡಿದಿದ್ದಾರೆ. ಪ್ರಕರಣದಲ್ಲಿ ಲಂಚದ ಹಣ ಯಾರಿಗೆಲ್ಲ ಕೊಡಬೇಕಾಗುತ್ತದೆ ಅನ್ನುವ ಬಗ್ಗೆ ಉಲ್ಲೇಖವಿದೆ.



ಅಬಕಾರಿ ಇಲಾಖೆ ಅಧಿಕಾರಿಗಳು ಬಾರ್ ಲೈಸೆನ್ಸ್ ಕೊಡಲು ಕೋಟಿ ಕೋಟಿ ಹಣಕ್ಕೆ ಡಿಮ್ಯಾಂಡ್ ಮಾಡಿರುವ ಆರೋಪ ಜೋರಾಗಿ ಸದ್ದು ಮಾಡಿದೆ. ಸಿಎಲ್ 7 ಬಾರ್ ಲೈಸೆನ್ಸ್ ಕೊಡಲು ಮುಂಗಡವಾಗಿ 50 ಲಕ್ಷ ಲಂಚದ ಹಣ ಪಡೆಯುವಾಗ ಅಬಕಾರಿ ಇಲಾಖೆ ಡಿಸಿ ಹಾಗೂ ಎಸ್ಪಿ ಲೋಕಾಯುಕ್ತ ಬಲೆಗೆ ಬಿದ್ದಿದ್ದರು. ಈಗಾಗಲೇ ಅವರನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ. ಈ ಸಂಬಂಧ ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಂಧಿತ ಅಬಕಾರಿ ಡಿಸಿ ಜಗದೀಶ್ ನಾಯಕ್ ಹಾಗೂ ಎಸ್ಪಿ ತಮ್ಮಣ್ಣ ಅವರಿಂದ ಹಣಕ್ಕೆ ಬೇಡಿಕೆ ಇಡುವಾಗ ಲಂಚದ ಹಣವನ್ನ ಮಿನಿಸ್ಟರ್, ಅಬಕಾರಿ ಇನ್ಸ್‌ಪೆಕ್ಟರ್, ಡಿಸಿ ಕಚೇರಿ, ಅಬಕಾರಿ ಡಿಸಿ ಕಚೇರಿ, ಅಲ್ಲಿಂದ ಕಮೀಷನರ್ ಕಚೇರಿಯ ನಾಲ್ಕು ಟೇಬಲ್, ಜೆ.ಸಿ, ಹೆಚ್ಚುವರಿ ಆಯುಕ್ತರು, ಇಬ್ಬರು ಡಿಸಿ ಗಳಿಗೆ ಲಂಚದ ಹಣ ನೀಡಬೇಕಾಗುತ್ತದೆ ಎಂದು ದೂರುದಾರನ ಬಳಿ ಮಾತನಾಡಿರುವ ಅಂಶಗಳನ್ನ ಎಫ್‌ಐಆರ್ ನಲ್ಲಿ ಉಲ್ಲೇಖ ಮಾಡಲಾಗಿದೆ.

ಅಂದಹಾಗೆ ಜಿಬಿಎ ವ್ಯಾಪ್ತಿಯಲ್ಲಿ ಸಿಎಲ್–7 ಲೈಸೆನ್ಸ್ ನೀಡಲು ಅಬಕಾರಿ ಡಿಸಿ ಜಗದೀಶ್ ನಾಯಕ್ ಹಾಗೂ ಸೂಪರಿಂಟೆಂಡೆಂಟ್ ತಮ್ಮಣ್ಣ ನೀಡಲು 80 ಲಕ್ಷ ರೂ.ಗೆ ಲಂಚ ಮಾತನಾಡಿದ್ದರು. ನಂತರ 75 ಲಕ್ಷಕ್ಕೆ ಫಿಕ್ಸ್ ಆಗಿದ್ದ ಹಣದಲ್ಲಿ 50 ಲಕ್ಷ ಮುಂಗಡವಾಗಿ ನೀಡುವಂತೆ ಅಧಿಕಾರಿಗಳು ಒತ್ತಾಯಿಸಿದ್ದ ಆರೋಪವಿದೆ. ಅಷ್ಟಕ್ಕೆ ಸುಮ್ಮನಾಗದ ಅಧಿಕಾರಿಗಳು ಅರ್ಜಿ ಸಂಬಂಧ ಸ್ಥಳ ಪರಿಶೀಲನೆ ಪುಟ 2ಕ್ಕೆ

ಮೊದಲ ಪುಟದಿಂದ

## ಚಾಮುಂಡೇಶ್ವರಿ ದೇಗುಲ ಗೋಪುರಕ್ಕೆ ಸಮಸ್ಯೆ

ಯಾವ ರೀತಿ ಕಾಮಗಾರಿ ಕೈಗೊಳ್ಳಲಾಗಿದೆ ಎಂಬುದನ್ನು ಮೊದಲು ತಿಳಿಸುವ ಕೆಲಸವನ್ನು ಜಿಲ್ಲಾಡಳಿತ ಮಾಡಬೇಕು ಎಂದು ಹೇಳಿದರು.

ವಿಧಾನಮಂಡಲ ಅಧಿವೇಶನದಲ್ಲಿ ಕಾಂಗ್ರೆಸ್ ಶಾಸಕರು ಗೂಂಡಾಗಳಂತೆ ವರ್ತಿಸಿರುವುದು ಖಂಡನೀಯ. ರಾಜ್ಯಪಾಲರು ಸಂವಿಧಾನಾತ್ಮಕ ಜವಾಬ್ದಾರಿ ನಿಭಾಯಿಸಿದ್ದಾರೆ. ಆದರೆ, ಅವರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ. ರಾಜ್ಯಪಾಲರಿಗೆ ಅವಮಾನ ಮಾಡಿರುವುದನ್ನು ರಾಜ್ಯದ ಜನರು ಗಮನಿಸಿದ್ದಾರೆ ಎಂದು ಯದುವೀರ್ ಟೀಕಿಸಿದರು.

ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ರಾಜ್ಯದ ಸ್ತಬ್ಧಚಿತ್ರ ಭಾಗವಹಿಸುತ್ತಿಲ್ಲ. ಈ ಬಗ್ಗೆ ಸರಿಯಾಗಿ ಪತ್ರ ವ್ಯವಹಾರ ನಡೆದಿಲ್ಲ. ಆದ್ದರಿಂದ ಸಾಕಷ್ಟು ಗೊಂದಲ ಉಂಟಾಗಿದೆ ಎಂದರು. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ. ಈ ಬಗ್ಗೆ ಹೋರಾಟವನ್ನೂ ನಡೆಸಿದ್ದೇವೆ. ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮೈಸೂರು ಕುಶಾಲನಗರ ರೈಲು ಮಾರ್ಗ ನಿರ್ಮಾಣ ಯೋಜನೆಯನ್ನು ರೈಲ್ವೆ ಇಲಾಖೆ ರದ್ದುಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯೋಜನೆಗೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರ ಹಸ್ತಾಂತರಿಸಿಲ್ಲ. ಈ ಬಗ್ಗೆ ಪುನರ್ ಪರಿಶೀಲಿಸುವಂತೆ ರೈಲ್ವೆ ಇಲಾಖೆ ಗಮನಕ್ಕೆ ತಂದಿದ್ದೇನೆ. ಆ ಭಾಗಕ್ಕೆ ರೈಲು ಅಗತ್ಯವಿದೆ. ಮೈಸೂರು–ಕೊಡಗು ಜನರ ಹಿತದೃಷ್ಟಿಯಿಂದ ಈ ಯೋಜನೆ ಅನುಷ್ಠಾನಗೊಳ್ಳಬೇಕು. ಮತ್ತೊಮ್ಮೆ ಕೇಂದ್ರದ ಗಮನ ಸೆಳೆಯುತ್ತೇನೆ ಎಂದು ತಿಳಿಸಿದರು.

## ನಗರಪಾಲಿಕೆಯಲ್ಲಿ ಅಕ್ರಮ ಹೆಚ್ಚಳ

ಇರದಿರುವುದು ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಬೃಹತ್ ಮೈಸೂರು ಮಹಾನಗರಪಾಲಿಕೆ ಮಾಡುತ್ತೇವೆ ಎಂದು ಹೊರಟಿರುವ ಕಾಂಗ್ರೆಸ್ ಸರ್ಕಾರ, ಅದನ್ನು ಮಾಡದಿದ್ದರೂ ಪರವಾಗಿಲ್ಲ. ನಗರಪಾಲಿಕೆಯಲ್ಲಿ ಗ್ರೇಟರ್ ಸುಧಾರಣೆಗಳನ್ನು ತಂದರೆ ಸಾಕಾಗಿದೆ ಎಂದು ಯದುವೀರ್ ಟೀಕಿಸಿದ್ದಾರೆ. ಕಾಂಗ್ರೆಸ್ ಸರ್ಕಾರವು ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದೆ ವಿಳಂಬ ಧೋರಣೆ ತೋರುತ್ತಿರುವುದು ಎಲ್ಲದ್ದಕ್ಕೂ ಕಾರಣವಾಗಿದೆ. ಸ್ಥಳೀಯ ಪ್ರಜಾಪ್ರಭುತ್ವ ಹಾದಿ ತಪ್ಪಿದ್ದರಿಂದ ಭ್ರಷ್ಟಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ. ಒಟ್ಟಾರೆ ಎಲ್ಲ ಪ್ರಕರಣಗಳಿಗೂ ಕಾಂಗ್ರೆಸ್ ಸರ್ಕಾರವೇ ಸಂಪೂರ್ಣ ಜವಾಬ್ದಾರಿಯಾಗಿದೆ ಎಂದು ಆರೋಪಿಸಿದ್ದಾರೆ.

## ನಗರಪಾಲಿಕೆಗೆ ಲಕ್ಷಾಂತರ ನಷ್ಟ: ಮೂವರು ನೌಕರರು ಅಮಾನತು

10,883, ಅಕ್ಟೋಬರ್‌ನಲ್ಲಿ 42,916, ನವೆಂಬರ್‌ನಲ್ಲಿ 63,282, ಅನಿತಾ ಸೆಪ್ಟೆಂಬರ್‌ನಲ್ಲಿ 83,566, ಅಕ್ಟೋಬರ್‌ನಲ್ಲಿ 36,370 ಹಾಗೂ ನವೆಂಬರ್‌ನಲ್ಲಿ 34,769 ರೂ. ಪಾವತಿಸಿರುವುದು ಬಹಿರಂಗವಾಗಿದೆ.

## ಕಿರುಕುಳ: ವಿಧಾನಸೌಧ ಮುಂದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನ

ದಾಖಲಿಸಿದ್ದಾರೆ. ವೈದ್ಯರ ಪ್ರಕಾರ ಡಾ. ನಾಗೇಂದ್ರ ಸ್ಥಿತಿ ಗಂಭೀರವಾಗಿದ್ದು ಚಿಕಿತ್ಸೆ ಮುಂದುವರಿದಿದೆ. ಅಕ್ರಮ ಬಾಂಗ್ಲಾದೇಶ ವಲಸಿಗರನ್ನು ಗುರುತಿಸಿದ್ದ ಕಾರಣಕ್ಕೆ ಪೊಲೀಸರು ಕಿರುಕುಳ ನೀಡುತ್ತಿದ್ದಾರೆಂದು ಆರೋಪಿಸಿ ಡಾ.ನಾಗೇಂದ್ರ ಅವರು ವಿಧಾನಸೌಧದ ಮುಂದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎನ್ನಲಾಗಿದೆ. ಡಾ.ನಾಗೇಂದ್ರ ಮತ್ತು ಪುನೀತ್ ಕೆರೆಹಳ್ಳಿ ಇಬ್ಬರೂ ನಗರದಲ್ಲಿ ಅಕ್ರಮ ಬಾಂಗ್ಲಾ ನಿವಾಸಿಗಳನ್ನು ಪತ್ತೆಹಚ್ಚಿದ್ದರು. ಈ ಬಗ್ಗೆ ಅಕ್ರಮ ನಿವಾಸಿಗಳ ವಿರುದ್ಧ ದೂರು ನೀಡಿದವರ ವಿರುದ್ಧವೇ ಪ್ರಕರಣ ದಾಖಲಾಗಿತ್ತು. ನಂತರ ಸೂಲದೇವನಹಳ್ಳಿ ಪೊಲೀಸರು ನಿರಂತರ ಕಿರುಕುಳ ನೀಡುತ್ತಿದ್ದ ಕಾರಣ ಮನನೊಂದು ಆತ್ಮಹತ್ಯೆಗೆ ಯತ್ನಿಸಿರುವುದಾಗಿ ತಿಳಿಸಿದ್ದಾರೆ.

## ಸಿಎಂ ಕಾರ್ಯಕ್ರಮದ ಕಟೌಟ್ ಮುರಿದುಬಿದ್ದು ಮೂವರು ಗಂಭೀರ

ಹಾಗೂ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕಾಂಗ್ರೆಸ್‌ನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಜಮೀರ್ ಅಹ್ಮದ್ ಹಾಗೂ ಇತರೆ ಕಾಂಗ್ರೆಸ್ ನಾಯಕರ ಬೃಹತ್ ಕಟೌಟ್ ಅಳವಡಿಸಲಾಗಿತ್ತು. ಕಟೌಟ್‌ಗಳು ಮುರಿದು ಬಿದ್ದು ಅದರ ಕೆಳಗಿದ್ದ ಮೂವರು ಗಂಭೀರ ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ ಒಬ್ಬರು ಮಹಿಳೆಯನ್ನು ಶಾರದಾ ಕ್ಯಾರಕಟ್ಟಿ ಎಂದು ಗುರುತಿಸಲಾಗಿದೆ. ಕಟೌಟ್ ಬೀಳುತ್ತಿದ್ದ ವೇಳೆ ಮಗ ಶಶಿಕಾಂತ್ ತಪ್ಪಿಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

## ಜನಪ್ರತಿನಿಧಿಗಳ ಕರೆ ಸ್ವೀಕಾರ ಕಡ್ಡಾಯ: ಸರ್ಕಾರದ ಆದೇಶ

ರಜನೀಶ್ ಮಹತ್ವದ ಸೂಚನೆ ನೀಡಿದ್ದಾರೆ.ಈ ವಿಚಾರವಾಗಿ ಸುತ್ತೋಲೆ ಹೊರಡಿಸಿರುವ ಅವರು, ಇನ್ನು ಮುಂದೆ ಎಲ್ಲ ಸರ್ಕಾರಿ ಅಧಿಕಾರಿಗಳು ಎಂಎಲ್‌ಎ, ಎಂಎಲ್‌ಸಿಗಳ ದೂರವಾಣಿ ಕರೆಗಳನ್ನು ಸ್ವೀಕರಿಸಲೇಬೇಕು. ಒಂದು ವೇಳೆ ಕರೆ ಬಂದಾಗ ಇತರ ಕೆಲಸಗಳಲ್ಲಿ ಇದ್ದಲ್ಲಿ, ಅವರಿಗೆ ಮರಳಿ ಕರೆ ಮಾಡಿ ಮಾತನಾಡಬೇಕು ಎಂದು ಸೂಚನೆ ನೀಡಿದ್ದಾರೆ.

## 'ಧಮ್ಕಿ' ರಾಜೀವ್ ಗೌಡ ನಾಪತ್ತೆ: ಮನೆ ಮೇಲೆ ಪೊಲೀಸರ ದಾಳಿ

ಕಚೇರಿಗೆ ಬಂದಿದೆ. ಈ ಪತ್ರವನ್ನ ಪಡೆದಿರುವ ಪೊಲೀಸರು ಈಗಾಗಲೇ ಪ್ರಕರಣ ದಾಖಲಿಸಿದ್ದಾರೆ. ಶಿಡ್ಲಘಟ್ಟ ನಗರಸಭಾ ಕಚೇರಿ ಸೇರಿದಂತೆ ಪೌರಾಯುಕ್ತೆ ನಿವಾಸದ ಬಳಿಯೂ ಪೊಲೀಸರ ಗಸ್ತು ಹೆಚ್ಚಿಸಲಾಗಿದೆ.

## 8 ಮಂದಿ ಬಂಧನ

ರುಕ್ಮಿಣಿ ಅವೆನ್ಯೂ ಲೇಔಟ್‌ನ (ಜಿ ಸ್ಕೇರ್) ಸೈಟ್ ಎಂಜಿನಿಯರ್ ರಿಜ್ವಾನ್ ದೂರು ನೀಡಿದ್ದಾರೆ. 2010ರಲ್ಲಿ ಈ ಕಟ್ಟಡ ನಿರ್ಮಾಣ ಮಾಡಿದ್ದು, ಕಟ್ಟಡ ಶಿಥಿಲಗೊಂಡಿತ್ತು. ಬಳ್ಳಾರಿ ಬ್ಯಾನರ್ ಘರ್ಷಣೆ ಮಾಸುವ ಮುನ್ನವೇ ಮತ್ತೊಂದು ಅವಘಡ ಸಂಭವಿಸಿದೆ. ಕಾಂಗ್ರೆಸ್‌ನವರು ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚಿದ್ದಾರೆಂದು ಜನಾರ್ಧನ ರೆಡ್ಡಿ ಆರೋಪಿಸಿದ್ದಾರೆ.

# ದೇವಾಲಯದ ಲೋಕಾರ್ಪಣೆ



ಗುಂಡ್ಲುಪೇಟೆ: ತಾಲ್ಲುಕಿನ ಶೆಟ್ಟಹಳ್ಳಿ( ಆಲತ್ತೂರು) ಗ್ರಾಮದ ಶ್ರೀ ಶನೇಶ್ವರಸ್ವಾಮಿ ನೂತನ ಶಿಲಾದೇವತೆಯ ಪ್ರಾಣಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಹಾಗೂ ದೇವಾಲಯದ ಲೋಕಾರ್ಪಣೆ ಮತ್ತು ಧಾರ್ಮಿಕ ಸಮಾರಂಭ ಮಹೋತ್ಸವ ನೆರವೇರಿಸಲಾಯಿತು, ಸುತ್ತೂರು ಶ್ರೀ ಗಳಾದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿದ್ಯ ವಹಿಸಿದರು.

ನಂತರ ಮಾತನಾಡಿ ನಮ್ಮ ದೇಶ ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ ಸಂಪದ್ಭರಿತ ದೇಶ, ಮುನುಷ್ಯನಿಗೆ ಅಗತ್ಯವಾದ ಗಾಳಿ, ಭೂಮಿ, ನೀರು ಭಗವಂತನ ಕೃಪೆಯಿಂದ ಸಿಕ್ಕಿದ್ದು ಎಂಬ ನಂಬಿಕೆ ಇದೆ ನಮ್ಮ ಜನರ ದಾರ್ಮಿಕ ನಂಬಿಕೆಯು ಅಚಲವಾದದ್ದು ಅದೇ ರೀತಿ ಶೆಟ್ಟಹಳ್ಳಿ ಗ್ರಾಮದಲ್ಲಿ ಇಂದು ಶನೇಶ್ವರ ಸ್ವಾಮಿ ದೇವಸ್ಥಾನ ಲೋಕಾರ್ಪಣೆಯಾಗಿದೆ ಎಂದರು. ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಮಾತನಾಡಿ ಶೆಟ್ಟಹಳ್ಳಿ ಗ್ರಾಮಸ್ಥರ ಧೃಡ ಸಂಕಲ್ಪದಿಂದ ವಿಶಾಲವಾದ ಜಾಗದಲ್ಲಿ ಶನೇಶ್ವರಸ್ವಾಮಿ ದೇವಸ್ಥಾನ ನಿರ್ಮಾಣವಾಗಿದೆ, ಸುತ್ತೂರು ಶ್ರೀ ಗಳು ಆಗಮಿಸಿ ಅಶಿರ್ವಚನ ನೀಡರುವುದು ನಮ್ಮೆಲ್ಲರ ಪುಣ್ಯ ಜೆಎಸ್ ಎಸ್ ಸಂಸ್ಥೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಶ್ರೀ ಗಳ ದೂರದೃಷ್ಟಿ ಮತ್ತು ಶಿಕ್ಷಣದ ಮೇಲೆ ಅವರಿಗೆ ಇರುವ ಕಾಳಜಿ ತೋರಿಸುತ್ತದೆ, ಎಂದರು. ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ಮತ್ತು ಪಡಗೂರು ಅಡವಿ ಮಠದ ಶ್ರೀ ಶಿವಲಿಂಗೇಂದ್ರ ಮಹಾಸ್ವಾಮಿಗಳು ಕಾರ್ಯಕ್ರಮ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಸೋಮಹಳ್ಳಿ ಮಠದ ಸಿದ್ದಮಲ್ಲಸ್ವಾಮಿಗಳು, ಮಾದಾಪಟ್ಟಣ ಮಠದ ತೊಂಟದಾರ್ಯ ಸ್ವಾಮಿಗಳು, ಚಿಕ್ಕತುಪ್ಪೂರು ಮಠದ ಚನ್ನವೀರಸ್ವಾಮಿಗಳು, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್ ಎಸ್ ನಂಜುಂಡಪ್ರಸಾದ್, ಜಿ.ಪಂ ಮಾಜಿ ಉಪಾಧ್ಯಕ್ಷ ಕೆ,ಎಸ್ ಮಹೇಶ್, ಆಲತ್ತೂರು ಜಯರಾಂ, ಶೆಟ್ಟಹಳ್ಳಿ ರಾಮಣ್ಣ ಇದ್ದರು.

# ಪಾಲಿಕೆ ಅಧಿಕಾರಿಗಳ ಅಮಾನತು ಸ್ವಾಗತ



ಮೈಸೂರು :ಮೈಸೂರು ಮಹಾ ನಗರ ಪಾಲಿಕೆಯಲ್ಲಿ ಗೈರು ಹಾಜರಾಗಿರುವ ಪೌರ ಕಾರ್ಮಿಕರಿಗೆ ಹೆಚ್ಚುವರಿ ವೇತನ ಹಣ ಪಾವತಿಸಿ ಕರ್ತವ್ಯ ಲೋಪ ಎಸಗಿರುವ ಆರೋಪದ ಮೇಲೆ ಮೂವರನ್ನು ಅಮಾನತುಗೊಳಿಸಿರುವ ಕ್ರಮವನ್ನು ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಸಂಘ ಸ್ವಾಗತಿಸುತ್ತದೆ ಎಂದು ಜಿಲ್ಲಾಧ್ಯಕ್ಷ ಆರ್ಟಿಸ್ಟ್ ನಾಗರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪಾಲಿಕೆಯ ಆರೋಗ್ಯ ಶಾಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕರಾದ ಕೆ. ಎಲ್.ಸಿ. ಪಾಪಾ, ಎಂ. ಪುಷ್ಪಾವತಿ ಹಾಗೂ ಸಿ.ಎಚ್. ಅನಿತಾ ಅವರೇ ಅಮಾನತುಗೊಂಡವರಾಗಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಂಡುದಕ್ಕಾಗಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ತಿಲಿಸಿ, ಪಾಲಿಕೆಯಲ್ಲಿ ಪೌರ ಕಾರ್ಮಿಕರ ಸ್ಯಾಲರಿ ಸ್ಲಿಪ್ ಪಡೆಯಲು 500 ರೂ. ಪಡೆಯುತ್ತಿದ್ದಾರೆ. ಕಾಯಂ ಪೌರ ಕಾರ್ಮಿಕರು ಮೃತಪಟ್ಟರೆ ಅನುಕಂಪದ ಕೆಲಸ ಪಡೆಯಲು ಲಕ್ಷಗಟ್ಟಲೆ ವಸೂಲಿ ಮಾಡುತ್ತಾರೆ. ನಿವೃತ್ತ ಪೌರ ಕಾರ್ಮಿಕರ ಸೆಟ್ಲ್‌ಮೆಂಟ್‌ಊ ಹಣ ನೀಡಬೇಕು, ಇಎಸ್‌ಐ, ಪಿಎಫ್ ಹಣ ಸರಿಯಾದ ಸಮಯಕ್ಕೆ ಪಾವತಿಸುವುದಿಲ್ಲ. ಈ ರೀತಿಯ ಅನ್ಯಾಯ ನಡೆಯುತ್ತಿದೆ. ಹೀಗಾಗಿ ಈ ಸಮಸ್ಯೆ ಬಗೆಹರಿಸಲು ಅಕ್ರಮ ಎಸಗುವ ಸಿಬ್ಬಂದಿಯನ್ನು ಬೇರೆಡೆಗೆ ವರ್ಗಾಯಿಸಬೇಕೆಂದು ಒತ್ತಾಯಿಸಿದರು. ಗಂಗಣ್ಣ, ಯತಿರಾಜ್, ನಾಗರಾಜು ಎನ್.ಆರ್. ಮೊಹಲ್ಲಾ ಹಾಜರಿದ್ದರು

# ಬುದ್ಧಗಯಾ ವಿಮೋಚನ ಚಳವಳಿಗೂ ಅಂತ್ಯವಿದೆ

## ಬೌದ್ಧ ಚಿಂತಕ, ಹಿರಿಯ ಹೋರಾಟಗಾರ ಬಿ.ಗೋಪಾಲ್ ಹೇಳಿಕೆ



ಭಾರತದಲ್ಲಿ ಮಹಾಬೋಧಿ ಸೊಸೈಟಿಗೆ ಐತಿಹಾಸಿಕ ಹಿನ್ನೆಲೆ ಇದೆ. ಮುಸ್ಲಿಂರಿಗೆ ಮೆಕ್ಕಾ, ಕ್ರಿಶ್ಚಿಯನ್ನರಿಗೆ ವ್ಯಾಟಿಕನ್ ಹಿಂದೂಗಳಿಗೆ ಕಾಶಿ, ವಾರಣಾಸಿ ಇರುವಂತೆ ಬುದ್ಧ ಅನುಯಾಯಿಗಳಿಗೆ ಬುದ್ಧಗಯಾ ಪವಿತ್ರ ಸ್ಥಳವಾಗಿದೆ. ಬುದ್ಧಗಯಾ ಸಂಪೂರ್ಣ ನಿರ್ವಹಣೆ ಬಿಕ್ಕುಗಳಿಗೆ ದೊರೆಯಬೇಕು.

–ಪ್ರೊ.ಗುರುಸಿದ್ದಯ್ಯ

ಮೈಸೂರು: ನವದೆಹಲಿಯಲ್ಲಿ ಬುದ್ಧಗಯಾ ವಿಮೋ ಚನೆ ಐತಿಹಾಸಿಕ ಚಳವಳಿಯಲ್ಲಿ ಬೌದ್ಧ ಅನುಯಾ ಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವ ಹಿಸಬೇಕು. ಬುದ್ಧಗಯಾ ವಿಮೋಚನ ಚಳವಳಿಗೂ ಅಂತ್ಯ ಇದೆ ಎಂದು ಬೌದ್ಧ ಚಿಂತಕ, ಹಿರಿಯ ಹೋರಾಟಗಾರ ಬಿ.ಗೋಪಾಲ್ ಹೇಳಿದರು.

ಮೈಸೂರು ವಿವಿ ಬುದ್ಧ ಬಳಗದ ವತಿಯಿಂದ ಶನಿವಾರ ಇಎಂ ಆರ್‌ಸಿ ಸಭಾಂಗಣದಲ್ಲಿ ಆಯೋಜಿ ಸಿದ್ದ ಬೋದ್‌ಗಯಾ ಬುದ್ಧವಿಹಾರ: ಬಿಕ್ಕಟ್ಟು ಮತ್ತು ಪರಿಹಾರ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಬೌದ್ಧ ಅನುಯಾಯಿಗಳು ದೆಹಲಿ ಚಲೋ ಚಳವಳಿಗೆ ಕೊಡುಗೆ ನೀಡಬೇಕು. ದೆಹಲಿಯಲ್ಲಿ ಶಕ್ತಿ ಪ್ರದರ್ಶನಕ್ಕೆ ಬೆಂಬಲಿಸಬೇಕು. ಆ ಮೂಲಕ ದೇಶದ ಸಂದೇಶ ರವಾನಿಸಬೇಕು. ಆಳುವವರ ಮೇಲೆ ಒತ್ತಡ ತರಬೇಕು ಎಂದು ಹೇಳಿದರು. ರಾಜಕಾರಣಿಗಳು ಬೌದ್ಧ ಸಮ್ಮೇಳನ ಉದ್ಘಾಟಿಸುತ್ತಾರೆ. ಯಾರೋ ಬರೆದುಕೊಟ್ಟಿದ್ದನ್ನು ಓದುತ್ತಾರೆ. ಅದನ್ನು ಕೇಳಿ ಸಾವಿರ ಜನ ಚಪ್ಪಾಳೆ ತಟ್ಟುತ್ತಾರೆ. ಪಂಚಶೀಲತತ್ವಗಳು ಗೊತ್ತಾದ ಮೇಲೂ ತಪ್ಪು ಮಾಡುವುದು ಮೂರ್ಖತನ ಅಲ್ಲವೇ? ಮೀಸಲಾತಿಯಿಂದ ಸರ್ಕಾರಿ ನೌಕರಿ ಪಡೆದ ಪರಿಶಿಷ್ಟ ಜಾತಿಯ ನೌಕರರು ಸಮುದಾಯದ ಆರ್‌ಬಿಐ. ಪ್ರತಿಭೆ, ಹಣ ಕಾಸುವಂತರು. ಅವರು ಇಂದಿನಿಂದ ಸಮುದಾಯದ ಪರವಾಗಿ ಕೆಲಸ ಮಾಡಿದರೆ 100 ವರ್ಷಗಳಲ್ಲಿ ಫಲಿತಾಂಶ ಬರುತ್ತದೆ ಎಂದು ನುಡಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಬಾಬರಿ ಮಸೀದಿಯನ್ನು ರಾಮಮಂದಿರವಾಗಿ ಪರಿವರ್ತಿಸಿದವರ ಜನಸಂಖ್ಯೆ ಎಷ್ಟಿದೆ. ಬುದ್ಧನನ್ನು ಅನುಸರಿಸುವವರ ಸಂಖ್ಯೆ ಎಷ್ಟಿದೆ? ಹಾಗಂತ ಅಕ್ರಮಣ ಮಾಡುವುದು ಬೇಡ. ಕಾನೂನು ಮೂಲಕ ಸುರ್ಪದಿಗೆ ಪಡೆಯಲು ಮುಂದಾಗಬೇಕು. ಒಟ್ಟಾಗಿ ಸಾಗಿದರೆ ಬುದ್ಧದ್ಧಗಯಾ ವಿಮೋಚನೆ ದೊಡ್ಡ ಬಿಕ್ಕಟ್ಟು ಅಲ್ಲ ಎಂದು ಹೇಳಿದರು.

ಬೌದ್ಧ ಬಿಕ್ಕುಗಳು ಅಮೆರಿಕದಲ್ಲಿ ಶಾಂತಿಗಾಗಿ ನಡಿಗೆ ಮಾಡುತ್ತಿದ್ದಾರೆ. ಇಡೀ ಅಮೆರಿಕವೇ ಅವರನ್ನು ಸ್ವಾಗತಿಸಿದೆ. ಗೌರವ ಸಲ್ಲಿಸುತ್ತಿದೆ. ಧಮ್ಮವೂ ಜಗತ್ತಿನಾದ್ಯಂತ ಪ್ರಖರವಾಗಿದೆ. ಸಂಶೋಧನೆ ವಿದ್ಯಾರ್ಥಿಗಳು ಬೌದ್ಧ ಅವಶೇಷಗಳು, ತಥಾಗತ ಗೌತಮ ಬುದ್ಧರ ಕುರಿತಾಗಿ ಹೆಚ್ಚು ಸಂಶೋಧನೆ ಮಾಡಬೇಕು ಎಂದು ಸಲಹೆ ನೀಡಿದರು. ಕೊಳ್ಳೇಗಾಲ ಜೇತವನದ ಮನೋರಖ್ಖಿತ ಭಂತೇಜಿ ಮಾತನಾಡಿ, ಮೀಸಲಾತಿ ಕ್ಷೇತ್ರದಿಂದ ತಮ್ಮ ಜನಗಳ ಕಷ್ಟ ಕೇಳದ, ಸರಿಯಾಗಿ ಕೆಲಸ ಮಾಡದವನನ್ನು ಕೆಳಕ್ಕೆ ಇಳಿಸಬೇಕು. ಮೈಸೂರು ವಿವಿಗೆ ಪ್ರಾಧ್ಯಾಪಕರನ್ನು ನೇಮಕ ಮಾಡದೇ ನಿಸ್ತೇಜವಾಗಿದೆ. ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನೇಮಕ ಮಾಡುತ್ತಿಲ್ಲ. ಅತಿಥಿ ಉಪನ್ಯಾಸಕರು ಅರೆಹೊಟ್ಟೆಯಲ್ಲಿ ಪಾಠ ಮಾಡಬೇಕಾದ ಸ್ಥಿತಿ ಇದೆ. ಹೀಗಾದರೆ ಜ್ಞಾನೋದಯ ಪಡೆಯಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಮೈಸೂರು ವಿವಿ ಡೀನ್ ಪ್ರೊ.ಗುರುಸಿದ್ದಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಬುದ್ಧಗಯಾದಿಂದ ಬಿಹಾರ ಸರ್ಕಾರಕ್ಕೆ ವಾರ್ಷಿಕ 450 ಕೋಟಿ ರೂ. ಆದಾಯ ಇದೆ. ಪ್ರವಾಸೋದ್ಯಮ ಬೆಳೆದಿದೆ. ಬುದ್ಧಗಯಾದಲ್ಲಿ ನಾಲ್ವರು ಹಿಂದುಗಳು ನಾಲ್ವರು ಬೌದ್ಧ ಬಿಕ್ಕುಗಳ ಸಮಿತಿ ಇದೆ. ಸಮಿತಿ ಅಧ್ಯಕ್ಷ ಜಿಲ್ಲಾಧಿಕಾರಿಯಾದರೆ ಹಿಂದುಗಳ ಕೈ ಮೇಲಾಗುತ್ತದೆ ಎಂಬ ಕಾರಣಕ್ಕೆ ಸಮಸ್ಯೆ ಉದ್ಭವಾಗಿದೆ ಎಂದರು.

## ಶಿಕ್ಷಕ ಹೆಚ್.ಜಿ.ಅನಂತುಗೆ ಹೃದಯ ಸ್ಪರ್ಷಿ ಬೀಳ್ಕೊಡುಗೆ

ಕೆ.ಆರ್.ಪೇಟೆ,: ತಾಲ್ಲೂಕಿನ ಅಣ್ಣೇಚಾಕನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯ ಶಿಕ್ಷಕರಾಗಿ ಹಲವು ವರ್ಷಗಳ ಅತ್ಯುತ್ತಮ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಹೆಚ್.ಜಿ.ಅನಂತು ಅವರನ್ನು ಅಣ್ಣೇಚಾಕನಹಳ್ಳಿ ಎಸ್.ಡಿ.ಎಂ.ಸಿ ವತಿಯಿಂದ ಸನ್ಮಾನಿಸಿ ಗೌರವಿಸುವ ಮೂಲಕ ಹೃದಯ ಸ್ಪರ್ಷಿ ಬೀಳ್ಕೊಡುಗೆ ನೀಡಲಾಯಿತು.

ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷ ಎ. ಎನ್.ಯೋಗೇಶ್ ಅವರು ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಳಿಕ ಮಾತನಾಡಿದ ಎ.ಎನ್.ಯೋಗೇಶ್ ನಮ್ಮ ಗ್ರಾಮದ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಸುಮಾರು 3ವರ್ಷಗಳ ಕಾಲ ಅತ್ಯುತ್ತಮವಾಗಿ ಸೇವೆ ಸಲ್ಲಿಸುವ ಮೂಲಕ ಶಾಲೆಯ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿರುವ ಹೆಚ್. ಜಿ.ಅನಂತು ಮಾಸ್ಟರ್ ಅವರ ಸೇವಾವಧಿಯಲ್ಲಿ ಅವಧಿಯಲ್ಲಿ ನಮ್ಮ ಗ್ರಾಮದ ಮಕ್ಕಳ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಿದ್ದರು. ಸರ್ಕಾರಿ ನೌಕರರಿಗೆ ವರ್ಗಾವಣೆ ಎಂಬುದು ಅನಿವಾರ್ಯವಾಗಿರುತ್ತದೆ. ಅನಂತು ಮಾಸ್ಟರ್ ಅವರು ನಮ್ಮ ಶಾಲೆಗೆ ಮತ್ತೊಮ್ಮೆ ಬರುವಂತಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಚಂದ್ರಹಾಸೇಗೌಡ, ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಹರೀಶ್, ಸದಸ್ಯರಾದ ಜಗದೀಶ್, ಶಂಕರ್, ಪ್ರಕಾಶ್, ಸತೀಶ್, ಅಂಗಡಿ ಯೋಗೇಶ್, ಆಶಾ, ಮಹಾದೇವಿ, ಸುನಿತಾ, ಹೇಮ, ಶೋಭ, ಪ್ರಭಾರಿ ಮುಖ್ಯ ಶಿಕ್ಷಕ ಪ್ರಕಾಶ್, ಶಿಕ್ಷಕ ಕುಮಾರ್, ರಾಜು, ಮಮತ, ಅಂಗನವಾಡಿ ಶಿಕ್ಷಕರಾದ ಸುಧಾಮಣಿ, ಸಾಕಮ್ಮ, ಅಕ್ಷರ ದಾಸೋಹ ಸಿಬ್ಬಂದಿ ಯಶೋದಮ್ಮ, ಚಂದ್ರಮ್ಮ ಸೇರಿದಂತೆ ಶಾಲಾ ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.



# ಪತ್ರಕರ್ತರ ಭವನ ನಿರ್ಮಾಣಕ್ಕೆ ಶೀಘ್ರದಲ್ಲೆ ಅನುದಾನ: ಶಾಸಕ



ಗುಂಡ್ಲುಪೇಟೆ: ಪತ್ರಕರ್ತರ ಭವನ ನಿರ್ಮಾಣಕ್ಕೆ ಶೀಘ್ರದಲ್ಲೆ ಅನುದಾನ ನೀಡುವುದಾಗಿ ಶಾಸಕ ಎಚ್. ಎಂ.ಗಣೇಶಪ್ರಸಾದ್ ಭರವಸೆ ನೀಡಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದ ಜ್ಞಾನ ಭವನದಲ್ಲಿ ನಡೆದ ಗುಂಡ್ಲುಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ 2025–28ನೇ ಸಾಲಿನ ನೂತನ 'ಪದಾಧಿಕಾರಿಗಳ ಪದಗ್ರಹಣ' ಹಾಗೂ 'ಕ್ಯಾಲೆಂಡರ್ ಬಿಡುಗಡೆ' ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಇದರಿಂದ ಒಳ್ಳೆಯ ಹೆಸರು ಬರುತ್ತದೆ ಎಂದು ತಿಳಿಸಿದರು.

ಸ್ಥಳೀಯ ಸಂಸ್ಥೆ ಚುನಾವಣೆಯಂತೆ ಸಾಕಷ್ಟು ಕಾವು ಪಡೆದು ಜಿಲ್ಲಾ ಮತ್ತು ತಾಲೂಕು ಪತ್ರಕರ್ತರ ಚುನಾವಣೆಯು ಕೂಡ ನಡೆದಿದೆ. ಜಿಲ್ಲಾ ಸಂಘದವರ ಮನವಿ ಮೇರೆಗೆ ಪತ್ರಕರ್ತರ ಕ್ಷೇಮಾಭಿವೃದ್ಧಿ ಮತ್ತು ದತ್ತಿ ನಿಧಿ ಸ್ಥಾಪನೆಗೆ ಈಗಾಗಲೇ ವೈಯಕ್ತಿಕವಾಗಿ ಒಂದು ಲಕ್ಷ ರೂ. ನೀಡಿದ್ದು, ತಾಲೂಕಿನ ಹಿತಕಾಯಲು ಬದ್ದನಾಗಿದ್ದೇನೆ. ಎಂದು ಹೇಳಿದರು.

ಚಾ.ನಗರ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಮಾತನಾಡಿ, ಪತ್ರಕರ್ತರ ಭವನಕ್ಕೆ ಈಗಾಗಲೇ ಜಾಗ ಮಂಜೂರಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಶಾಸಕ ಎಚ್.ಎಂ.ಗಣೇಶಪ್ರಸಾದ್ ಅನುದಾನ ನೀಡಬೇಕು. ಜೊತೆಗೆ ಪತ್ರಕರ್ತಕರ ಸಂಘದ ಚಟುವಟಿಕೆ ನಡೆಸಲು ತಾತ್ಕಾಲಿಕ ಕೊಠಡಿ ಕೊಡಬೇಕು. ಕ್ಷೇಮಾಭಿವೃದ್ಧಿ ಸ್ಥಾಪನೆಗೆ ಸಹಕಾರ ನೀಡಿ ಪತ್ರಕರ್ತರ ಹಿತ ಕಾಯಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ಪತ್ರಿಕೋದ್ಯಮ ಸವಾಲಿನ ಕೆಲಸ. ಪತ್ರಕರ್ತರನ್ನು ಪರ–ವಿರೋಧವಾಗಿ ಬರೆಯುತ್ತಾರೆ ಎಂದು ರಾಜಕಾರಣಿಗಳು, ಮುಖಂಡರು ಹೊಗಳಿಕೆ–ತೆಗಳಿಗೆ ಮಾತುಗಳನ್ನಾಡುತ್ತಾರೆ. ಇದನ್ನು ಮೀರಿ ಘಟನಾವಳಿಗಳಿಗೆ ಅನುಗುಣವಾಗಿ ವಿಶ್ಲೇಷಣೆ ಮಾಡಿ ಬರೆಯುವ ಕೆಲಸ ಉತ್ತಮವಾಗಿದೆ. ರಾಜಕೀಯವಷ್ಟೇ ಅಲ್ಲದೆ ಎಲ್ಲಾ ರಂಗದಲ್ಲಿಯೂ ನೈಜತೆಯಿಂದ ಸುದ್ದಿಗಳನ್ನು ಜನರಿಗೆ ತಿಳಿಸುವ ಕೆಲಸಗಳನ್ನು ಪತ್ರಕರ್ತರು ಮಾಡುತ್ತಿದ್ದಾರೆ ಎಂದರು.

ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಚಾ.ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಪ್ರಮಾಣ ವಚನ ಬೋಧಿಸಿದರು. ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಶಶಿಧರ್ ಪಿ.ದೀಪು, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಡಾ.ನವೀನ್ ಮೌರ್ಯ ಹಾಗೂ ಕ್ಯಾಲೆಂಡರ್ ಪ್ರಾಯೋಜಕರಾದ ಹಿಂದೂಸ್ಥಾನ ಎಂಟರ್ ಪ್ರೈಸಸ್ ಮಾಲೀಕರಾದ ಅಬ್ದುಲ್ ಅವರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ಎಸ್. ತನ್ಮಯ್, ರಾಜ್ಯ ಸಮಿತಿ ಸದಸ್ಯ ಸಿ.ಮಹೇಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಬಸವರಾಜು ಎಸ್.ಹಂಗಳ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಚಂದ್ರು, ಎಪಿಎಂಸಿ ಅಧ್ಯಕ್ಷ ರಂಗೈಗೂಪುರ ನಾಗರಾಜು, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷ ಕಬ್ಬಹಳ್ಳಿ ಮಹೇಶ್, ಜಿಲ್ಲಾ ನಿರ್ದೇಶಕರಾದ ಮಡಹಳ್ಳಿ ಮಹೇಶ್, ಎಂ. ಮಲ್ಲೇಶ್, ತಾಲೂಕು ಉಪಾಧ್ಯಕ್ಷ ಕೃಷ್ಣ ಗೋಪಾಲ್ ಹಾಲಹಳ್ಳಿ, ರಾಜೇಶ್ ಭಟ್ಟ, ಕಾರ್ಯದರ್ಶಿ ಜನಾರ್ಧನ್, ಶೇಖರ್ ಆರ್.ಬೇಗೂರು, ಖಜಾಂಚಿ ಮಣಿಕಂಠ, ನಿರ್ದೇಶಕರಾದ ವೆಂಕಟೇಶ್.ಜಿ, ಮಂಜುನಾಥ್, ಚಂದ್ರಶೇಖರ, ಕಾಂತರಾಜು, ಮಲ್ಲೇಶ್ ವೀರನಪುರ, ಸದಸ್ಯರಾದ ಸೋಮಶೇಖರ್, ರಾಜಗೋಪಾಲ್ ಹಾಲಹಳ್ಳಿ, ಮಹೇಂದ್ರ ಹಸಗೂಲಿ, ಶಿವಕುಮಾರ್ ದೇವರಹಳ್ಳಿ, ನಿಂಗಪ್ಪ ಸೇರಿದಂತೆ ವಿವಿಧ ಸಂಘಟನೆ ಮುಖಂಡರು ಹಾಜರಿದ್ದರು.

ಮೊದಲ ಪುಟದಿಂದ

## ಹುಸಿ ಬಾಂಬ್ ಬೆದರಿಕೆ

ಸಂದೇಶ ಬಂದಿದೆ. ಇದರಿಂದ ಆತಂಕಗೊಂಡ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳ ತಪಾಸಣೆ ನಡೆಸಿದರು. ತಪಾಸಣೆ ವೇಳೆ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲದ ಕಾರಣ ಇದು ಹುಸಿ ಬಾಂಬ್ ಬೆದರಿಕೆ ಕರೆ ಎಂದು ತೀರ್ಮಾನಿಸಲಾಯಿತು.

## ತೆರಿಗೆ ಬಾಕಿ: ಶಾಲೆಯ ಮುಂದೆ ಪುರಸಭೆ ಮುಖ್ಯಾಧಿಕಾರಿ ಧರಣಿ

ರೋಟರಿ ಸಂಸ್ಥೆ ಅಧ್ಯಕ್ಷ ಹಬಿ ಉಲ್ಲಾ ಖಾನ್ ಮಾತನಾಡಿ, ಸಂಸ್ಥೆಗೆ ಯಾವುದೇ ನೋಟಿಸ್ ನೀಡಲ್ಲ. ಬಂದಿದ್ದರೆ ಆಡಳಿತ ಮಂಡಳಿ ಜೊತೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಹೇಳಿದರು.

## ಅಬಕಾರಿ ಸಚಿವರಿಗೆ 'ಕುರ್ಚಿ ಕಂಟಕ'

ನಡೆಸಿ ಬಂದು ಲಂಚದ ಹಣ 1.50 ಕೋಟಿಗೆ ಡಿಮ್ಯಾಂಡ್ ಮಾಡಿದ್ದರು ಎಂದು ಲೋಕಾಯುಕ್ತಕ್ಕೆ ದೂರು ನೀಡಲಾಗಿತ್ತು.

ಕ್ರಮ ಜರುಗಿಸದಿದ್ದರೆ ಹೋರಾಟದ ಎಚ್ಚರಿಕೆ

# ಅಕ್ರಮ ರೆಸಾರ್ಟ್‌ಗಳ ವಿರುದ್ಧ ಫೆ.25ರೊಳಗೆ ಕ್ರಮವಾಗಲಿ



ಮೈಸೂರು: ಕಬಿನಿ ಹಿನ್ನೀರಿನ ಸುತ್ತಮುತ್ತಲೂ ಅನಧಿಕೃತವಾಗಿ ನಿರ್ಮಾಣಗೊಂಡಿರುವ ರೆಸಾರ್ಟ್ ವಿರುದ್ಧ ಫೆ.25ರೊಳಗೆ ಕ್ರಮ ಜರುಗಿಸದಿದ್ದರೆ ರೈತಪರ, ದಲಿತ ಪರ, ಕನ್ನಡ ಪರ, ಕಾರ್ಮಿಕ ಪರ ಸೇರಿದಂತೆ ವಿವಿಧ ಸಂಘಟನೆಗಳ ವತಿಯಿಂದ ಅನಿರ್ದಿಷ್ಟಾವಧಿ ಹೋರಾಟ ಮಾಡಲಾಗುತ್ತದೆ ಎಂದು ಸೇವ್ ಕಬಿನಿ ಸಮಿತಿ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಸದಸ್ಯ ವಕೀಲ ರವಿಕುಮಾರ್ ಈ ವಿಷಯ ತಿಳಿಸಿ, ಕಳೆದ ಒಂದು ವರ್ಷದಿಂದ ಅಕ್ರಮ ರೆಸಾರ್ಟ್‌ಗಳ ವಿರುದ್ಧ ಸಾಕಷ್ಟು ಹೋರಾಟಗಳನ್ನು ಮಾಡಿಕೊಂಡು ಬಂದಿದ್ದು, ಜೊತೆಗೆ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಅಧಿಕಾರಿಗಳಿಗೂ ನೀಡಲಾಗಿದೆ. ಆದರೂ ಏನು ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಬಿನಿ ಹಿನ್ನೀರು ಪ್ರದೇಶ, ಬಂಡೀಪುರ, ನಾಗರಹೊಳೆ ಅರಣ್ಯ ಹುಲಿ ಸಂರಕ್ಷಿತ ಪ್ರದೇಶವಾಗಿದ್ದು, ಸುತ್ತಮುತ್ತಲೂ ಸೂಕ್ಷ್ಮ ವಲಯ ಇದೆ. ಆದರೆ ಇಲ್ಲಿ ರೆಸಾರ್ಟ್ ಹಾಗೂ ಸಫಾರಿಗಳಿಂದಾಗಿ ಪರಿಸರಕ್ಕೆ ಹಾನಿಯಾಗುತ್ತಿದೆ. ವನ್ಯಜೀವಿ–ಮಾನವ ಸಂಘರ್ಷಕ್ಕೆ ಇವು ಕಾರಣವಾಗಿವೆ. ಇಡೀ ರಾಜ್ಯದ ಮನೆಗಳಿಗೆ ಉಚಿತ ವಿದ್ಯುತ್, ಮಹಿಳೆಯರಿಗೆ ಗೃಹಲಕ್ಷ್ಮಿ, ಉಚಿತ ಸಾರಿಗೆ ಭಾಗ್ಯ ನೀಡಿರುವ ಸರ್ಕಾರ ಸಫಾರಿಯಿಂದ ಬರುವ ಚಿಲ್ಲರೆ ಕಾಸಿಗೆ ಮರುಳಾಗುವುದು ಸರಿಯಲ್ಲ. ಹುಲಿ ಯೋಜನೆ ಇರುವ ಪ್ರದೇಶದಲ್ಲಿ ಸಫಾರಿಗೆ ಅನುಮತಿಯಿಲ್ಲ ಎಂದು 2025 ರ ನ. 17 ರಂದಿನ ಸುಪ್ರೀಂಕೋರ್ಟ್ ಗೋದಾವರ್ಮನ್ ಪ್ರಕರಣದ ತೀರ್ಪು ಹೇಳಿದೆ. ಆದರೂ ಇಲ್ಲಿ ಸಫಾರಿಗೆ ಅವಕಾಶ ನೀಡಿ ಪ್ರಾಣಿಗಳ ನೆಮ್ಮದಿಗೆ ಭಂಗ ತರಲಾಗಿದೆ. ಅರಣ್ಯದ ಒಳಗೆ ದೊಡ್ಡ ವಾಹನಗಳ ಸಂಚಾರಕ್ಕೆ ಅವಕಾಶವಿಲ್ಲ ಎಂಬುದನ್ನು ಉಲ್ಲಂಘಿಸಲಾಗಿದೆ. ಸೂಕ್ಷ್ಮ ವಲಯದಲ್ಲಿ ಕಾಂಕ್ರಿಟ್ ಕಟ್ಟಡ, ಬಹು ಮಹಡಿ ಕಟ್ಟಡಗಳಿವೆ, ಶಬ್ದ ಮಾಲಿನ್ಯ, ಜಲ ಮಾಲಿನ್ಯದಿಂದ ಪರಿಸರ ಹಾಳು ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಬೆರಳೆಣಿಕೆಯ ಬಂಡವಾಳ ಶಾಹಿಗಳ ರೂಪದಲ್ಲಿರುವ ಭೂಗಳ್ಳರು, ಅರಣ್ಯ ಭಕ್ಷಕರು ನಾಡಿನ ಇಂದಿನ ಹಾಗೂ ಮುಂದಿನ ಪೀಳಿಗೆಯ ಭವಿಷ್ಯಕ್ಕಿಂತ ಹೆಚ್ಚಾದರೇ ಎಂದು ಪ್ರಶ್ನಿಸಿ, ಪಾರದರ್ಶಕವಲ್ಲದ, ಮೂಲ ಕರಡು ಹಾಗೂ ನಕ್ಷೆಯ ಆಧಾರದ ಮೇಲೆ ಜಂಟಿ ಸ್ಥಳ ಪರಿಶೀಲನೆ ಹಾಗೂ ಸರ್ವೆ ಮಾಡದೇ ವಾಣಿಜ್ಯ ವಹಿವಾಟು ಮಾಡುವವರು ಕೊಟ್ಟಿರುವ ದಾಖಲೆ ಮೇಳೆ ಸಿದ್ಧಪಡಿಸಿರುವ ಈ ಕುರಿತ ವರದಿಯನ್ನು ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಹೀಗಾಗಿ ಪಾರದರ್ಶಕವಾದ ಜಂಟಿ ಸಮಿತಿ ರಚಿಸಬೇಕು, ಅದೇ ಸಮಿತಿ ಸ್ಥಳ ಪರಿಶೀಲನೆ ನಡೆಸಬೇಕು, ಕಬಿನಿ ಜಲಾಶಯ ಹಿನ್ನೀರಿನ ಸರ್ವೆ, ಗೋದಾವರ್ಮನ್ ತೀರ್ಪಿನ ಅಡಿಯಲ್ಲಿ ಇಡೀ ರಾಜ್ಯದ ಕೋರ್ ಅರಣ್ಯ, ಬಫರ್ ವಲಯ ಮತ್ತು ಪರಿಸರ ಸೂಕ್ಷ್ಮ ವಲಯ ಗುರುತು ಮಾಡಬೇಕು. ಸರ್ಕಾರದ ಉನ್ನತ ಅಧಿಕಾರಿಗಳು, ಜಿಲ್ಲಾಡಳಿತದ ಅಧಿಕಾರಿಗಳು, ಸೇವ್ ಕಬಿನಿ ತಂಡದ ಪ್ರತಿನಿಧಿಗಳು, ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು, ಅರಣ್ಯ, ಪರಿಸರ ಮತ್ತು ನೀರಾವರಿ ಇಲಾಖೆ ತಜ್ಞತೆ ಹೊಂದಿರುವವರು ಈ ಸಮಿತಿಯಲಿರಬೇಕು. ಇವನ್ನು ಫೆ.25 ರೊಳಗೆ ಕಾರ್ಯರೂಪಕ್ಕೆ ತರದಿದ್ದರೆ ಅಂದಿನಿಂದ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಹೊನ್ನೂರು ಪ್ರಕಾಶ್, ಮಂಜುಕಿರಣ್, ಎಂ. ಮಂಜುನಾಥ್, ಭಾನುಮೋಹನ್, ಅರವಿಂದ ಶರ್ಮ ಉಪಸ್ಥಿತರಿದ್ದರು.

# ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳು

ಕೆ.ಆರ್.ಪೇಟೆ,ಮಂಡ್ಯದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಮತ್ತು ನೌಕರರ ಜಿಲ್ಲಾ ಮಟ್ಟದ ಕ್ರೀಡಾ ಕೂಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ತಾಲ್ಲೂಕಿನ ಆರ್.ಡಿ.ಪಿ.ಆರ್ ನೌಕರರು ಭಾಗವಹಿಸಿ

ಕೆ.ಆರ್.ಪೇಟೆ ತಾಲ್ಲೂಕಿಗೆ ಅತಿಹೆಚ್ಚು ಬಹು ಮಾನಗಳನ್ನು ಪಡೆದ ಹಿನ್ನೆಲೆಯಲ್ಲಿ ತಾಲ್ಲೂಕು ಜಯ ಕರ್ನಾಟಕ ಸಂಘಟನೆ ಮಹಿಳಾ ಘಟಕ ಹಾಗೂ ಪಟ್ಟಣದ ಶ್ರೀ ಚಾಮುಂಡೇಶ್ವರಿ ರಸ್ತೆ ಬದಿಯ ವ್ಯಾಪಾರಿಗಳ ಸಂಘದ ವತಿಯಿಂದ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಸುಷ್ಮಾ ರವರಿಗೆ ಬಾಗಿನ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಮಾತನಾಡಿದ ಕೆ.ಸುಷ್ಮಾ ಅವರು ನಮ್ಮ ಆರ್.ಡಿ.ಪಿ.ಆರ್. ಇಲಾಖೆಯ ನೌಕರರು ಪರಿಶ್ರಮ ವಹಿಸಿ ಕ್ರೀಡಾ ಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗ ವಹಿಸಿ ಹೆಚ್ಚು ಬಹುಮಾನಗಳನ್ನು ಪಡೆದುಕೊಂಡಿ ರುವುದು ತಾಲ್ಲೂಕಿಗೆ ಹೆಮ್ಮೆ ತರುವ ವಿಚಾರವಾಗಿದೆ. ನಮ್ಮ ಪಂಚಾಯತ್ ರಾಜ್ ಇಲಾಖೆಯ



ನೌಕರರು, ಪಿಡಿಓಗಳು, ಕಾರ್ಯದರ್ಶಿಗಳು ಇದೇ ರೀತಿ ಗ್ರಾಮ ಪಂಚಾಯಿತಿಗಳಲ್ಲಿ ಉತ್ತಮ ಸಾಧನೆ ಮಾಡಿದರೆ ಇದರಿಂದ ಇನ್ನೂ ಹೆಚ್ಚಿನ ಗೌರವ ಸಿಗುತ್ತದೆ ಎಂದು ಇಓ ಸುಷ್ಮಾ ಅವರು ಹೇಳಿದರು. ನಮ್ಮ ಇಲಾಖೆಯ ಸಾಧನೆಯನ್ನು ಗಮನಿಸಿ ಪಟ್ಟಣದ ವಿವಿಧ ಸಂಘಟನೆಗಳ ಮಹಿಳಾ ಪದಾಧಿಕಾರಿಗಳು ನನಗೆ ಭಾಗೀನ ಅರ್ಪಿಸಿ ಸನ್ಮಾನಿಸಿರುವುದು ನನಗೆ ತವರಿಗೆ ಸನ್ಮಾನ ಸಿಕ್ಕಂತಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಜಯ ಕರ್ನಾಟಕ ಸಂಘಟನೆಯ ಮಹಿಳಾ ಅಧ್ಯಕ್ಷೆ ಜಯ ಲಕ್ಷ್ಮಮ್ಮ, ರಾಜಮ್ಮ, ಗೌರಮ್ಮ. ಶ್ರೀ ಚಾಮುಂಡೇಶ್ವರಿ ರಸ್ತೆ ಬದಿಯ ವ್ಯಾಪಾರಿಗಳು ಸಂಘದ ಮಹಿಳಾ ಅಧ್ಯಕ್ಷೆ ರತ್ನಮ್ಮ ಪ್ರಧಾನ ಕಾರ್ಯದರ್ಶಿ ದ್ರಾಕ್ಷಾಯಿಣಿ. ಪದಾಧಿಕಾರಿಗಳಾದ ಅನು, ಮಂಜುಳಾಶಿವರಾಜು, ಪುಟ್ಟಮ್ಮ, ಚೈತ್ರ, ಗೌರಿ, ಉಪಸ್ಥಿತರಿದ್ದರು.

# ಕನ್ನಡತನ ಬೆಳೆಸಲು ಕನ್ನಡಿಗರು ಸಂಘಟಿತರಾಗಬೇಕು

ಚಾಮರಾಜನಗರ: ಕನ್ನಡತನ ಬೆಳೆಸಲು ಕನ್ನಡಿಗರು ಒಗ್ಗಟ್ಟಾಗಿ ಸೇರಬೇಕು ಎಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ಕೆರೆ ಚಳುವಳಿ ರಮೇಶಗೌಡ ಕರೆ ನೀಡಿದರು

ನಗರದ ರೋಟರಿ ಭವನದಲ್ಲಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ವತಿಯಿಂದ ವೇದಿಕೆಯ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಣೆ ಮತ್ತು ಸಮಾಜಮುಖಿ ಚಿಂತಕರಿಗೆ ಸನ್ಮಾನ, ಗಿಡನೆಟ್ಟು ಬರಅಟ್ಟು ಘೋಷಣೆಯೊಂದಿಗೆ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕನವರ ನೆನಪಿಗಾಗಿ ಗಿಡ ಹಂಚಿಕ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಕನ್ನಡ ಮೇಲೆ ಹೊರ ರಾಜ್ಯದಿಂದ ಬಂದ ಅನ್ಯಭಾಷಿಕರು ಪ್ರತಿದಿನ ದಾಳಿ ಮಾಡುತ್ತಿದ್ದಾರೆ. ಕನ್ನಡಿಗರು ಒಗ್ಗಟಾಗಿ ಸೇರಿ ಕನ್ನಡ ನಾಡು, ನುಡಿ ರಕ್ಷಣೆ ಮಾಡಬೇಕಾಗಿದೆ. ಕನ್ನಡದ ಶ್ರೀಮಂತಿಕೆಗೆ, ಕನ್ನಡದ ಹಿರಿಮೆಗೆ, ಕನ್ನಡದ ಗರಿಮೆಗೆ, ಕನ್ನಡತನ ಬೆಳೆಸಲು ನಾವೆಲ್ಲರೂ ಒಗ್ಗಟಾಗ



ಬೇಕಿದೆ ಎಂದರು. ರಾಷ್ಟ್ರಕವಿ ಕುವೆಂಪು, ಡಾ. ರಾಜ್‌ಕುಮಾರ್ ಹಾಗೂ ಕನ್ನಡ ಚಳವಳಿಗಾರ ವಾಟಾಳ್‌ನಾಗರಾಜ್ ಅವರು ಕನ್ನಡ ಹೋರಾಟಗಾರರಿಗೆ ಪ್ರೇರಣೆಯಾಗಿದ್ದಾರೆ. ಕಸ್ತೂರಿ ಕರ್ನಾಟಕ ಜನಪರ ವೇದಿಕೆಯು ರಾಜ್ಯದಲ್ಲಿ ಕಳೆದ 15 ವರ್ಷಗಳಿಂದ ನಾಡು, ನುಡಿ ಉಳಿವಿಗಾಗಿ 25 ಕ್ಕೂ ಹೆಚ್ಚು ಪಾದಾಯಾತ್ರೆಗಳು, 5 ಸಾವಿರ ಹೋರಾಟಗಳು, ಅನೇಕ ಬಾರಿ ಜೈಲುವಾಸ ಅನುಭವಿಸಲಾಗಿದೆ ಎಂದರು.

ಕುವೆಂಪು ಅವರು ತಮ್ಮ ಬರಹಗಳ ಮೂಲಕ ಕನ್ನಡಿಗರನ್ನು ಎದ್ದೇಳಿಸಿದರೆ ಡಾ.ರಾಜ್‌ಕುಮಾರ್ ಅವರು ತಮ್ಮ ಸಿನಿಮಾಗಳು, ಹಾಡಿನ ಮೂಲಕ ಕನ್ನಡಪರ ಹೋರಾಟಗಾರನ್ನು ಹುಟ್ಟುಹಾಕಿದರು. ವಾಟಾಳ್‌ನಾಗರಾಜ್ ತಮ್ಮ ಕನ್ನಡಪರ ವಿನೂತನ ಚಳವಳಿ ಮೂಲಕ ಕನ್ನಡ ಹೋರಾಟಗಾರರಿಗೆ ಶಕ್ತಿ ತುಂಬಿದ್ದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ಮಲ್ಲು ಯರಗಂಬಳ್ಳಿ ಮಾತನಾಡಿ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ಕೆರೆ ಚಳುವಳಿಗಾರ ರಮೇಶ್ ಗೌಡ ಅವರ ಮಾರ್ಗದರ್ಶನದಲ್ಲಿ ಗಡಿಜಿಲ್ಲೆಯಾದ ಚಾಮರಾಜನಗರದಲ್ಲೂ ನಾಡು,ನುಡಿ,ಜಲ ಸಂರಕ್ಷಣೆ ಗಾಗಿ ಹೋರಾಟ ಮಾಡಿಕೊಂಡು ಬರಲಾಗಿದ್ದು, ಮುಂದಿನ ದಿನಗಳಲ್ಲಿ ಅವರ ಮಾರ್ಗದರ್ಶನ ದಲ್ಲಿ ಸಂಘಟನೆಯನ್ನು ಇನ್ನೂ ಸದೃಡವಾಗಿ ಕಟ್ಟಿ ಹೋರಾಟ ಮಾಡಲಾಗುವುದು ಎಂದರು.

**ಸನ್ಮಾನ**

ರಾಷ್ಟ್ರೀಯ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ವಿಜೇತರಾದ ಚಂದನ್ ಕುಮಾರ್, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ, ಪ್ರಗತಿಪರ ರೈತ ಲಿಂಗರಾಜು ,ಯುವಸೇನೆ ಕರ್ನಾಟಕ ಸೇನೆ ಅಧ್ಯಕ್ಷ ನಮ್ಮನೆ ಪ್ರಶಾಂತ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಉಪಾಧ್ಯಕ್ಷ ರಂಜಿತ್ ಗೌಡ, ಎಚ್.ಡಿ. ಕೋಟೆ ಜಿಲ್ಲಾಧ್ಯಕ್ಷ ಮಂಜು, ಉಪಾಧ್ಯಕ್ಷ ರಾಜೇಶ್, ಜಾನಪದ ಗಾಯಕ ಸ್ವಾಮಿ, ಜಿಲ್ಲಾಧ್ಯಕ್ಷ ಮಲ್ಲು ಯರಗಂಬಳ್ಳಿ, ಉಪಾಧ್ಯಕ್ಷ ಶಬಾಜ್ ಷರೀಫ್, ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ಮಹದೇವ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಮೋಹನ್ ಕುಮಾರ್, ಜಿಲ್ಲಾ ಸಹ ಕಾರ್ಯದರ್ಶಿ ಶಿವಮೂರ್ತಿ, ತಾಲೂಕು ಅಧ್ಯಕ್ಷ ಎಂ.ನಿಂಗಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಪ್ರೇಮ,ಮಲ್ಲು, ಸಹ ಕಾರ್ಯದರ್ಶಿ ನಳಿನ್ ಕುಮಾರಿ, ಪ್ರೇಮಲತಾ, ಲೀಲಾವತಿ, ರಾಜೇಶ್ವರಿ, ನಾಗರಾಜು, ಸುಂದ್ರನಾಯಕ,ಮಹೇಶ್ ಹಾಜರಿದ್ದರು.

# ಕೈ ನಡೆಗೆ ಕಮಲದ ಖಂಡನೆ

## ರಾಜಪಾಲರಿಗೆ ಅವಮಾನ ಖಂಡಿಸಿ ಪ್ರತಿಭಟನೆ

ಮೈಸೂರು: ಕಾಂಗ್ರೆಸ್ ಸರ್ಕಾರದ ಶಾಸಕ, ವಿಧಾನ ಪರಿಷತ್ ಸದಸ್ಯರು ರಾಜ್ಯಪಾಲರಿಗೆ ಗೌರವ ಕೊಡದೇ ಗುಂಡಾಗಳ ರೀತಿ ವರ್ತಿಸಿರುವುದು ಖಂಡನೀಯ. ರಾಜಪಾಲರ ಅವಮಾನಿಸಿರುವ ಕಾಂಗ್ರೆಸ್ ನಡೆಯನ್ನು ಖಂಡಿ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರು ಪ್ರತಿಭಟಿಸಿದರು.

ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ಯುವ ಮೋರ್ಚಾ ಘಟಕದವತಿಯಿಂದ ಅಧ್ಯಕ್ಷ ರಾಕೇಶ್ ಗೌಡ ನೇತೃತ್ವದಲ್ಲಿ 50 ಜನರು ಸೇರಿ ಮಾಜಿ ಸಚಿವ ಬಿ.ಕೆ.ಹರಿಪ್ರಸಾದ್ ಹಾಗೂ ಇತರ ಕಾಂಗ್ರೆಸ್ ಶಾಸಕರು ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರನ್ನು ವಿಧಾನಸೌಧದಲ್ಲಿ ಅಡ್ಡಗಟ್ಟಿ ಗೂಂಡಾಗಿರಿ ಮೆರೆದು ಹಲ್ಲೆ ಮಾಡಲು ಯತ್ನಿಸಿದ್ದಾರೆ ಎಂದು ಆರೋಪಿಸಿದರು.

ಹರಿಪ್ರಸಾದ್ ಹಟಾವೋ ಕರ್ನಾಟಕ ಬಚಾವೋ,ದಿಕ್ಕಾರ ದಿಕ್ಕಾರ ಬಾಲಕೃಷ್ಣನಿಗೆ ದಿಕ್ಕಾರ.ಗುಂಡಾ ವರ್ತನೆ ತೋರಿದ ಕಾಂಗ್ರೆಸ್ ಶಾಸಕರಿಗೆ ದಿಕ್ಕಾರ,ಸಂವಿಧಾನ ಕಗ್ಗೊಲೆ ಮಾಡಿದ ಬಾಲಕೃಷ್ಣ ಗೆ ದಿಕ್ಕಾರ ಎಂಬ ನಾಮಫಲಕವನ್ನು ಹಿಡಿದು ದಲಿತ ರಾಜ್ಯಪಾಲರನ್ನು ಅವಮಾನಿಸಿದ ರಾಜ್ಯ ಸರಕಾರಕ್ಕೆ ದಿಕ್ಕಾರ, ದಲಿತ ವಿರೋಧಿ ಕಾಂಗ್ರೆಸ್ ಗೆ ದಿಕ್ಕಾರ,ರೌಡಿ ಕೊತ್ವಲ್ ಶಿಷ್ಯ ಹರಿಪ್ರಸಾದ್ ಗೆ ದಿಕ್ಕಾರ,ನೀಡಲಿ ನೀಡಲಿ ರಾಜೀನಾಮೆ ನೀಡಲಿ,ಕಾಂಗ್ರೆಸ್ ಗುಂಡಾಗಳಿಗೆ ದಿಕ್ಕಾರ, ಜನವಿರೋದಿ ಕಾಂಗ್ರೆಸ್ ಸರಕಾರಕ್ಕೆ ದಿಕ್ಕಾರ,ಸಮರ್ಥನೆ ಮಾಡಿದ ಸಿದ್ದರಾಮಯ್ಯ ಗೆ ದಿಕ್ಕಾರ, ನೀಡಿ ನೀಡಿ ರಾಜೀನಾಮೆ ನೀಡಿ ಎಂಬಿತ್ಯಾದಿ ಘೋಷಣೆ ಕೂಗಿದರು.



ಪ್ರತಿಭಟನೆಯಲ್ಲಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ ಮಾತನಾಡಿ, ಮೊನ್ನೆ ನಡೆದ ಅಧಿವೇಶನದಲ್ಲಿ ಆಗಬಾರದ್ದು ಆಗಿದೆ. ಕಾಂಗ್ರೆಸ್ ಶಾಸಕರು ರಾಜ್ಯಪಾಲರ ಸಂವಿಧಾನಿಕ ಹುದ್ದೆಗೆ ಅಗೌರವ ತೋರಿಸಿದ್ದಾರೆ.ಅದು ಸಂವಿಧಾನ ಹುದ್ದೆ ಅಂತ ಗೊತ್ತೇ ಇಲ್ಲ.ಬಿ ಕೆ ಹರಿಪ್ರಸಾದ್ ಗೆ ನಿಗಾ ಇರಬೇಕು.ಗುಂಡಾ ರಾಜ್ಯ ಕಟ್ಟಬೇಕು ಅಂದುಕೊಂಡಿದ್ದಾರೆ. ಇದು 1980 ದಶಕ ಅಲ್ಲ ಸ್ವಾಮಿಗಳೇ. ಇದು ವಿಕಾಸಿತ ಭಾರತ.ಕೂಡಲೇ ರಾಜ್ಯಪಾಲರಿಗೆ ಕ್ಷಮೆ ಯಾಚನೆ ಮಾಡಬೇಕು.ಈ ಹಿಂದೆ 18 ಜನ ಶಾಸಕರನ್ನು ಸಸ್ಪೆಂಡ್ ಮಾಡಿದ್ರಿ ಈಗ ಯಾಕೆ ಸುಮ್ಮನೆ ಕುಳಿತಿದ್ದೀರಿ.ಸಿಎಂ ಸಿದ್ದರಾಮಯ್ಯರವರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು. ಸಿದ್ದರಾಮಯ್ಯ ಸಾಹೇಬರು ಮೈಸೂರನ್ನು ಮರೆತು ಕುಳಿತಿದ್ದಾರೆ. ಬಳ್ಳಾರಿ ಶಾಸಕ ಭರತ್ ರೆಡ್ಡಿ ಮಾಡೇ ಮಾಡುತ್ತೇನೆ. ಹೊಡೆದೆ ತಿರುತ್ತೇನೆ ಅಂತಾರೆ.ಭರತ್ ರೆಡ್ಡಿ ಗುಂಡಾ ರಾಜ್ಯ ಮಾಡಲು ಹೊರಟಿದ್ದೀರಾ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದರು.

ಗ್ರಾಮಾಂತರ ಅಧ್ಯಕ್ಷ ಕೆ. ಎನ್.ಸುಬ್ಬಣ್ಣ,ನಗರ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಸೋಮಶೇಖರ್, ಚಂದ್ರಶೇಖರ ದಾರಿಪುರ, ಕಾರ್ತಿಕ್ ಮರಿಯಪ್ಪ, ಗೋಕುಲ್ ಗೋವರ್ಧನ್, ರುದ್ರಸ್ವಾಮಿ, ಜೋಗಿ ಮಂಜು, ರಾಕೇಶ್ ಭಟ್ ಹಾಗೂ ಇತರರು ಇದ್ದರು.

# ಡಾ.ಲಕ್ಷ್ಮಿ: ಎನ್.ಸಿ.ಸಿ ಮೇಜರ್ ಆಗಿ ಪದೋನ್ನತಿ

ರಾಮನಗರ: ನ್ಯಾಷನಲ್ ಕ್ಯಾಡೆಟ್ ಕಾರ್ಪ್ಸ್ (ಎನ್.ಸಿ.ಸಿ)ನ ಕ್ಯಾಪ್ಟನ್ ಆಗಿರುವ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿ ಪ್ರಾಂಶುಪಾಲರಾದ ಡಾ.ಲಕ್ಷ್ಮಿ.ಟಿ ಅವರು ಇದೀಗ ಮೇಜರ್ ಆಗಿ ಪದೋನ್ನತಿ ಹೊಂದಿದ್ದಾರೆ.

ರಾಮನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಲಕ್ಷ್ಮಿ ಟಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಮೇಜರ್ ಡಾ.ಲಕ್ಷ್ಮಿ.ಟಿ ಅವರು 1990 ರಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಎನ್‌ಸಿಸಿ ಮುಗಿಸಿ, 1992 ರಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥ ಸಂಚಲನ ದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. 1993 ರಲ್ಲಿ "ಸಿ" ಪ್ರಮಾಣಪತ್ರ ಪಡೆದು, 1999 ರಲ್ಲಿ ಜಯನಗರದ ಬಿಎಚ್‌ಎಸ್ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗೆ ಎನ್‌ಸಿಸಿ ಆಫೀಸರ್ ಆಗಿ, 8 ತಿಂಗಳ ಕಾಲ ತರಬೇತಿ ಮುಗಿಸಿ ಕೇರ್‌ಟೇಕರ್ ಆಗಿ ಎನ್‌ಸಿಸಿ ಚಟುವಟಿಕೆಗಳನ್ನು ನಿರ್ವಹಿಸಿದ್ದಾರೆ. 2000ರಲ್ಲಿ ಗ್ವಾಲಿಯರ್‌ನಲ್ಲಿ ಎನ್‌ಸಿಸಿ ಆಫೀಸರ್ ತರಬೇತಿ ಪಡೆದು 2 ಸ್ಟಾರ್ ಗಳನ್ನು ಪಡೆಯುವ ಮೂಲಕ ಸೆಕೆಂಡ್ ಲೆಫ್ಟಿನೆಂಟ್ ರ್‍ಯಾಂಕ್ ಪಡೆದ ಕೀರ್ತಿ ಇವರಿಗಿದೆ. 2002 ರಲ್ಲಿ ಮತ್ತೆ 113 ಎನ್‌ಸಿಸಿ ವಿದ್ಯಾರ್ಥಿಗಳನ್ನು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಕರ್ನಾಟಕ ಮತ್ತು ಗೋವಾ ಡೈರೆಕ್ಟರೇಟ್‌ನ ಪ್ರತಿನಿಧಿಸಿ ಬೆಸ್ಟ್ ಎನ್‌ಸಿಸಿ ಆಫೀಸರ್ ಅವಾರ್ಡ್ ಪಡೆದಿದ್ದಾರೆ. 2018 ರಲ್ಲಿ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಕ್ಯಾಪ್ಟನ್‌ಆಗಿ, 2026 ರಲ್ಲಿ ಮೇಜರ್ ಆಗಿ ಪದನ್ನೋತಿ ಪಡೆದಿದ್ದಾರೆ.

### ಯುವಕರಲ್ಲಿ ದೇಶಭಕ್ತಿ ಮೂಡಿಸುವ ಸಂಘಟನೆ: ಡಾ.ಲಕ್ಷ್ಮಿ

ತಮ್ಮ ಪದೋನ್ನತಿ ಬಗ್ಗೆ ಮಾಧ್ಯಮ ಪ್ರತಿನಿಧಿಗಳ ಬಳಿ ಸಂತಸ ಹಂಚಿಕೊಂಡ ವೇಳೆ ಮಾತನಾಡಿದ ಅವರು ಯುವಕರನ್ನು ಶಿಸ್ತು ಬದ್ಧ ಮತ್ತು ದೇಶಭಕ್ತಿಯ ನಾಗರೀಕರನ್ನಾಗಿ ರೂಪಿಸುವ ಸಂಸ್ಥೆಯಲ್ಲಿ ತಮಗೆ ಮೇಜರ್ ಆಗಿ ಪದೋನ್ನತಿ ಪಡೆದಿರುವುದು ಬಹಳ ಸಂತಸ ತಂದಿದೆ. ತಾವು ಎನ್‌ಸಿಸಿ ಆಫೀಸರ್ ಆದಂದಿನಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು, ಧೈರ್ಯ, ಸಾಹಸ, ಸೌಹಾರ್ದತೆ ಮತ್ತು ನಿಸ್ವಾರ್ಥ ಸೇವೆಯನ್ನು ಬೆಳೆಸಿದ ಸಾರ್ಥಕತೆ ಇದೆ. ಭೂಮಿ ಮೇಲಿರುವ ಎಲ್ಲ ಪ್ರಜೆಗಳಿಗೂ ಕನಿಷ್ಠ ಒಂದು ವರ್ಷವಾದರೂ ರಾಷ್ಟ್ರೀಯ ಕೆಡೆಟ್ ಕಾರ್ಪ್ ತರಬೇತಿ ಕೊಡಬೇಕೆಂಬುದು ತಮ್ಮ ಆಶಯ ಎಂದರು. ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಗಿರೀಶ್, ದೈಹಿಕ ಶಿಕ್ಷಕಿ ರತ್ನಮ್ಮ, ಸ್ನೇಹಿತರಾದ ರೇಖಾಗಿರೀಶ್, ದೇವರಾಜು ಸೇರಿದಂತೆ ಕಾಲೇಜು ಭೋದಕ –ಭೋದಕೇತರ ವರ್ಗದವರು ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿ ವೃಂಧ, ಅಪಾರ ಸ್ನೇಹಿತರು ಹೂಗುಚ್ಚ ನೀಡಿ ಶುಭ ಕೋರಿದ್ದಾರೆ.



**ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ**

# ಕ್ರಿಕೆಟ್‌ನಲ್ಲಿ ಬಿಸಿಎಂ ಇಲಾಖೆ ತಂಡ ಪ್ರಥಮ




ಚಾಮರಾಜನಗರ, ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಕ್ರಿಕೆಟ್ ಪಂದ್ಯದಲ್ಲಿ ಬಿಸಿಎಂ ಇಲಾಖೆ ತಂಡ ಪ್ರಥಮ ಸ್ಥಾನ ಪಡೆದು ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡು ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗುವ ಮೂಲಕ ಬೀಗಿದೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ ವತಿಯಿಂದ ಎರಡು ದಿನಗಳ ಕಾಲ ನಡೆಯುವ ಚಾಮರಾಜನಗರ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಸಂಘದ ಜಿಲ್ಲಾಧ್ಯಕ್ಷೆ ಸಿ.ಎನ್.ರೇಣುಕಾದೇವಿ ತಂಡದ ನಾಯಕ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಲಿಂಗರಾಜು ಅವರಿಗೆ ಟ್ರೋಫಿ ವಿತರಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಖಜಾಂಚಿ ಶಿವಕುಮಾರಯ್ಯ, ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ, ಕಾರ್ಯದರ್ಶಿ ಭರತ್ ಭೂಷಣ್, ರಾಜ್ಯ ಪರಿಷತ್ತು ಸದಸ್ಯ ನಟರಾಜು, ಹಿರಿಯ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ,ವೀರಭದ್ರಸ್ವಾಮಿ, ಭವಾನಿದೇವಿ, ಯೋಗಾಪ್ರಕಾಶ್, ಮಹೇಂದ್ರ ಹಾಗೂ ತಂಡದ ಸದಸ್ಯರು ಹಾಜರಿದ್ದರು.

# ಚಿಕ್ಕರಂಗಶೆಟ್ಟಿದೊಡ್ಡಿ ಸಮೀಪದ ರಸ್ತೆ ಬದಿಯಲ್ಲಿ ಚಿರತೆಗಳ ಪ್ರತ್ಯಕ್ಷ

ಚಾಮರಾಜನಗರ, ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ತಪ್ಪಲಿನಲ್ಲಿ ಭಕ್ತನ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದ ಘಟನೆ ನಡುವೆಯೇ ತಾಲೂಕಿನ ಪಿಜಿಪಾಳ್ಯದ ಚಿಕ್ಕರಂಗಶೆಟ್ಟಿದೊಡ್ಡಿಯ ಬಳಿಯ ಮುಖ್ಯ ರಸ್ತೆಗಳು ಜೋಡಿ ಚಿರತೆಗಳು ಕಾಣಿಸಿಕೊಂಡಿರುವುದು ರೈತರು ಹಾಗೂ ಸಾರ್ವಜನಿಕರಲ್ಲಿಮತ್ತಷ್ಟು ಆತಂಕ ಮೂಡಿಸಿದೆ.

ಗುರುವಾರ ರಾತ್ರಿ ಪಿ.ಜಿ. ಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕರಂಗಶೆಟ್ಟಿ ದೊಡ್ಡಿ ಸಮೀಪ ರಸ್ತೆ ಬದಿಯಲ್ಲಿ ಎರಡು ಚಿರತೆಗಳುಕಾಣಿಸಿಕೊಂಡಿರುವುದರಿಂದ ವಾಹನ ಸವಾರರಲ್ಲಿ ಭಯ ವಾತಾವರಣ ನಿರ್ಮಾಣವಾಗಿದೆ. ಈ ಪ್ರದೇಶವು ಮಲೆ ಮಹದೇಶ್ವರ ವನ್ಯಧಾಮ ಹಾಗೂ ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಗಡಿಗೆ ಹೊಂದಿಕೊಂಡಿ ರುವುದರಿಂದ ಹುಲಿ, ಚಿರತೆ ಸೇರಿದಂತೆ ವನ್ಯಜೀವಿಗಳ ಓಡಾಟ ನಿತ್ಯ ಸಾಮಾನ್ಯವಾಗಿದೆ. ಅಲ್ಲದೆ ಇದೇ ಮಾರ್ಗದಲ್ಲಿ ಗುರುವಾರ ರಾತ್ರಿ ವೇಳೆ ತೆರಳುತ್ತಿದ್ದ ವಾಹನ ಸವಾರರಿಗೆ ಎರಡು ಚಿರತೆಗಳು ಕಾಣಿಸಿಕೊಂಡ ಪರಿಣಾಮ. ವಾಹನ ಸವಾರರು ಚಿರತೆ ದೃಶ್ಯವನ್ನು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದು, ದ್ವಿಚಕ್ರ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸುವಂತೆ ಮನವಿ ಮಾಡಿದ್ದಾರೆ.



# ಡಿಸಿ ಹೆಸರಿನಲ್ಲಿ ನಕಲಿ ಫೇಸ್ ಬುಕ್ ಖಾತೆ: ಸಾರ್ವಜನಿಕರು ಎಚ್ಚರ ವಹಿಸಲು ಮನವಿ

ಚಾಮರಾಜನಗರ, ಚಾಮರಾಜನಗರ ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರ ಹೆಸರನ್ನು ದುರುಪಯೋಗಪಡಿಸಿಕೊಂಡು ``Ias Shree Roopa" ಎಂಬ ಹೆಸರಿನಲ್ಲಿ ಯಾರೋ ದುರುದ್ದೇಶಪೂರಿತ ವ್ಯಕ್ತಿಗಳು ನಕಲಿ ಫೇಸ್‌ಬುಕ್ ಖಾತೆಯನ್ನು ತೆರೆದಿರುವುದು ಜಿಲ್ಲಾಡಳಿತದ ಗಮನಕ್ಕೆ ಬಂದಿದೆ. ಈ ನಕಲಿ ಫೇಸ್‌ಬುಕ್ ಖಾತೆಗೂ ಜಿಲ್ಲಾಧಿಕಾರಿಗಳಿಗೂ ಅಥವಾ ಜಿಲ್ಲಾಡಳಿತಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದು ಸಾರ್ವಜನಿಕರಿಗೆ ಈ ಮೂಲಕ ಸ್ಪಷ್ಟಪಡಿಸಲಾಗಿದೆ.



ಸದರಿ ನಕಲಿ ಸಾಮಾಜಿಕ ಜಾಲತಾಣ ಖಾತೆಯಿಂದ ಸಾರ್ವಜನಿಕರಿಗೆ ವಿವಿಧ ರೀತಿಯ ಆಮಿಷಗಳನ್ನು ಒಡ್ಡಲಾಗುತ್ತಿದ್ದು, ಇದರಿಂದ ಜಿಲ್ಲಾಧಿಕಾರಿಗಳ ಗೌರವಕ್ಕೆ ಹಾಗೂ ಜಿಲ್ಲಾಡಳಿತದ ಪ್ರತಿಷ್ಠೆಗೆ ಧಕ್ಕೆಯಾಗುವ ಸಂಭವವಿದೆ. ಅಲ್ಲದೇ, ಸಾರ್ವಜನಿಕರಲ್ಲಿ ತಪ್ಪು ಮಾಹಿತಿ ಹಾಗೂ ಗೊಂದಲ ಉಂಟಾಗುವ ಸಾಧ್ಯತೆಯೂ ಕಂಡುಬಂದಿದೆ.

ಸಾರ್ವಜನಿಕರು ಇಂತಹ ನಕಲಿ ಸಾಮಾಜಿಕ ಜಾಲತಾಣ ಖಾತೆಗಳ ಬಗ್ಗೆ ಎಚ್ಚರ ವಹಿಸಬೇಕು ಹಾಗೂ ಯಾವುದೇ ರೀತಿಯ ಆಮಿಷಗಳಿಗೆ ಒಳಗಾಗಬಾರದೆಂದು ಜಿಲ್ಲಾಡಳಿತ ಮನವಿ ಮಾಡಿದೆ. ಇದೇ ವೇಳೆ, ನಕಲಿ ಖಾತೆ ಕಂಡುಬಂದಲ್ಲಿ ತಕ್ಷಣವೇ ಸ್ಥಳೀಯ ಪೊಲೀಸ್ ಠಾಣೆ ಅಥವಾ ಜಿಲ್ಲಾಡಳಿತಕ್ಕೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಶ್ರೀರೂಪ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಮಹಿಳೆಯನ್ನು ಕಂಬಕ್ಕೆ ಕಟ್ಟಿ ಥಳಿತ

ಹನೂರು: ಕ್ಷುಲ್ಲಕ ಕಾರಣಕ್ಕೆ ದಲಿತ ಮಹಿಳೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಂಬಕ್ಕೆ ಕಟ್ಟಿ ಥಳಿಸಿರುವ ಘಟನೆ ತಾಲೂಕಿನ ದೊಮ್ಮನ ಗದ್ದೆ ಸಮೀಪದ ಜಿ ಆರ್ ನಗರದಲ್ಲಿ ನಡೆದಿದೆ.

ಘಟನೆ ವಿವರ:ತಾಲ್ಲೋಕಿನ ಜಿ.ಆರ್. ನಗರ ಗ್ರಾಮದಲ್ಲಿ ಕಣ್ಣಮ್ಮ ಎಂಬ ದಲಿತ ಮಹಿಳೆ ತನ್ನ ಜಮೀನಿನಲ್ಲಿ ಹುರುಳಿ ಬೆಳೆದಿದ್ದು, ಇನ್ನೇನು ಕಟಾವು ಮಾಡುವ ಸಂದರ್ಭದಲ್ಲಿ ಅದೇ ಗ್ರಾಮದ ತೋಟದ ಮನೆಯ ಸೆಲ್ವಿ ಎಂಬುವವರ ಜಾನುವಾರುಗಳು ಹುರುಳಿ ಹೊಲಕ್ಕೆ ನುಗ್ಗಿ ಮೇಯ್ದು ತುಳಿದು ಹಾಳು ಮಾಡಿದ್ದವು. ಈ ಸಂಬಂಧ ಕಣ್ಣಮ್ಮ ತನ್ನ ಜಮೀನಿನಲ್ಲಿ ಬೆಳೆದಿದ್ದ ಹುರುಳಿ ಫಸಲುನ್ನು ಸೆಲ್ವಿ ಎಂಬುವವರ ಹಸುಗಳು ಬೆಲೆ ಹಾನಿ ಮಾಡಿವೆ ಎಂದು ರಾಮಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪೊಲೀಸರು ಸ್ಟೇಷನ್ ಗೆ ಬಂದು ಬಗೆಹರಿಸಿಕೊಳ್ಳುವಂತೆ ಸೆಲ್ವಿಗೆ ದೂರವಾಣಿ ಕರೆ ಮೂಲಕ ಸರಿಪಡಿಸಿಕೊಳ್ಳುವಂತೆ ಸೆಲ್ವಿಗೆ ದೂರವಾಣಿ ಮೂಲಕ ಮಾಹಿತಿ ತಿಳಿಸಿದ್ದಾರೆ.. ಇದನ್ನು ಸಹಿಸದ ಸೆಲ್ವಿ ಇಂದು, ಮನೆಯಲ್ಲಿ ಕಣ್ಣಮ್ಮ ಮತ್ತು ಆತನ ಮಗನನ್ನು ಎಳೆದು ಹೊರತಂದು, ಜಾತಿ ಬಗ್ಗೆ ಅವ್ಯಚ್ಯ ಶಬ್ದಗಳಿಂದ ನಿಂದಿಸಿ ಕಣ್ಣಮ್ಮನನ್ನು ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ. ಈ ಸಂಬಂಧ ಫೋಟೋ ಮತ್ತು ವಿಡಿಯೋ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.


ನಂತರ ಕಣ್ಣಮ್ಮ ಹಾಗೂ ಆತನ ಮಗ ರಾಮಪುರ ಪೊಲೀಸ್ ಠಾಣೆಗೆ ಬಂದು ನಮ್ಮನ್ನು ಸೆಲ್ವಿ ಎಂಬುವವರು ಮನೆಗೆ ನುಗ್ಗಿ ಎಳೆದು ಕಂಬಕ್ಕೆ ಕಟ್ಟಿ ಹೊಡೆದು ಜಾತಿ ನಿಂದನೆ ಬಗ್ಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಜಾತಿ ನಿಂದನೆ ದೂರು ನೀಡಿದ್ದಾರೆ. ವಿಷಯ ತಿಳಿದಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ರವರು ತಕ್ಷಣ ರಾಮಪುರ ಪೊಲೀಸ್ ಠಾಣೆ ಮತ್ತು ಜಿ ಆರ್ ನಗರ ಗ್ರಾಮಕ್ಕೂ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಕಣ್ಣಮ್ಮರಿಂದ ಹೇಳಿಕೆ ಪಡೆದುಕೊಂಡು ದೂರಿನ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸುವ ಭರವಸೆ ನೀಡಿದ್ದಾರೆ. ಈ ವೇಳೆ ಡಿಎಸ್‌ಎಸ್ ಸಂಘಟನೆ ಮತ್ತು ಪ್ರಜಾ ವಿಮೋಚನ ಚಳುವಳಿ ಹಾಗೂ ಸಮುದಾಯದ ಮುಖಂಡರು ರಾಮಪುರ ಪೊಲೀಸ್ ಠಾಣೆಗೆ ಭೇಟಿ ನೀಡಿದ ಪೊಲೀಸ್ ವರಿಷ್ಠರಿಸ್ಟಾಧಿಕಾರಿಗಳೊಂದಿಗೆ ಚರ್ಚಿಸಿ, ಈ ವಿಚಾರವಾಗಿ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿದರು .



# ಅಯೋಧ್ಯೆ ಬಾಲರಾಮನ ಪ್ರತಿಷ್ಠಾಪನೆ:ವಾರ್ಷಿಕೋತ್ಸವ

ಚಾಮರಾಜನಗರ, ನಗರದ ಭಗೀರಥ ಉಪ್ಪಾರ ಬಡಾವಣೆಯಲ್ಲಿ 2ನೇ ವರ್ಷದ ರಾಮಲಲ್ಲಾ ಪ್ರತಿಷ್ಠಾಪನೆ ವಾರ್ಷಿಕೋತ್ಸವ ಆಚರಿಸಲಾಯಿತು.

ಬಡಾವಣೆಯಲ್ಲಿ ಶ್ರೀರಾಮನ ಭಾವಚಿತ್ರ ಮೆರವಣಿಗೆ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು ಕಾರ್ಯಕ್ರಮದಲ್ಲಿ ಪ್ರಶಾಂತ್ ಜೀ, ಕೃಷ್ಣ( ರಾಶಿ), ಪುಟ್ಟಣ್ಣ, ಚೆನ್ನಿಗ, ಗೋಪಿ, ಕುಮಾರ್,ನಾಗರಾಜು, ಚೇತನ್, ಗಿರೀಶ್, ಸಂತೋಷ್, ರಾಜೇಶ್, ಚೇತು ಚಂದ್ರು, ಚಂದ್ರು ಇತರರು ಭಾಗವಹಿಸಿದ್ದರು.



**ಎಚ್.ಡಿ.ಕೋಟೆಯಲ್ಲಿ ಘಟನೆ**

# ಗುತ್ತಿಗೆ ಕಂಪನಿಯಿಂದ ವಂಚನೆ: ಗ್ರಾಮಸ್ಥರ ತರಾಟೆ

ಎಚ್.ಡಿ.ಕೋಟೆ: ಶಾಸಕ ಅನಿಲ್ ಚಿಕ್ಕಮಾದು ಅವರ ಇಚ್ಛಾಶಕ್ತಿ ಹಾಗೂ ಪ್ರಯತ್ನದಿಂದ ಕಾಮಗಾರಿ ನಡೆಸಲು ಬಿಡುಗಡೆಯಾಗಿದ್ದ 5 ಕೋ,ರೂ, ಮೊತ್ತದಲ್ಲಿ ಕಾಮಗಾರಿ ನಡೆಸದೆ 3.75ಕೋ,ರೂ, ಪಡೆದು ವಂಚಿಸಿರುವ ಸಂಬಂಧ ವೀಕ್ಷಣೆಗೆ ಬಂದ ಅಧಿಕಾರಿಗಳನ್ನು ಗ್ರಾಮಸ್ಥರು ಹಿಗ್ಗಾಮುಗ್ಗ ತರಾಟೆಗೆ ತಗೆದುಕೊಂಡಿದ್ದಾರೆ.

ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಮೂಲಕ ಸಿಸಿ ರಸ್ತೆ, ಒಳಚರಂಡಿ ನಿರ್ಮಾಣ ಕಾಮಗಾರಿಗೆ ಪಟ್ಟಣದ ಮುಸ್ಲಿಂ ಬ್ಲಾಕ್ ಬಡಾವಣೆಗೆ 1.85 ಕೋ,ರೂ, ಸಮೀಪದ ನಾಗನಹಳ್ಳಿ ಗ್ರಾಮಕ್ಕೆ 1.65 ಕೋ,ರೂ, ಚಿನ್ನಪ್ಪನಪಾಳ್ಯಕ್ಕೆ 1.65 ಕೋ,ರೂ, ಬಿಡುಗಡೆಗೊಳಿಸಿ ಕೆಲ ತಿಂಗಳ ಹಿಂದೆ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದ್ದರು.

ಕಾಮಗಾರಿ ಜವಾಬ್ದಾರಿಯನ್ನು ಕೆ.ಆರ್.ಐ.ಡಿ. ಎಲ್ ಸಂಸ್ಥೆಗೆ ವಹಿಸಲಾಗಿತ್ತು, ಕೆಲಸ ಪ್ರಾರಂಭವಾದ ಕೆಲ ದಿನಗಳಲ್ಲೇ ಕಳಪೆ ಕಾಮಗಾರಿ ನಡೆಯುತ್ತಿರುವುದನ್ನು ಗಮನಿಸಿದ್ದ ನಿವಾಸಿಗಳು ಕೆಲಸ



ಮಾಡದಂತೆ ತಡೆ ಹಿಡಿದು, ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ತಂದಿದ್ದರು. ಕಾರ್ಯಪ್ರವೃತ್ತರಾದ ಅನಿಲ್ ಚಿಕ್ಕಮಾದು, ಈ ಕುರಿತು ತನಿಖೆ ನಡೆಸುವಂತೆ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಶಿಲ್ಪಾ ಸೇರಿದಂತೆ ಕೆ.ಆರ್.ಐ. ಡಿ.ಎಲ್ ಸಂಸ್ಥೆಗೆ ಸೂಚಿಸಿದ್ದರು. ಕಾಮಗಾರಿ ಕಳಪೆ ಒಂದೆಡೆಯಾದರೆ ಕಾಮಗಾರಿ ನಡೆಯದೆ ಇಲಾಖೆಯಿಂದ 3.75 ಕೋ, ರೂ, ಸಂದಾಯ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಈ ಕುರಿತು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದು, ಸಾರ್ವಜನಿಕರ ತೆರಿಗೆ ಹಣ ಕದ್ದಿರುವ ಸಂಸ್ಥೆಯ ವಿರುದ್ಧ ಕಾನೂನು ಕ್ರಮ ಜರುಗಿಸಿ ಕಪ್ಪುಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿದ್ದಾರೆ. ಬುಧವಾರ ಕಾಮಗಾರಿ ಪರಿಶೀಲನೆಗೆ ಬಂದ ಅಧಿಕಾರಿಗಳನ್ನು ಗ್ರಾಮಸ್ಥರು ಕಾಮಗಾರಿಗೆ ಸಂಭವಿಸಿದ ಅಂದಾಜು ಪಟ್ಟಿ ನೀಡುವಂತೆ ಪಟ್ಟುಹಿಡಿದಿದ್ದರು. ಇದರಿಂದ ತಬ್ಬಿಬಾದ ಅಧಿಕಾರಿಗಳು ಸಂಜೆ ತನಕ ಸತಾಯಿಸಿದ್ದಾರೆ. ನಂತರ, ಸಂಜೆ ಮೇಲೆ ಎಸ್ಟಿಮೇಟ್ ಕಾಪಿ ನೀಡಿ ಕಾಮಗಾರಿಯ ಲೋಪವನ್ನು ಸರಿಪಡಿಸಿಕೊಳ್ಳುವುದಾಗಿ ಎಂದು ಹೇಳಿ ತೆರಳಿದ್ದಾರೆ.

ಯುವ ಮುಖಂಡ ಪ್ರದೀಪ್, ಜೀಯಾರ ಸೋಮೇಶ್, ಮೊತ್ತ ಶಿವಮಲ್ಲಪ್ಪ, ಲಕ್ಷಣ, ಆಂದರ್ ರಾಜ್, ಹೃದಯ ರಾಜ್, ಅಂತೋಣಿ, ರಾಜೇಂದ್ರ ಪ್ರಸಾದ್, ರಾಯಪ್ಪ, ಶಾಂತಕುಮಾರ್, ಡ್ಯಾನಿ, ಪೌಲ ಮುಂತಾದವರು ಇದ್ದರು.

## ರಕ್ತದಾನದಿಂದ ಅಮೂಲ್ಯ ಜೀವ ಉಳಿಸಿದ ತೃಪ್ತಿ ಸಿಗುತ್ತದೆ

**ಡಿವೈಎಸ್‌ಪಿ ಸ್ನೇಹರಾಜ್ ಅಭಿಮತ**
**ವೆಂಕಟಯ್ಯನಛತ್ರದಲ್ಲಿ ಯಶಸ್ವಿ ರಕ್ತದಾನ**
**ಕಣ್ಣಿನ ತಪಾಸಣೆ ಶಿಬಿರ**



ಚಾಮರಾಜನಗರ: ರಕ್ತದಾನ, ನೇತ್ರದಾನ ಹಾಗೂ ಅಂಗಾಂಗ ದಾನಗಳು ಸರ್ವ ಶೇಷ್ಟವಾದ ದಾನವಾಗಿದ್ದು, ಮತ್ತೊಬ್ಬರ ಬಾಳಿಗೆ ಬೆಳಕು ನೀಡುವ ಮತ್ತು ಅಮೌಲ್ಯ ಜೀವವನ್ನು ಉಳಿಸುವ ಸಾರ್ಥಕ ಕೆಲಸ ನಿಮ್ಮದಾಗುತ್ತದೆ ಎಂದು ಡಿವೈಎಸ್ಪಿ ಸ್ನೇಹರಾಜ್ ತಿಳಿಸಿದರು.

ತಾಲೂಕಿನ ವೆಂಕಟಯ್ಯನಛತ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ಅವರಣದಲ್ಲಿ ರೋಟರಿ ಸಿಲ್ಕ್‌ಸಿಟಿ, ಜ್ವಾಲೇಶ್ವರಿ ಇಂಡೇನ್ ಗ್ಯಾಸ್ ಸರ್ವೀಸ್, ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆ ಹಾಗೂ ಸಿಮ್ಸ್ ರಕ್ತನಿಧಿ ಘಟಕದ ಸಹಯೋಗದಲ್ಲಿ ನಡೆದ ರಕ್ತದಾನ ಹಾಗೂ ಉಚಿತ ಕಣ ?ಣನ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ರೋಟರಿ ಸಂಸ್ಥೆ ಸೇವಾ ಕಾರ್ಯದಲ್ಲಿ ಹೆಚ್ಚು ಪ್ರಸಿದ್ಧಿ ಯನ್ನು ಪಡೆದುಕೊಂಡಿದೆ. ನಾನು ಸಹ ಮೈಸೂರಿನ ರೋಟರಿ ಶಾಲೆಯ ವಿದ್ಯಾರ್ಥಿನಿಯಾಗಿದ್ದೇನೆ. ಬಾಲ್ಯದಿಂದಲು ರೋಟರಿ ಸಂಸ್ಥೆಯ ಬಗ್ಗೆ ಅಭಿಮಾನ. ನಿಸ್ವಾರ್ಥ ಸೇವೆಯನ್ನು ಸಲ್ಲಿಸುವ ಮೂಲಕ ಸಮಾಜದ ಅಭಿವೃದ್ದಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಕ್ತದಾನ ಮಹಾದಾನವಾಗಿದೆ. ನಮ್ಮಲ್ಲಿರುವ ರಕ್ತದಾನವನ್ನು ದಾನ ಮಾಡಿದರೆ, ಮತ್ತೊಬ್ಬರ ಆರೋಗ್ಯವನ್ನು ಉಳಿಸಿದ ತೃಪ್ತಿ ಸಿಗುತ್ತದೆ ಜೊತೆಗೆ ನಮ್ಮ ಆರೋಗ್ಯವು ಸಹ ವೃದ್ದಿಯಾಗುತ್ತದೆ. ಹೊಸ ರಕ್ತ ಸೇರ್ಪಡೆಯಾಗಿ ನಮ್ಮಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ರಕ್ತ ಕೊಡುವುದರಿಂದ ನಿಶಕ್ತಿಗೊಳ್ಳುತ್ತಾರೆ ಎಂಬುದು ತಪ್ಪು ಕಲ್ಪನೆಯಾಗಿದೆ. ಆದೇ ರೀತಿ ಮರಣ ಹೊಂದಿದ ನಂತರ ನಮ್ಮಗಳ ಕಣ್ಣು ಹಾಗೂ ಉಪಯುಕ್ತ ಅಂಗಾಂಗಳು ಮಣ ?ಣಗೆ ಹೋಗುವುದು ಬೇಡ. ಮತ್ತೊಬ್ಬರಿಗೆ ಅದು ಸಹಾಯಕವಾಗುತ್ತದೆ. ನಮ್ಮ ಕಣ್ಣುಗಳನ್ನು ದಾನ ಮಾಡಿದರೆ. ಮತ್ತೊಬ್ಬರು ಪ್ರಪಂಚನ್ನು ನೋಡುತ್ತಾರೆ. ಹೀಗಾಗಿ ಎಲ್ಲರು ರಕ್ತದಾನ, ನೇತ್ರದಾನ ಮಾಡುವ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಮುಂದಾಗಬೇಕು. ಇಂದು ರಕ್ತದಾನ ಮಾಡಿದ ಎಲ್ಲರಿಗೂ ಸಹ ಶುಭ ಕೋರುತ್ತೇನೆ ಎಂದರು.

ರೋಟರಿ ಸಹಾಯಕ ಗೌರ್ನರ್ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿ, ರೋಟರಿ ಸಿಲ್ಕ್‌ಸಿಟಿ ಸಮಾಜಮುಖಿ ಕಾರ್ಯಗಳಲ್ಲಿ ಭಾಗವಹಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಿದಂತಾಗಿದೆ. ವೆಂಕಟಯ್ಯನಛತ್ರದಲ್ಲಿ ನಡೆಯುತ್ತಿರುವ ರಕ್ತದಾನ ಹಾಗೂ ಕಣ ?ಣನ ತಪಾಸಣೆ ಶಿಬಿರ ಯಶಸ್ವಿಯಾಗಿದೆ. ಇತ್ತಿಚೆಗೆ ನಗರದಲ್ಲಿ ನಡೆದ ಆಹಾರ ಮೇಳ ಬಹಳ ಯಶಸ್ವಿಯಾಯಿತು. ಈ ಹಣದಲ್ಲಿ ಸರ್ಕಾರಿ ಮಹಿಳಾ ಹಾಸ್ಟೆಲ್ ಅಭಿವೃದ್ದಿಗೆ ವಿನಿಯೋಗಿಸಲಾಗುತ್ತಿದೆ ಎಂದರು. ರಕ್ತದಾನಲ್ಲಿ ಸಿಲ್ಕ್‌ಸಿಟಿ ಮಾಜಿ ಅಧ್ಯಕ್ಷ ಮಾಣ ಕ್ಯ ಚಂದ್ ಸಿರ್ವಿ ಹಾಗೂ ಪತ್ನಿ ದಿವ್ಯ ದಂಪತಿಗಳು ರಕ್ತದಾನ ಮಾಡಿ ಶಿಬಿರಕ್ಕೆ ಚಾಲನೆ ಕೊಟ್ಟರು. ನಂತರ 20ಕ್ಕು ಹೆಚ್ಚು ಮಂದಿ ರಕ್ತದಾನ ಮಾಡಿದರು. ಕಣ ?ಣನ ತಪಾಸಣಾ ಶಿಬಿರದಲ್ಲಿ 125 ಮಂದಿ ತಪಾಸಣೆಗೆಒಳ್ಳಪಟ್ಟು, ಕಣ ?ಣನ ಪೊರೆಯುಳ್ಳ 25 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು. ರಾಷ್ಟ್ರೀಯ ಖೋಖೋ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿರುವ ಸಿದ್ದಯ್ಯನಪುರದ ಚಂದನ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಾದ ಡಾ. ಸತೀಶ್, ರೋಟರಿ ಸಿಲ್ಕ್‌ಸಿಟಿ ಅಧ್ಯಕ್ಷ ಶಮಿತ್‌ಕುಮಾರ್, ಮಾಜಿ ಅಧ್ಯಕ್ಷರಾದ ಡಿ.ಪಿ.ವಿಶ್ವಾಸ್, ಪ್ರಶಾಂತ್, ಮುರುಘೇಂದ್ರಸ್ವಾಮಿ, ಎಚ್. ಎಂ. ಅಜಯ್, ಮಾಣ ಕ್ಯ ಚಂದ್ ಸಿರ್ವಿ, ಸದಸ್ಯರಾದ ಪಿ.ಎನ್. ದಯನಿಧಿ, ಸಮಾಜ ಸೇವಕ ಮಹದೇವಸ್ವಾಮಿ ಎನ್‌ರಿಎಚ್, ಗ್ರಾ.ಪಂ. ಸದಸ್ಯರಾದ ಸ್ವಾಮಿ, ಮೆಡಿಕಲ್ ಆಶೋಕ್, ಅರವಿಂದ್ ಕಣ್ಣಾಸ್ಪತ್ರೆಯ ಸಂಯೋಜಕ ವಿಜಯಕಾಂತ್, ಸಿಮ್ಸ್ ರಕ್ತನಿಧಿ ಘಟಕದ ಡಾ. ಸ್ಪೂರ್ತಿ, ಮೊದಾಲದವರು ಇದ್ದರು.

## ನಾಳೆ ಪ್ರತಿಭಟನೆ

ಮೈಸೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರರ ಸಂಘ, ರಾಜ್ಯ ವಿಕಲ ಚೇತನರ ಸೇವಾ ಸಂಸ್ಥೆಗಳ ಒಕ್ಕೂಟದ ವತಿಯಿಂದ ಜ. 28 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾರ್ವತ್ರಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪದಾಧಿಕಾರಿ ಜೆ.ಸಿ. ಚಿರಣ್‌ಕುಮಾರ್ ತಿಳಿಸಿದರು. ರಾಜ್ಯದಲ್ಲಿ ಸುಮಾರು 2500 ಮಂದಿ ಈ ಇದರಲ್ಲಿ ಪಾಲ್ಗೊಳ್ಳುತ್ತಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ವಿಶೇಷ ಶಾಲೆಗಳ ಅನುದಾನ ಶೇ. 40 ರಷ್ಟು ಹೆಚ್ಚಿಸಬೇಕು, ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶದ ಪ್ರಕಾರ ವಿಶೇಷ ಶಾಲೆಗಳ ವಿಶೇಷ ಶಿಕ್ಷಕರಿಗೆ ಪೂರ್ಣ ಪ್ರಮಾಣದ ಆರ್ಥಿಕ ಸೌಲಭ್ಯ ಒದಗಿಸಬೇಕು, ವಿಶೇಷ ಶಾಲೆಗಳಿಗೆ ನೀಡುವ ಅನುದಾನವನ್ನು ಪ್ರತಿ ವರ್ಷ 2 ಕಂತುಗಳಲ್ಲಿ ನೀಡಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಲಾಗುತ್ತಿದೆ ಎಂದರು. ಸುಧಾಕರ್, ಪಾಂಡು, ನವೀನ್ ಇದ್ದರು.



**ಎಚ್.ಡಿ.ಕೋಟೆ ಪಟ್ಟಣದ ಶ್ರೀರೇಣುಕಾ ಯಲ್ಲಮ್ಮ ದೇವರ 19ನೇ ವರ್ಷದ ವಾರ್ಷಿಕೋತ್ಸವ ಹಾಗೂ ತಂಪಿನ ಪೂಜೆ ಪ್ರಯುಕ್ತ ದೇವಾಲಯದ ಆವರಣದಲ್ಲಿ ಏರ್ಪಡಿಸಿದ್ದ ಅನ್ನ ಸಂತರ್ಪಣೆಯಲ್ಲಿ ಭಕ್ತಾಧಿಗಳು ಪ್ರಸಾದ ಸ್ವೀಕರಿಸಿದರು.**

## ಶಾಲೆ, ಆಸ್ಪತ್ರೆಗಾಗಿ ನಾಳೆ ಪ್ರತಿಭಟನೆ



ಮೈಸೂರು: ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆ ಮುಚ್ಚುವ, ಕೆಲ ಆಸ್ಪತ್ರೆಗಳನ್ನು ಮುಚ್ಚುವ ಹುನ್ನಾರ ಜ.25 ರೊಳಗೆ ಕೈಬಿಡದಿದ್ದರೆ ಜ.26ರಂದು ಗಣರಾಜ್ಯೋತ್ಸವ ನಡೆಯುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ರಾಷ್ಟ್ರಧ್ವಜದೊಡನೆ ಕಪ್ಪು ಬಾವುಟ ಹಿಡಿದು ಪ್ರತಿಭಟಿಸಲಾಗುವುದು ಎಂದು ರೈತ ಸಂಘ ಹಾಗೂ ಇನ್ನಿತರ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಈ ಕುರಿತು ನಗರದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್ ಮಾತನಾಡಿ, ರಾಜ್ಯದ ಗ್ರಾಮೀಣ ಭಾಗದ ರೈತರು, ಕೃಷಿ ಕಾರ್ಮಿಕರು, ಕೂಲಿ ಕಾರ್ಮಿಕರ ವಿರೋಧೀ ನೀತಿಯನ್ನು ರಾಜ್ಯ ಸರ್ಕಾರ ಜ. 25 ರೊಳಗೆ ಕೈಬಿಡಬೇಕು. ಇಲ್ಲದಿದ್ದರೆ ಚಾಮುಂಡಿ ವಿಹಾರ ಕ್ರೀಡಾಂಗಣದ ಗಣರಾಜ್ಯೋತ್ಸವ ವೇಳೆ ಒಂದು ಕೈಯ್ಯಲ್ಲಿ ರಾಷ್ಟ್ರ ಧ್ವಜ, ಇನ್ನೊಂದು ಕೈಯ್ಯಲ್ಲಿ ಕಪ್ಪು ಬಾವುಟ ಹಿಡಿದು ಆಕ್ರೋಶ ವ್ಯಕ್ತಪಡಿಸಲಾಗುವುದೆಂದರು. ಈ ಹೋರಾಟಕ್ಕೆ ಎಸ್‌ಡಿಎಂಸಿ ಸಂಘ, ಎಐಡಿಎಸ್‌ಓ, ಗಂಧದ ಗುಡಿ ಫೌಂಡೇಷನ್ ಹಾಗೂ ನಗರದ ಇನ್ನಿತರ ಕನ್ನಡಪರ ಸಂಘಟನೆಗಳು ಬೆಂಬಲ ಸೂಚಿಸಿವೆ ಎಂದರು.

ಎಐಡಿಎಸ್‌ಓ ಸಂಘಟನಾ ಕಾರ್ಯದರ್ಶಿ ನಿತಿನ್ ಮಾತನಾಡಿ, ಮುಂದಿನ ದಿನಗಳಲ್ಲಿ ಏಕರೂಪ ಶಿಕ್ಷಣ ಜಾರಿಗೊಳಿಸಬೇಕು, ಪ್ರತಿ ಗ್ರಾಮದಲ್ಲಿಯೂ ಎಲ್‌ಕೆಜಿಯಿಂದ 5 ನೇ ತರಗತಿವರೆಗೆ ಮೂಲ ಸೌಕರ್ಯ ನೀಡಿ ಗುಣಮಟ್ಟದ ಶಿಕ್ಷಣ ಕೊಡಬೇಕು, ಪ್ರತಿ ಗ್ರಾಪಂನಲ್ಲಿಯೂ ನವೋದಯ ಮಾದರಿಯಲ್ಲಿ 6ನೇ ತರಗತಿಯಿಂದ ಪಿಯುಸಿ ವರೆಗೂ ವಸತಿ ಶಿಕ್ಷಣ ಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸಲಾಗುವುದೆಂದರು. ಎಸ್. ರೇವಣ್ಣ, ದಾರಿಹರ ಚಂದ್ರಶೇಖರ್, ಆರ್ಯನ್ ಗಂಧದಗುಡಿ ಇನ್ನಿತರರು ಹಾಜರಿದ್ದರು.

## ಚಾ.ನಗರ: ರಾಜ್ಯಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಚಾಮರಾಜನಗರ: ರಾಜ್ಯಪಾಲರನ್ನು ಅವಮಾನಿಸಿರುವ ಘಟನೆಯನ್ನು ಖಂಡಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಶನಿವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಜಮಾಹಿಸಿದ ಪ್ರತಿಭಟನಾಕಾರು ಮೆರವಣಿಗೆ ಮೂಲಕ ಶ್ರೀ ಭುವನೇಶ್ವರಿ ವೃತ್ತದ ಬಳಿ ತೆರಳಿ ಕೆಲಕಾಲ ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಪ್ರತಿಭಟನೆಯನ್ನು ಉದ್ದೇಶಿಸಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಭೇಂದ್ರಪ್ಪ ಮಾತನಾಡಿ, ವಿಧಾನಸೌಧದಲ್ಲಿ ರಾಜ್ಯಪಾಲರಿಗೆ ಅಗೌರವ ತೋರಿರುವ ಕಾಂಗ್ರೆಸ್ ಸರ್ಕಾರದ ನಡೆ ಅತ್ಯಂತ ಖಂಡನೀಯ. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಗೂಂಡಾ ವರ್ತನೆ ಖಂಡಿಸುತ್ತೇವೆ. ಇದೇ ರೀತಿ ಮುಂದುವರೆದರೆ ರಾಜ್ಯದಾದ್ಯಂತ ಕಾಂಗ್ರೆಸ್ ಸರ್ಕಾರದ ವಿರುದ್ಧ ಉಗ್ರವಾದ ಹೋರಾಟವನ್ನು ಮಾಡುತ್ತೇವೆ ಎಂದು ಎಚ್ಚರಿಸಿದರು. ಅಂಬೇಡ್ಕರ್ ಪರ, ಸಂವಿಧಾನದ ಪರ ಎಂದು ಮಾತನಾಡುವ ಕಾಂಗ್ರೆಸ್ ಇಂದು ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಕೇವಲ ಭಾಷಣಗಳಲ್ಲಿ ಮಾತ್ರ ಸಂವಿಧಾನದ ಪರ ಇದ್ದೇವೆ ಎಂದು ಹೇಳುವ ಕಾಂಗ್ರೆಸ್ ಸಂವಿಧಾನಕ್ಕೆ ವಿರುದ್ಧವಾಗಿದ್ದಾರೆ ಎಂದು ಗುಡುಗಿದರು.

ಮೂಡ್ನಾಕೂಡು ಪ್ರಕಾಶ್ ಮಾತನಾಡಿ, ಸದನದಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರಿಗೆ ಅವಮಾನಿಸಿರುವ ಘಟನೆ ರಾಜ್ಯದ ಇತಿಹಾಸದಲ್ಲಿ ಒಂದು ದೊಡ್ಡಕಪ್ಪು ಚುಕ್ಕಿಯಾಗಿದೆ. ಕಾಂಗ್ರೆಸ್ ಜನಪ್ರತಿನಿಧಿಗಳು ವೇಷಧರಿಸಿರುವ ಗೂಂಡಾ ಜನಪ್ರತಿನಿಧಿಗಳಾಗಿದ್ದಾರೆ ಎಂದರೆ ತಪ್ಪಿಲ್ಲ. ಬಾಯಲ್ಲಿ ಸಂವಿಧಾನ, ದೇಹದಲ್ಲಿ ವಿಷ ತುಂಬಿಕೊಂಡಿರುವ ಜನಪ್ರತಿನಿಧಿಗಳು ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ ಎಂದು ಕಾಂಗ್ರೆಸ್ ಜನ ಪ್ರತಿನಿಧಿಗಳ ವಿರುದ್ಧ ವಾಗ್ದಾಳಿ ನಡೆಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಳ್ಳಿ ಕುಮಾರ್, ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್ ಚೂಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತ ಮೂರ್ತಿ, ಚಾಮುಲ್ ಮಾಜಿ ಅಧ್ಯಕ್ಷ ನಾಗೇಂದ್ರ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಜಿಲ್ಲಾ ಕಾರ್ಯದರ್ಶಿ ರವೀಶ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬೇಡರಪುರ ಬಸವಣ್ಣ, ಎಸ್ ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು, ಮೋರ್ಚಾಗಳ ಪ್ರಧಾನ ಕಾರ್ಯದರ್ಶಿಗಳಾದ ಆನಂದ್ ಭಗಿರಥ, ಪುರುಷೋತ್ತಮ್, ರಾಮಸಮುದ್ರ ಶಿವಣ್ಣ, ನಲ್ಲೂರು ಪರಮೇಶ್, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಹರದನಹಳ್ಳಿ ರವಿ, ಮಾಧ್ಯಮ ಸಹ ವಕ್ತಾರ ಮಂಜುನಾಥ್, ವೀರೇಂದ್ರ, ಮುಖಂಡರಾದ ವೀರಭದ್ರ ಸ್ವಾಮಿ, ಎಂಎಸ್ ಚಂದ್ರಶೇಖರ್, ಗುರುಪ್ರಸಾದ್, ಭಾಸ್ಕರ್ ಹಾಗೂ ಇತರರು ಭಾಗವಹಿಸಿದರು.

## ಪದಾಧಿಕಾರಿಗಳ ಪದಗ್ರಹಣ ಸಮಾರಂಭ



ಗುಂಡ್ಲುಪೇಟೆ: ಪಟ್ಟಣದ ಜ್ಞಾನ ಭವನದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯ ಕ್ರಮವನ್ನು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿ ಡಿ ವಿ ಗುಂಡಪ್ಪ ನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಕಾರ್ಯಕ್ರಮ ನೆರವೇರಿಸಿದರು.

ನಂತರ ಮಾತನಾಡಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಭವನ ನಿರ್ಮಾಣ ಮಾಡಲುಸ್ಥಳ ಗುರುತಿಸಲಾಗಿದ್ದು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲೇ ಇರುವ ಕಾರಣ ಕೆಳಗೆ ಮಳಿಗೆ ಹಾಗೂ ಮೇಲೆ ಭವನ ನಿರ್ಮಿಸಿದರೆ ಸಂಘದ ನಿರ್ವಹಣೆಗೆ ಅನುಕೂಲವಾಗಲಿದೆ ಎಂದರು ಹಾಗೂ ಜಿಲ್ಲಾ ಪದಾಧಿಕಾರಿಗಳ ಬೇಡಿಕೆಯಂತೆ ಪತ್ರಕರ್ತರ ಕ್ಷೇಮಾಭಿವೃದ್ಧಿ ಹಾಗೂ ದತ್ತಿ ನಿಧಿಗೆ ಅಗತ್ಯ ನೆರವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಮಾಜಿ ಶಾಸಕ ಸಿ.ಎಸ್ ನಿರಂಜನ್ ಕುಮಾರ್ ಮಾತನಾಡಿ, ಯಾವುದೇ ಸಂಘಟನೆಯಾದರು ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆಯಾಗಿರುವುದು ಉತ್ತಮ ಬೆಳವಣಿಗೆಯಾಗಿದೆ, ಪತ್ರಕರ್ತರ ಕೆಲಸ ಸವಾಲಿನದಾಗಿದ್ದು, ಸುದ್ದಿ ಬರೆಯುವಾಗ ಪರ ವಿರೋಧ ಎನ್ನುವ ಮಾತು ಕೇಳಿ ಬರುತ್ತದೆ ಹಾಗಾಗಿ ಯಾವುದಕ್ಕೂ ಆಸ್ಪದ ಕೊಡದೆ ವಸ್ತುನಿಷ್ಠ ವರದಿಯನ್ನು ಬರೆಯಬೇಕು ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಸಿದ್ದಲಿಂಗಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ತಾಲ್ಲೂಕಿನಲ್ಲಿ ಪತ್ರಕರ್ತರ ಸಂಘದ ನಿರ್ಮಾಣಕ್ಕೆ ಶಾಸಕ ಗಣೇಶ್ ಪ್ರಸಾದ್ ಅವಧಿಯಲ್ಲೇ ಕಟ್ಟಡ ಉದ್ಘಾಟನೆಯಾಗಲಿ ಎಂದರು, ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಪ್ರಮಾಣ ವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್ ಬಸವರಾಜು, ಪ್ರಧಾನ ಕಾರ್ಯದರ್ಶಿ ಲಕ್ಕೂರು ಚಂದ್ರು,ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಕಬ್ಬಹಳ್ಳಿ ಮಹೇಶ್, ಎಪಿಎಂಸಿ ಅಧ್ಯಕ್ಷ ರಂಗೂಪುರ ನಾಗರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ಮುಖಂಡರಾದ ಡಾ.ನವೀನ್ ಮೌರ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ: ಫಲಾನುಭವಿಗೆ ವಾತ್ಸಲ್ಯ ಮನೆ ಹಸ್ತಾಂತರ



ರಾಮನಗರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಬಿಸಿ ಟ್ರಸ್ಟ್ ಯೋಜನೆಯ ಮಹಿಳಾ ಜ್ಞಾನ ವಿಕಾಸ ಯೋಜನೆಯಡಿ ನಿರ್ಮಿಸಿರುವ ವಾತ್ಸಲ್ಯ ಮನೆಯನ್ನು ಫಲಾನುಭವಿಗೆ ಹಸ್ತಾಂತರಿಸಲಾಗಿದೆ.

ತಾಲೂಕಿನ ಮಾಯಗಾನಹಳ್ಳಿ ವಲಯದ ಸುಗ್ಗನಹಳ್ಳಿ ಕಾರ್ಯಕ್ಷೇತ್ರದ ಬೊಮ್ಮಚ್ಚನಹಳ್ಳಿಯ ನಿವಾಸಿ ಮಂಗಳ ಗೌರಮ್ಮ ಅವರಿಗೆ ಈ ಯೋಜನೆಯ ಫಲಾನುಭವಿ ಆಗಿದ್ದಾರೆ. ಆರ್ಥಿಕವಾಗಿ ಬಡವರಾಗಿರುವ ಮಂಗಳ ಗೌರಮ್ಮ ಅವರಿಗೆ ಜೀವನ ನಿರ್ವಹಣೆಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಯಡಿಯಲ್ಲಿ ತಿಂಗಳಿಗೆ ಒಂದು ಸಾವಿರ ಮಾಸಾಶನ ನೀಡಲಾಗುತ್ತಿತ್ತು. ಇವರಿಗೆ ವಾಸ ಮಾಡಲು ಮನೆ ಇಲ್ಲದ ಕಾರಣ ಯೋಜನೆಯಡಿಯಲ್ಲಿ ವಾತ್ಸಲ್ಯ ಮನೆಯನ್ನು ನಿರ್ಮಿಸಿ ಕೊಡಲಾಗಿದೆ. ಜನ ಜಾಗೃತಿ ವೇದಿಕೆಯ ಸ್ಥಾಪಕ ಅಧ್ಯಕ್ಷ ಚಿಕ್ಕಣ್ಣಯ್ಯ ಟ್ರಸ್ಟ್ ಪರವಾಗಿ ಮನೆಯನ್ನು ಹಸ್ತಾಂತರಿಸಿ ಶುಭ ಕೋರಿದರು.

ಈ ವೇಳೆ ಮಾತನಾಡಿದ ಟ್ರಸ್ಟ್‌ನ ಮೈಸೂರು ಪ್ರಾದೇಶಿಕ ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕರಾದ ಜಯಂತ್ ಪೂಜಾರಿ ವಾತ್ಸಲ್ಯ ಕಾರ್ಯಕ್ರಮದಡಿ ರಾಜ್ಯದಲ್ಲಿ ಫಲಾನುಭವಿಗಳಿಗೆ ಮನೆಯನ್ನು ನಿರ್ಮಿಸಿ ಕೊಡಲಾಗಿದೆ ಎಂದರು. ಟ್ರಸ್ಟ್‌ವತಿಯಿಂದ ನಡೆಯುತ್ತಿರುವ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ಸುಜ್ಞಾನ ನಿಧಿ ಕಾರ್ಯಕ್ರಮ, ಕೆರೆ ಹೂಳೆತ್ತುವ ಕಾರ್ಯಕ್ರಮ, ಶುದ್ಧ ಗಂಗಾ ಕಾರ್ಯ ಕ್ರಮದ ಬಗ್ಗೆ ಮಾಹಿತಿ ಕೊಟ್ಟರು. ಇದೀಗ ಹಸ್ತಾಂತರಿಸಿರುವ ವಾತ್ಸಲ್ಯ ಮನೆ ತಾಲೂಕಿನ 5ನೇ ಮನೆಯಾಗಿದೆ. ಧರ್ಮಸ್ಥಳದ ಧರ್ಮಾ ಧಿಕಾರಿ ಡಾ ಡಿ ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಡಾ.ಹೇಮಾವತಿ ವಿ ಹೆಗ್ಗಡೆಯವರ ಕಲ್ಪನೆಯಲ್ಲಿ ಮೂಡಿ ಬಂದಿರುವ ಕಾರ್ಯಕ್ರಮ ಇದಾಗಿದೆ. ಆಶಕ್ತರಿಗೆ ವಾತ್ಸಲ್ಯ ಕಿಟ್ ಮುಖಾಂತರ ಪ್ರೊಟೀನ್ ಯುಕ್ತ ಸಿರಿ ಧಾನ್ಯ ಆಹಾರವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ರಾಮನಗರ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದ ಜಯಕರ್ ಶೆಟ್ಟಿ, ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಲ್ಲೇಶ್ ಹಾಗೂ ಗೋವಿಂದರಯ್ಯ, ತಾಲೂಕಿನ ಯೋಜನಾಧಿಕಾರಿಯವರಾದ ಮುರಳೀ ಧರ್, ಗ್ರಾಮಪದ ಪ್ರಮುಖರಾದ ಮಹಾದೇವಯ್ಯ ಮಂಜುಳ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಉ?ಾ ಕಲ್ಯಾಣಿ, ವಲಯದ ಮೇಲ್ವಿಚಾರಕ ಆಕಾಶ್, ಸೇವಾ ಪ್ರತಿನಿಧಿ ಶೋಭಾ ಮುಂತಾದವರು ಭಾಗವಹಿಸಿದ್ದದರು.

## ನಾಳೆ ಸಂವಿಧಾನೋತ್ಸವ

ಮೈಸೂರು: ಅಶೋಕಪುರಂ ಡಾ.ಬಿ.ಆರ್. ಅಂಬೇಡ್ಕರ್ ಅಭಿಮಾನಿಗಳ ಸಂಘದ ವತಿಯಿಂದ ಜ.26ರ ಬೆಳಗ್ಗೆ 8.30ಕ್ಕೆ ಪ್ರದೇಶದ ಡಾ.ಬಿ.ಆರ್.ಅಂಬೇಡ್ಕರ್ ಪಾರ್ಕ್‌ನಲ್ಲಿ ಸಂವಿಧಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಾಹಿತಿ ಸಿದ್ದಸ್ವಾಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕೆ.ಆರ್. ಸುಮತಿ, ಪ್ರೊ. ನಂಜರಾಜ ಅರಸ್, ಪುರುಷೋತ್ತಮ್, ತಾವು, ಪಲ್ಲವಿ ಬೇಗಂ, ಭಾಸ್ಕರ್, ಮಹೇಶ್, ನಾಗರಾಜು ಇನ್ನಿತರರು ಹಾಜರಿರುವರು. ಸಂವಿಧಾನ ರಚನೆಯಲ್ಲಿ ಡಾ.ಬಿ.ಆರ್. ವಹಿಸಿದ ಪಾತ್ರ ಈ ವೇಳೆ ಸ್ಮರಿಸಲಾಗುವುದೆಂದರು. ಪಲ್ಲವಿಬೇಗಂ, ಗೋವಿಂದು, ಡಾ. ರಾಜು, ಶಿವಣ್ಣ ಹಾಗೂ ಕ್ಷಮಾ ಹಾಜರಿದ್ದರು.

ಮೈಸೂರು: ಖಿದ್ಮಾ ಫೌಂಡೇಷನ್, ಅನ್ನದಾತ ಪ್ರಕಾಶನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ಗಳ ಸಂಯುಕ್ತಾಶ್ರಯದಲ್ಲಿ ಜ. 25 ರ ಬೆಳಗ್ಗೆ 9 ರಿಂದ ಸಂಜೆ 6 ರ ತನಕ ವಿಜಯನಗರ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಖಿದ್ಮಾ ಕನ್ನಡ ಸಂಗಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಅಮಿರ್ ಅಶ್ ಅರೀ ಬನ್ನೂರು ತಿಳಿಸಿದರು.ಮುಹಮ್ಮದ್ ಹುಮಾಯೂನ್ ಸರ್ವಾಧ್ಯಕ್ಷರಾಗಿದ್ದಾರೆ. ಅಮಿತಾ ಅಶೋಕ್ ಪ್ರಸಾದ್, ಮಡ್ಡಿಕೆರೆ ಗೋಪಾಲ್, ಮಲ್ನಾಡ್ ಮೆಹಬೂಬ್, ಮೆಹಬೂಬಸಾಹೇಬ್, ಎಂ. ರಾಧಾಮಣಿ ಇನ್ನಿತರರು ವೇದಿಕೆಯಲ್ಲಿರುವರು, ನವೀದ್ ಮುಲ್ಲಾ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸುವರೆಂದರು.

## ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗಾಗಿ ಸಹಿ ಸಂಗ್ರಹ



ಚಾಮರಾಜನಗರ: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗಾಗಿ ದೇಶಾದ್ಯಂತ ರೈತರಿಂದ ಸಹಿ ಸಂಗ್ರಹ ಮಾಡಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ರಾಷ್ಟ್ರೀಯ ಸಹ ಸಂಚಾಲಕ ಕುರುಬೂರು ಶಾಂತಕುಮಾರ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಅವರು, ದೇಶದ ರೈತರಿಗೆ ಎಂ ಎಸ್ ಪಿ ಖಾತರಿ ಕಾನೂನು ಇಲ್ಲದ ಕಾರಣ ವರ್ಷಕ್ಕೆ 15 ಲಕ್ಷ ಕೋಟಿ ನಷ್ಟ ಅನುಭವಿಸುತ್ತಿದ್ದಾರೆ. ಇದರ ಹಿನ್ನೆಲೆಯಲ್ಲಿ ಫೆ. 7 ರಿಂದ ರೈತ ಜಾಗೃತಿಯಾತ್ರೆ ಕನ್ಯಾಕುಮಾರಿಯಿಂದ ಆರಂಭವಾಗಿ ಕೇರಳ, ಪಾಂಡಿಚರಿ, ತಮಿಳುನಾಡು ಮುಖಾಂತರ ಹಾದು ಹೋಗಿ ಅಲ್ಲಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಯಾತ್ರೆ ಸಾಗಲಿದ್ದು, ಈ ಮಾರ್ಗದಲ್ಲಿ ಸಿಗುವ ಹಳ್ಳಿಗಳ ರೈತರಿಂದ ಸಹಿ ಸಂಗ್ರಹ ಮಾಡಲಾಗುವುದು ಎಂದರು. ಫೆ.10 ರಂದು ಚಾಮರಾಜನಗರ, 11 ರಂದು ಮೈಸೂರಿಗೆ ಮಂಡ್ಯ ರಾಮನಗರಕ್ಕೆ ಬರಲಿದೆ 12ರಂದು ಬೆಂಗಳೂರು ಚಿಕ್ಕಬಳ್ಳಾಪುರ ಮೂಲಕ ಆಂಧ್ರಕ್ಕೆ ಹೋಗಲಿದೆ ರಾಜ್ಯದಲ್ಲಿರುವ ಎಲ್ಲಾ ರೈತ ಸಂಘಟನೆಗಳ ಮುಖಂಡರು ಸ್ವಯಂ ಪ್ರೇರಿತವಾಗಿ ಈ ಯಾತ್ರೆಯನ್ನ ಹಾದು ಹೋಗುವ ಮಾರ್ಗದಲ್ಲಿ ಬೆಂಬಲಿಸಿ ನಿಮ್ಮ ನಿಮ್ಮ ಭಾಗದಲ್ಲಿ ರೈತರಿಂದ ಸಹಿ ಸಂಗ್ರಹ ಮಾಡಿದ ಪತ್ರವನ್ನು ಯಾತ್ರೆಯ ಮುಖಂಡರಿಗೆ ಸಲ್ಲಿಸಬೇಕು ಎಂದು ಮನವಿ ಮಾಡಿದರು.

ಸುಮಾರು 40 ದಿನಗಳ ಈ ಯಾತ್ರೆ ಕಾಶ್ಮೀರ ತಲುಪಿ. ನಂತರ ದೆಹಲಿಯಲ್ಲಿ ಮಾರ್ಚ್ 19 ರಂದು ರಾಮ್ ಲೀಲಾ ಮೈದಾನದಲ್ಲಿ ದೇಶದ ಎಲ್ಲಾ ರೈತರ ಬೃಹತ್ ಸಮಾವೇಶ ನಡೆಸಲಾಗುತ್ತದೆ ನಂತರ ದೇಶದ ರೈತರಿಂದ ಸಂಗ್ರಹಿಸಿರುವ ಸಹಿ ಸಂಗ್ರಹದ ಮನವಿ ಪತ್ರವನ್ನು ಪ್ರಧಾನಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ತಾಲೂಕ ಅಧ್ಯಕ್ಷ ಸತೀಶ್, ಸುಂದ್ರಪ್ಪ, ಹೆಗ್ಗೋಟರ ಶಿವಸ್ವಾಮಿ, ನವೀನ್, ಶಿವಕುಮಾರ್ ಹಾಜರಿದ್ದರು.

**ಗೌರವ ಅತಿಥಿಯಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗಿ**

## ಉತ್ತರಾಯಣ ಕಲಾ ಮತ್ತು ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ

ಮೈಸೂರು: ನಮ್ಮ ನೆಲದ ಮೂಲ ಸಂಸ್ಕೃತಿ ನಮ್ಮ ಹೆಮ್ಮೆ. ನಮ್ಮ ಸುತ್ತಮುತ್ತಲಿನ ಸಣ್ಣಪುಟ್ಟ ಗ್ರಾಮಗಳಲ್ಲಿ ಹುಟ್ಟಿ ಎಲ್ಲೆಡೆ ಹಬ್ಬಬೇಕಾದ ಸಂಸ್ಕೃತಿಯ ಆಚರಣೆ ಇತ್ತೀಚೆಗೆ ಬಹಳ ವಿರಳವಾಗುತ್ತಿದೆ. ಇಂತಹ ಸಂದರ್ಭದಲ್ಲಿ ?ಉತ್ತರಾಯಣ?ದಂತಹ ಕೇಂದ್ರದ ಮೂಲಕ ಕಲೆ ಹಾಗೂ ಸಂಸ್ಕೃತಿಯನ್ನು ಬೆಳೆಸುವ, ಅಭಿವ್ಯಕ್ತಿಪಡಿಸುವ ಕೆಲಸ ನಡೆಯುತ್ತಿರುವುದು ಶ್ಲಾಘನೀಯ ಎಂದು ಗಾಂಧಿವಾದಿ ಕಾರ್ಯಕರ್ತರು, ರಂಗನಿರ್ದೇಶಕ ಹಾಗೂ ಹೆಗ್ಗೋಡು ಚರಕದ ಸಂಸ್ಥಾಪಕ ಹೆಗ್ಗೋಡು ಪ್ರಸನ್ನ ಅಭಿಪ್ರಾಯಪಟ್ಟರು.

ನಗರದ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್‌ನಲ್ಲಿ (ಜೆಸಿಎಸಿ) ಶುಕ್ರವಾರ ನಡೆದ ?ಉತ್ತರಾಯಣ? ಕಲಾ ಮತ್ತು ಸಾಂಸ್ಕೃತಿಕ ಹಬ್ಬದ ಮೊದಲ ಆವೃತ್ತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ನಗರೀಕರಣ ಹಾಗೂ ಆಧುನೀಕರಣದಿಂದಾಗಿ ನಮ್ಮ ಸಂಸ್ಕೃತಿ ಮರೆಮಾಚಿಹೋಗುತ್ತಿದೆ. ನಮ್ಮ ನಾಡಿನ ಕೀರ್ತಿಯನ್ನು ಕಟ್ಟಿಬೆಳೆಸಿದ ಎಲ್ಲರೂ ತಂತಮ್ಮ ಬೇರನ್ನು





ಮರೆತಿರಲಿಲ್ಲ. ಅದರೊಂದಿಗೆ ಸಾಹಿತ್ಯ ಹಾಗೂ ಕಲೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದರು. ಇದೇ ರೀತಿ ಮೈಸೂರು ನಗರೀಕರಣದತ್ತ ಸಾಗುತ್ತಿರುವ ಈ ಸಂದರ್ಭದಲ್ಲಿ ಕಲೆ ಹಾಗೂ ಸಂಸ್ಕೃತಿ ಎರಡನ್ನೂ ಉಳಿಸಲು ಈ ಕೇಂದ್ರ ಸ್ಥಾಪನೆಯಾಗಿರುವುದು, ಉತ್ತರಾಯಣದಂತಹ ಕಾರ್ಯಕ್ರಮ ನಡೆಯುತ್ತಿರುವುದು ಖುಷಿಯ ಸಂಗತಿ ಎಂದರು.

ಮುಖ್ಯ ಭಾಷಣಕಾರರಾಗಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಭಾಷೆ ಹಾಗೂ ಸಂಸ್ಕೃತಿ ನಮ್ಮ ಹೆಮ್ಮೆ. ದೇಶದ ಹಾಗೂ ವಿಶ್ವದ ವಿವಿಧೆಡೆಗಳಿಂದ ಕರ್ನಾಟಕಕ್ಕೆ ವಿವಿಧ ಧರ್ಮಗಳು, ಭಾಷೆಗಳು, ಸಂಸ್ಕೃತಿಗಳು ಬಂದಿವೆ. ಇಲ್ಲಿನ ನೆಲದ ಸಂಸ್ಕೃತಿಯೊಂದಿಗೆ ಅದೂ ಬೆರೆತಿರುವುದೇ ನಮ್ಮ ವೈಶಿಷ್ಟ್ಯ. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆಯ ವೇಗ ಬಹಳ ಕಡಿಮೆಯಾಗಿದೆ. ಭಾಷೆ ಎಂದರೆ ಒಂದಿಡೀ ಪ್ರಾಂತ್ಯ, ಸಂಸ್ಕೃತಿಯ ಪ್ರತೀಕ. ಇಂತಹ ಸಮಯದಲ್ಲಿ ಉತ್ತರಾಯಣದಂತಹ ಕಾರ್ಯಕ್ರಮಗಳು ನಡೆಯಬೇಕು, ಭಾಷೆಗೆ ಹಾಗೂ ಕಲೆಯ ಅಭಿವೃದ್ಧಿಗೆ ಈ ಸ್ಥಳ ವೇದಿಕೆಯಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಗೌರವ ಅತಿಥಿಯಾಗಿ ಆಗಮಿಸಿದ್ದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ನಮ್ಮ ಪರಂಪರೆ ನಮ್ಮ ಹೆಮ್ಮೆ. ಪ್ರಪಂಚದಾದ್ಯಂತ ಪ್ರಸಿದ್ಧಿ ಪಡೆದಿರುವ ಯೋಗ ಮೈಸೂರಿನದ್ದೇ ಕೊಡುಗೆ. ಜೊತೆಗೆ ಆಗಿನ ಕಾಲದಲ್ಲಿ ರಾಮಾನುಜಾಚಾರ್ಯರಿಗೆ ಆಶ್ರಯ ಕೊಟ್ಟ ಊರು ನಮ್ಮ ಮೈಸೂರು. ಇಂತಹ ಜಾಗದಲ್ಲಿ ಕಲೆ ಹಾಗೂ ಸಂಸ್ಕೃತಿಯ ಪೋಷಣೆ ಹೆಚ್ಚಾಗಬೇಕು. ಸೂರ್ಯ ತನ್ನ ಪಥವನ್ನು ಬದಲಾಯಿಸುವ ಪುಣ್ಯಕಾಲವಾದ ಉತ್ತರಾಯಣದ ಹೆಸರಿನಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮ ಮೈಸೂರಿನ ಕಲಾ ಹಾಗೂ ಸಾಂಸ್ಕೃತಿಕ ಜಗತ್ತಿನಲ್ಲಿ ಹೊಸ ಭಾಷ್ಯ ಬರೆಯಲಿ. ಮುಂದಿನ ಆವೃತ್ತಿಗಳಲ್ಲಿ ಮೈಸೂರು ಮಾತ್ರವಲ್ಲದೆ ಬೇರೆ ಬೇರೆ ದೇಶ, ರಾಜ್ಯಗಳ ಜನರು ಇಲ್ಲಿಗೆ ಬಂದು ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳುವಂತಾಗಲಿ ಎಂದು ಆಶಿಸಿದರು. ಮಾಜಿ ಆರ್ ಮತ್ತು ಎಡಬ್ಲ್ಯೂ ಆಫೀಸರ್ ರವಿ ಜೋಷಿ, ಹಿರಿಯ ತಾಳವಾದಕ ವಿದ್ವಾನ್ ಅನೂರ್ ಅನಂತಕೃಷ್ಣಶರ್ಮ, ಜೆಸಿಎಸಿಯ ಅಧ್ಯಕ್ಷ ಜಗನ್ನಾಥ ಶಣೈ, ಕಾರ್ಯಕ್ರಮದ ಸಂಯೋಜಕ ವಿ.ಮಾನಸ ನಯನ, ಡಾ.ಕೃಪಾ ಫಡ್ಕೆ, ವಿ.ಸಾಯಿ ಶಿವ್, ಡಾ.ರಮಾ ವಿ.ಬೆಣ್ಣೂರ್ ಸೇರಿ ಮತ್ತಿತರರು ಹಾಜರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ವಿದ್ವಾನ್ ಅನೂರ್ ಅನಂತಕೃಷ್ಣಶರ್ಮ ಮತ್ತು ತಂಡದವರಿಂದ ಲಯ ಲಾವಣ್ಯ ಸಂಗೀತ ಕಾರ್ಯಕ್ರಮ ನಡೆಯಿತು. ಶನಿವಾರ ಉತ್ತರಾಯಣದಲ್ಲಿ ಬೆಳಿಗ್ಗೆ ?ಆರ್ಟ್ – ವೇ ಆಫ್ ಲೈಫ್?, ?ಚೇಂಜಿಂಗ್ ಪರ್‌ಸ್ಪೆಕ್ಟಿವ್ ಆಫ್ ಇಂಡಿಯನ್ ಸಿನಿಮಾ? ಎಂಬ ವಿಷಯಗಳ ಬಗ್ಗೆ ಚರ್ಚೆ, ಕರ್ನಾಟಿಕ ಮ್ಯೂಸಿಕ್ ಹಾಗೂ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ, ಕುಹೂ ಎಂಬ ನಾಟಕ ಪ್ರದರ್ಶನ ನಡೆಯಿತು.

# ಸಂಕ್ಷಿಪ್ತ ಸುದ್ದಿ

## ಜ. 25 ರಂದು 16ನೇ ರಾಷ್ಟ್ರೀಯ ಮತದಾರರ ದಿನ

**ಮಂಡ್ಯ;** ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರುಗಳ ಸಹಯೋಗದೊಂದಿಗೆ 16ನೇ ರಾಷ್ಟ್ರೀಯ ಮತದಾರ ದಿನವ ಕಾರ್ಯಕ್ರಮವನ್ನು ಜನವರಿ 25ರಂದು ಬೆಳಿಗ್ಗೆ 10 ಗಂಟೆಗೆ ಡಿ ದೇವರಾಜ ಅರಸು ಭವನದಲ್ಲಿ ಏರ್ಪಡಿಸಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರಾದ ಸುಬ್ರಹ್ಮಣ್ಯಜೆ.ಎನ್. ರವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ.

ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಆನಂದ್ ಎಮ್. ರವರು ಘನ ಉಪಸ್ಥಿತಿ ವಹಿಸಲಿದ್ದಾರೆ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಗಳಾದ ಡಾ. ಕುಮಾರ ರವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಆರಕ್ಷಕ ಅಧೀಕ್ಷಕರಾದ ಶೋಭಾರಾಣಿ ವಿ. ಜೆ ರವರು ಭಾಗವಹಿಸಲಿದ್ದಾರೆ.

ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಯಾದ ಬಿ. ಸಿ ಶಿವಾನಂದಮೂರ್ತಿ ರವರು ಪ್ರಾಸ್ತವಿಕ ನುಡಿ ನುಡಿಯಲಿದ್ದಾರೆ.

ಉಪ ವಿಭಾಗ ಅಧಿಕಾರಿಯಾದ ಎಂ ಶಿವಮೂರ್ತಿ, ಮಂಡ್ಯ ತಾಲ್ಲೂಕಿನ ತಾಸಿಲ್ದಾರ್ ರಾದ ವಿಶ್ವನಾಥ್ ಎಸ್., ನಗರಸಭೆ ಪೌರಾಯುಕ್ತರಾದ ಪಂಪಶ್ರೀ ಯು.ಪಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಜನವರಿ 26ರಂದು 77ನೇ ಗಣರಾಜ್ಯೋತ್ಸವ ದಿನಾಚರಣೆ

**ಮಂಡ್ಯ:** ಮಂಡ್ಯ ಜಿಲ್ಲಾ,ಜಿಲ್ಲಾಡಳಿತದಿಂದ 77ನೇ ಗಣರಾಜ್ಯೋತ್ಸವ ದಿನವನ್ನು ಜನವರಿ 26ರಂದು 9 ಗಂಟೆಗೆ ಸರ್ ಎಂ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಮಂಡ್ಯ ವಿಧಾನಸಭಾ ಶಾಸಕರಾದ ಪಿ.ರವಿಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ. ಮೂರ್ತಿ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್.ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಪಿ ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ ಭಾಗವಹಿಸಲಿದ್ದಾರೆ.

# ಗ್ರಾ.ಪಂ.– ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚನೆ

**ಮಂಡ್ಯ:** ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಭಿಯಂತರರುಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಬೇಕು ಎಂದು ಜಿ.ಪಂ. ಸಿಇಓ ನಂದಿನಿ ಕೆ.ಆರ್. ಅವರು ಸೂಚಿಸಿದರು.



ಜಿ.ಪಂ.ನಲ್ಲಿ ನಡೆದ ಜಿಲ್ಲಾ ಮಟ್ಟದ ಕುಡಿಯುವ ನೀರಿನ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ಹೋಬಳಿ ಮಟ್ಟದಲ್ಲಿ ಸಮನ್ವಯ ಸಭೆಗಳನ್ನು ಮಾಡಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪಟ್ಟಿ ಮಾಡಿ, ಸಮಸ್ಯೆಗಳನ್ನು ಪರಿಹರಿಸುವ ಜೊತೆಗೆ ನೀರುಗಂಟಿಗಳು ನೀರು ನಿರ್ವಹಣೆಯನ್ನು ಮಾಡುವ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳನ್ನು ಯಾವ ರೀತಿ ಪರಿಹರಿಸಬೇಕು ಎಂಬ ಬಗ್ಗೆ ಪ್ರಾಯೋಗಿಕ ತರಬೇತಿ ನೀಡುವಂತೆ ತಿಳಿಸಲಾಗಿತ್ತು, ಅದರಂತೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಕ್ರಮವಹಿಸುವಂತೆ ಸೂಚಿಸಿದರು.

ಜಲ ಜೀವನ ಮಿಷನ್ ಯೋಜನೆಯಡಿ ಅಳವಡಿಸಲಾಗಿರುವ ಪೈಪ್ ಲೈನ್ ಅನ್ನು ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಮಾಡುವ ಸಂದರ್ಭದಲ್ಲಿ ಕಿತ್ತುಹಾಕಲಾಗಿದ್ದು, ಸದರಿ ಪೈಪ್ ಲೈನ್ ಅನ್ನು ಸಂಬಂಧಪಟ್ಟ ಇಲಾಖೆಯಿಂದಲೇ ದುರಸ್ತಿ ಮಾಡಿಸಬೇಕಾಗಿರುತ್ತದೆ, ಈ ಬಗ್ಗೆ ಪಿಡಬ್ಲ್ಯುಡಿ, ಕೆ.ಆರ್.ಐ.ಡಿ.ಎಲ್. ಮತ್ತು ಪಿ.ಆರ್.ಇ.ಡಿ. ಕಾರ್ಯಪಾಲಕ ಅಭಿಯಂತರರುಗಳು ಸಂಬಂಧಪಟ್ಟ ಗುತ್ತಿಗೆದಾರರಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ಸೂಚಿಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇಂಜಿನಿಯರ್ ಗಳು ಕೂಡ ಪೈಪ್ ಅಳವಡಿಸುವ ಸಂದರ್ಭದಲ್ಲಿ ರಸ್ತೆ ಕತ್ತರಿಸಲು ಸಂಬಂಧಪಟ್ಟ ಇಲಾಖೆಯಿಂದ ನಿಯಮಾನುಸಾರ ಅನುಮತಿ ಪಡೆಯಬೇಕು ಹಾಗೂ ರಸ್ತೆ ಕತ್ತರಿಸಿದ ಬಾಗವನ್ನು ಪೈಪ್ ಅಳವಡಿಸಿದ ಕೂಡಲೇ ಮುಚ್ಚಲು ಕ್ರಮವಹಿಸಬೇಕು. ಟ್ರಯಲ್ ರನ್ ಮುಗಿದ ಕೂಡಲೇ ರಸ್ತೆಯನ್ನು ಮರುಪೂರಣಗೊಳಿಸಲು ಕ್ರಮವಹಿಸಬೇಕು ಎಂದು ತಿಳಿಸಿದರು.

ಬಹುಗ್ರಾಮ ಕುಡಿಯುವ ನೀರು ಯೋಜನೆ ತ್ವರಿತವಾಗಿ ಪೂರ್ಣಗೊಳಿಸಿ: ಮದ್ದೂರು ತಾಲ್ಲೂಕಿನಲ್ಲಿ ಪ್ರಗತಿಯಲ್ಲಿರುವ 3 ಮತ್ತು ಮಳವಳ್ಳಿ ತಾಲ್ಲೂಕಿನಲ್ಲಿ ಪ್ರಗತಿಯಲ್ಲಿರುವ 1 ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಿಇಓ ಅವರು ಸೂಚಿಸಿದರು.

ಪಾಂಡವಪುರ, ಕೆ.ಆರ್.ಪೇಟೆ ಮತ್ತು ನಾಗಮಂಗಲ ತಾಲ್ಲೂಕಿನ ಜನವಸತಿಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಉದ್ದೇಶದಿಂದ ತೆಗೆದುಕೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿ ಸಾಕಷ್ಟು ವಿಳಂಬವಾಗುತ್ತಿದ್ದು, ಸಾಕಷ್ಟು ಪ್ರಮಾಣದ ಮಾನವ ಸಂಪನ್ಮೂಲವನ್ನು ನಿಯೋಜಿಸಿಲ್ಲದ ಕಾರಣ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿ, ಮುಂದಿನ ಸಭೆಗೆ ಎಲ್ ಅಂಡ್ ಟಿ ಸಂಸ್ಥೆಯಿಂದ ಜವಬ್ದಾರಿಯುತ ಸಿಬ್ಬಂದಿಯನ್ನು ಸಭೆಗೆ ನಿಯೋಜಿಸುವಂತೆ ಸೂಚಿಸಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯ್ದ ಗ್ರಾಮ ಪಂಚಾಯತ್ ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಆಯ್ದ ನೀರು ಗಂಟಿಗಳು ಸಭೆಯಲ್ಲಿ ಭಾಗವಹಿಸಿದ್ದು, ಜಲ ಜೀವನ ಮಿಷನ್ ಯೋಜನೆಯಡಿ ಆಗಬೇಕಾಗಿರುವ ಕೆಲಸಗಳ ಕುರಿತು ಮಾಹಿತಿ ನೀಡಿದರು. ಸದರಿ ಕೆಲಸಗಳ ಪಟ್ಟಿ ಮಾಡಿಕೊಂಡು ಎಲ್ಲಾ ಸಂಬಂಧಪಟ್ಟ ಅಭಿಯಂತರರು ಒಂದು ವಾರದೊಳಗೆ ಅಗತ್ಯ ಕ್ರಮವಹಿಸುವಂತೆ ಸಿಇಓ ಅವರು ಸೂಚಿಸಿದರು.


ಸಭೆಯಲ್ಲಿ ಮೈಸೂರು ವೃತ್ತದ ಅಧೀಕ್ಷಕ ಇಣಜಿನಿಯರ್ ಅಡಿವೆಪ್ಪ ವೀರಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಪ್ರಮೋದ್ ಕುಮಾರ್ ಎನ್.ಜಿ., ಪಿ.ಡಬ್ಲ್ಯು.ಡಿ. ಕಾರ್ಯಪಾಲಕ ಅಭಿಯಂತರರಾದ ಪುರುಷೋತ್ತಮ್, ಪಿ.ಆರ್.ಇ.ಡಿ. ಕಾರ್ಯಪಾಲಕ ಅಭಿಯಂತರರಾದ ನಾಗರಾಜ್, ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಮತ್ತು ಇತರರು ಹಾಜರಿದ್ದರು.

# ಶಿಕ್ಷಣದ ಜೊತೆಗೆ ಶೈಕ್ಷಣಿಕ ಚಟುವಟಿಕೆ ಇರಲಿ

**ಚಿಕ್ಕಬಳ್ಳಾಪುರ:** ಮಕ್ಕಳ ಸರ್ವಾಂಗೀಣ ಅಭಿವೃದ್ಧಿ, ಆತ್ಮವಿಶ್ವಾಸ ಮತ್ತು ಆಸಕ್ತಿಯ ಕಲಿಕೆಗೆ ಪೋಷಕರ ಮತ್ತು ಶಿಕ್ಷಕರ ನಿರಂತರ ಪ್ರೋತ್ಸಾಹ ಅತಿ ಅತ್ಯಗತ್ಯವಾಗಿದೆ ಎಂದು ಚಿತ್ರನಟ ಹಾಗೂ ನಿರ್ಮಾಪಕ ಗಣೇಶ್ ರಾವ್ ಕೆಸರ್ಕಾರ್ ತಿಳಿಸಿದರು.

ಅವರು ಚಿಕ್ಕಬಳ್ಳಾಪುರ ನಗರದ ಪ್ರಕೃತಿ ವಿದ್ಯಾನಿಕೇತನ್ ಶಾಲೆಯಲ್ಲಿ 19ನೇ ವರ್ಷದ ಶಾಲಾ ವಾರ್ಷಿಕೋತ್ಸವ ಹಾಗೂ 'ಪ್ರಕೃತಿ ಸಂಭ್ರಮ–2026' ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ ಮಾತನಾಡಿ, ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡುವ ಶಿಕ್ಷಕರು ಹಾಗೂ ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಕಷ್ಟಪಟ್ಟು ಶಾಲೆಗೆ ಕಲಿಸುವ ಪೋಷಕರು ಆಗಿಂದ್ದಾಗ್ಗೆ ಮಕ್ಕಳ ಕಲಿಕೆಯ ಚಲನ ವಲನದ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ವಿದ್ಯೆಗೆ ಅದೇ ರೀತಿ ಕಲಿಕೆಯಲ್ಲಿ ಚಟುವಟಿಕೆಗಳ ಬಳಕೆ, ಸುರಕ್ಷಿತ ವಾತಾವರಣ ಬಹು ಮುಖ್ಯ ಇಲ್ಲಿನ ಶಾಲಾ ವಾತಾವರಣ ತುಂಬಾ ಚನ್ನಾಗಿದೆ, ಈ ವಾತಾವರಣ ಮಕ್ಕಳಲ್ಲಿ ಕೌಶಲ್ಯಗಳನ್ನು ವೃದ್ಧಿಸಿ, ಶೈಕ್ಷಣಿಕವಾಗಿ ಹಾಗೂ ವೈಯಕ್ತಿಕವಾಗಿ ಯಶಸ್ವಿಯಾಗಲು ಸಹಾಯ ಮಾಡುತ್ತದೆ ಶಿಕ್ಷಕರ ಜೊತೆ ಪೋಷಕರು ಸಹ ಮಕ್ಕಳ ಕಲಿಕೆಯತ್ತ ಆಸಕ್ತಿ ವಹಿಸಬೇಕು, ಮಕ್ಕಳ ಕಲಿಕೆಯನ್ನು ಪ್ರೋತ್ಸಾಹಿಸಲು ಇಂತಹ ಕಾರ್ಯಕ್ರಮಗಳು ಪೂರಕವಾಗಲಿವೆ ಎಂದರು.

ಸಂಸ್ಥೆಯ ಪ್ರಾಂಶುಪಾಲ ವೈ.ವಿ.ಆನಂದ್ ಶಾಲಾ ವಾರ್ಷಿಕೋತ್ಸವ ವರದಿ ವಾಚಿಸಿ, ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಚಟುವಟಿಕೆ ಆಧಾರಿತ ಕಲಿಕೆಯೊಂದಿಗೆ ಕಳೆದ 18 ವರ್ಷಗಳಿಂದಲೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರಲಾಗಿದೆ. ಆಟ–ಪಾಠಗಳ ಮೂಲಕ ಕಲಿಕೆ ಮುಂದುವರಿಸಲಾಗುತ್ತಿದ್ದು ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ, ಇದರಿಂದಾಗಿ ಉತ್ತಮ ಫಲಿತಾಂಶ ಬರುತ್ತಿದೆ. ವಿದ್ಯಾರ್ಥಿಗಳ ಶಾಲಾ ಫಲಿತಾಂಶದ ಜೊತೆಗೆ ವಿವಿಧ ಕ್ರೀಡಾಕೂಟಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸಿ ವಿವಿಧ ಕಡೆಗಳಲ್ಲಿ ಪ್ರಶಸ್ತಿಗಳನ್ನ ತಂದುಕೊಟ್ಟಿದ್ದಾರೆ ಅವರ ಉಜ್ವಲ ಭವಿಷ್ಯಕ್ಕೆ ಶಾಲೆ ಭದ್ರಬುನಾದಿಯಾಗಿದೆ ಎಂದರು.



# ಮಂಡ್ಯದಲ್ಲಿ 7 ವರ್ಷಗಳ ನಂತರ ಆಟೋ ದರ ಪರಿಷ್ಕರಣೆ: ಡಾ. ಕುಮಾರ

**ಮಂಡ್ಯ:** ಕಳೆದ ಏಳು ವರ್ಷಗಳಿಂದ ಆಟೋರಿಕ್ಷಾ ಬಾಡಿಗೆ ದರ ಪರಿಷ್ಕರಣೆಯಾಗದ ಹಿನ್ನಲೆಯಲ್ಲಿ ಹಾಗೂ ಎಲ್.ಪಿ.ಜಿ./ಪೆಟ್ರೋಲ್/ಡೀಸಲ್ ದರಗಳಲ್ಲಿ ಮತ್ತು ವಾಹನಗಳ ನಿರ್ವಹಣೆ ಮತ್ತು ಇತರೆ ವೆಚ್ಚಗಳಲ್ಲಿ ಗಣನೀಯ ಪ್ರಮಾಣದ ಏರಿಕೆಯಾಗಿರುವುದನ್ನು ಪರಿಗಣಿಸಿ ಸಾರ್ವಜನಿಕರ ಮತ್ತು ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಹಿತದೃಷ್ಟಿಯಿಂದ ಆಟೋ ದರ ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಆಟೋ ವಾಹನಗಳ ದರವನ್ನು ನಿಗದಿ ಪಡಿಸುವ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆಟೋ ಪ್ರಯಾಣದ ಕನಿಷ್ಠ ಮೊದಲ 1.9 ಕಿ.ಮೀ.ಗೆ 2017 ರಲ್ಲಿ ರೂ 25 ಅನ್ನು ನಿಗದಿಪಡಿಸಲಾಗಿತ್ತು ಪ್ರಸ್ತುತ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ರೂ 5 ಅನ್ನು ಹೆಚ್ಚಿಸಿದೆ ಆಟೋ ಪ್ರಯಾಣದ ಕನಿಷ್ಠ ಮೊದಲ 1.9 ಕಿ.ಮೀ.ಗೆ ರೂ 30 ಅನ್ನು ಪಾವತಿಸಬೇಕಾಗಿದೆ ಎಂದು ಹೇಳಿದರು.



1.9 ಕಿ.ಮೀ ನಂತರದ ಪ್ರತಿ ಕಿ.ಮೀಗೆ ಕಾಯುವ ದರ ಮೊದಲ ರೂ 13 ಇತ್ತು ಈಗ ಎರಡು ರೂಪಾಯಿಯನ್ನು ಹೆಚ್ಚಿಸಲಾಗಿದೆ 5 ನಿಮಿಷ 1.9 ಕಿ.ಮೀ ನಂತರದ ಪ್ರತಿ ಕಿ.ಮೀ ಗೆ ರೂ 15 ಅನ್ನು ಪಾವತಿಸಬೇಕು. ಮೊದಲು 5 ನಿಮಿಷಗಳ ಕಾಯುವ ದರವನ್ನು ಮೊದಲಿನಂತೆ ಉಚಿತ ಮಾಡಲಾಗಿದೆ ಎಂದು ಹೇಳಿದರು.

ಕಾಯುವಿಕೆಯ ನಂತರದ ಪ್ರತಿ 15 ನಿಮಿಷ ಅಥವಾ ಅದರ ಅರ್ಧ ಭಾಗಕ್ಕೆ ಮುಂಚಿನಂತೆಯೆ ರೂ 5 ಅನ್ನು ನಿಗದಿಪಡಿಸಲಾಗಿದೆ. ಲಗ್ಗೇಜು ದರವನ್ನು ಮೊದಲ 20 ಕೆ.ಜಿ ವರೆಗೆ ಉಚಿತವಾಗಿ ನೀಡಲಾಗುತ್ತದೆ. 20 ಕೆ.ಜಿ ಅಥವಾ ಹೆಚ್ಚಿನ ತೂಕದ ಲಗ್ಗೇಜಿಗೆ ಮೊದಲಿಗಿಂತ ರೂ 3 ಅನ್ನು ಹೆಚ್ಚಿಸಲಾಗಿದ್ದು 20 ಕೆ.ಜಿ ಗಿಂತ ಅಧಿಕ ತೂಕದ ಲಗ್ಗೇಜಿಗೆ ರೂ 5 ಪಾವತಿಸಬೇಕಾಗಿರುತ್ತದೆ. ಲಗ್ಗೇಜು ತೂಕದ ಗರಿಷ್ಠ ತೂಕವನ್ನು ಮೊದಲಿನಂತೆಯೇ 50 ಕೆ.ಜಿ ಗೆ ಮಿತಿಗೊಳಿಸಲಾಗಿದೆ ಎಂದು ಹೇಳಿದರು.

ರಾತ್ರಿ ವೇಳೆ ಆಟೋ ಪ್ರಯಾಣ ದರವನ್ನು ರಾತ್ರಿ 10 ರಿಂದ ಬೆಳಿಗ್ಗೆ 5 ಗಂಟೆಗಳವರೆಗೆ ಮೊದಲಿನಂತೆ ಸಾಮಾನ್ಯ ದರ ಅರ್ಧದಷ್ಟು ಹೆಚ್ಚು ಪಾವತಿಸಬೇಕು. ಆಟೋ ಚಾಲಕರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸೂಚಿಸಿರುವ ದರಕ್ಕಿಂತ ಹೆಚ್ಚಿನ ಹಣವನ್ನು ಪ್ರಾಮಾಣಿಕರ ಬಳಿ ಕೇಳುವಂತಿಲ್ಲ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕಿ ಶೋಭಾರಾಣಿ ವಿ ಜೆ, ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ ಸೇರಿದಂತೆ ಅಧಿಕಾರಿಗಳು ಮತ್ತು ಆಟೋ ಚಾಲಕರ ಸಂಘ ಅಧ್ಯಕ್ಷರು ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು.

# ನಾಗಲಾಂಬಿಕೆದೇವಿ ದೇಗುಲದ ಅದ್ದೂರಿ ವಾರ್ಷಿಕೋತ್ಸವ

**ಕೋಲಾರ:** ತಾಲ್ಲೂಕಿನ ಸೂಲೂರು ಮುಖ್ಯ ರಸ್ತೆಯಲ್ಲಿರುವ ಚೋಡದೇನಹಳ್ಳಿ ನರಸಾಪುರ ಹೋಬಳಿಯಲ್ಲಿ ನೆಲೆಸಿರುವ ಶ್ರೀಕ್ಷೇತ್ರನಾಗಲಾಂಬಿಕೆದೇವಿ ದೇವಾಲಯದ 13ನೇ ವರ್ಷದ ವಾರ್ಷಿಕೋತ್ಸವ ಅದ್ದೂರಿಯಾಗಿ ನಡೆಯಿತು.

ಗುರುವಾರ ಮತ್ತು ಶುಕ್ರವಾರದಂದು ಗಣಪತಿ ಪೂಜೆ, ಪುಣ್ಯಾಹ, ರಕ್ಷಾಬಂಧನ, ಅಭಿಷೇಕ, ನವಗ್ರಹ ಪೂಜೆ, ವಾಸ್ತುಹೋಮ, ತ್ರಿಮೂರ್ತಿ ಹೋಮ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ ನಂತರ ಬಂದಂತಹ ಭಕ್ತಾಧಿಗಳಿಗೆ ಅನ್ನಸಂತರ್ಪಣೆ ನಡೆಯಿತು.

ಸಾವಿರಾರು ಮಂದಿ ಪೂಜಾಕಾರ್ಯಗಳಲ್ಲಿ ಪಾಲ್ಗೊಂಡು ದೇವರ ಸೇವೆ ನೆರವೇರಿಸಿ ದೇವಾಲಯದ ಶಕ್ತಿ ಮತ್ತು ಪವಾಡಗಳನ್ನು ವಿವರಿಸಿದರ. ಕಲಶ ಕುಣಿತ, ಅಗ್ನಿಕುಂಡ ಪ್ರವೇಶ, ಬಾಳದಿಂಡಿನ ಬಲಿ ಮುಂತಾದ ಪಾರಂಪರಿಕ ದೇವತಾ ಕಾರ್ಯಗಳು ಶ್ರದ್ಧಾ ಭಕ್ತಿಯಿಂದ ನಡೆಯಿತು.

ಅಂಜಿನಮ್ಮ ಮತ್ತು ತಿಮ್ಮರಾಯಪ್ಪ ಹಾಗೂ ದೇವಿ ಆರಾಧಕರಾದ ಟಿ.ಸುನಿಲ್, ಗ್ರಾಮಸ್ಥರಾದ ಸಿಬಿ ನಾಗಾರ್ಜುನ, ಸಿ.ಮೋಹನಗೌಡ, ಇ.ನಾಗರಾಜ್, ಸಿ.ವೆಂಕಟೇಶಪ್ಪ, ಸೇವಾಕರ್ತರಾಗಿ ನಾಗವೇಣಿ, ಲೋಕೇಶ್ ಹಾಗೂ ಭಕ್ತಾಧಿಗಳು, ಚೌಡದೇನಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಸ್ಥರು ದೇವತಾ ಕಾರ್ಯಗಳನ್ನು ನಡೆಸಿಕೊಟ್ಟರು.



# ಭ್ರಷ್ಟ ಅಧಿಕಾರಿಗಳು ಮತ್ತು ಏಜೆನ್ಸಿ ವಿರುದ್ಧ ಕ್ರಮ ಜರುಗಿಸಿ: ರೈತ ಸಂಘ



**ಕೆ.ಆರ್.ಪೇಟೆ:** ಕಳಪೆ ರಾಗಿ ಪೂರೈಕೆ ಮಾಡಿ ತಾಲೂಕಿನ ಬಡವರಿಗೆ ಕಲ್ಲುಮಣ್ಣು ತಿನಿಸಿದ ಭ್ರಷ್ಟ ಅಧಿಕಾರಿಗಳು ಮತ್ತು ಏಜೆನ್ಸಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ತಾಲೂಕು ರೈತಸಂಘದ ಮುಖಂಡರು ಆಗ್ರಹಿಸಿದರು.

ಪಟ್ಟಣದ ತಾಲೂಕು ಕಛೇರಿಯ ಸಭಾಂಗಣದಲ್ಲಿ ಆಹಾರ ಇಲಾಖೆಯ ಜಿಲ್ಲಾ ನಿರ್ದೇಶಕ ಪ್ರತೀಕ್ ಹೆಗ್ಗಡೆ ಅವರ ಮುಂದೆ ಕಳಪೆ ರಾಗಿಯನ್ನು ಪ್ರದರ್ಶಿಸಿದ ರೈತರು ಗುಣಮಟ್ಟ ಪರಿಶೀಲನೆ ಮಾಡದೆ ನ್ಯಾಯಬೆಲೆ ಅಂಗಡಿಗಳ ಮೂಲಕ ಕಲ್ಲು ಮಣ್ಣುಗಳಿಂದ ಕಲುಷಿತಗೊಂಡಿರುವ ಕಳಪೆ ರಾಗಿ ಪೂರೈಸಿದವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದರು.

ಜಿಲ್ಲಾ ರೈತಸಂಘದ ಮಾಜಿ ಅಧ್ಯಕ್ಷ ಎಂ.ವಿ.ರಾಜೇಗೌಡ ಮಾತನಾಡಿ ತಾಲೂಕಿನಲ್ಲಿ ಗ್ರಾಹಕರಿಗೆ ಕಳಪೆ ಗುಣಮಟ್ಟದ ಪಡಿತರ ರಾಗಿ ವಿತರಣೆಯ ಬಗ್ಗೆ ರೈತಸಂಘ ಪ್ರತಿಭಟನೆ ಮಾಡಿ ಅದು ಪತ್ರಿಕೆಗಳಲ್ಲೂ ವರದಿಯಾಗಿತ್ತು. ಪತ್ರಿಕೆಗಳಲ್ಲಿ ವರದಿ ಬಂದ ಮೇಲಾದರೂ ಆಹಾರ ಇಲಾಖೆಯ ಮೇಲಧಿಕಾರಿಗಳು ತಾಲೂಕಿಗೆ ಆಗಮಿಸಿ ರಾಗಿಯ ಗುಣಮಟ್ಟ ಪರಿಶೀಲನೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಮುಂದಾಗಬೇಕಾಗಿತ್ತು. ವಿದ್ಯಾವಂತರು ತಮ್ಮ ಬುದ್ದಿ ಸಾಮರ್ಥ್ಯದಿಂದ ಸರ್ಕಾರಿ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಬುದ್ಧಿಶಕ್ತಿಯನ್ನು ಬಳಸಿ ಸಮಾಜದ ಕಾವಲುಗಾರರಾಗಿ ಕೆಲಸ ಮಾಡಿ.

ಸಮಾಜವನ್ನು ಕಾಯುವುದಕ್ಕಾಗಿಯೇ ಸರ್ಕಾರ ನಿಮಗೆ ಲಕ್ಷಗಟ್ಟಲೆ ವೇತನ ನೀಡುತ್ತಿದೆ. ಅಧಿಕಾರಿಗಳು ಕಂಡು ಹಿಡಿಯಬೇಕಾದ ಲೋಪದೋಷಗಳನ್ನು ರೈತಸಂಘ ಕಂಡು ಹಿಡಿದು ಪ್ರತಿಭಟಿಸಬೇಕಾದ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮೋಸಗಾರರ ಪರ ನಿಂತು ಬಡವರಿಗೆ ಮಣ್ಣು ತಿನ್ನಿಸುವ ಕೆಲಸ ಮಾಡಬೇಡಿ. ರೈತರಿಗೆ ಕಲ್ಲು ಮಣ್ಣು ತಿನ್ನುವ ಭಾಗ್ಯವನ್ನು ನೀಡಬೇಡಿ. ಕಳಪೆ ಪಡಿತರ ಧಾನ್ಯಗಳನ್ನು ತಿರಸ್ಕರಿಸಿ ಎಂದು ನೀವು ಜನರಿಗೆ ಹೇಳುತ್ತೀರಿ. ಸರ್ಕಾರ ನೀಡುವ ಮರ?ನಾಲ್ಕು ಕೆ.ಜಿ ಪಡಿತರವನ್ನು ತಿರಸ್ಕರಿಸಿ ಬಡಜನರು ತಮ್ಮ ಸ್ವಂತ ಹಣ ಮತ್ತು ಸಮಯವನ್ನು ವೆಚ್ಚಮಾಡಿಕೊಂಡು ನೀವು ಇರುವ ಜಾಗವನ್ನು ಹುಡುಕಿಕೊಂಡು ಬಂದು ದೂರು ನೀಡಬೇಕಾ? ಜನರು ದೂರು ಕೊಟ್ಟಾಗ ಮಾತ್ರ ಪರಿಸೀಲಿಸುವುದಾರೆ ನಿಮ್ಮ ಜವಾಬ್ದಾರಿ ಏನು? ಏಜೆನ್ಸಿ ನೀಡಿದನ್ನು ಪರಿಶೀಲಿಸದೆ ಗ್ರಾಹಕರಿಗೆ ವಿತರಿಸುವುದಾದರೆ ನಿಮ್ಮ ಇಲಾಖೆಯ ಅಗತ್ಯವೇನು? ಎಂದು ಆಹಾರ ಇಲಾಖೆಯ ಜಿಲ್ಲಾ ನಿರ್ದೇಶಕ ಪ್ರತೀಕ್ ಹೆಗ್ಗಡೆ ಅವರನ್ನು ತರಾಟೆಗೆ ತೆಗೆದುಕೊಂಡರು.

ಆಹಾರ ಇಲಾಖೆಯ ಜಿಲ್ಲಾ ನಿರ್ದೇಶಕ ಪ್ರತೀಕ್ ಹೆಗ್ಗಡೆ ಮಾತನಾಡಿ ನ್ಯಾಯಬೆಲೆ ಅಂಗಡಿಗಳಿಗೆ ಪೂರೈಕೆಯಾಗುವ ಪಡಿತರ ಆಹಾರ ಧಾನ್ಯಗಳ ಗುಣಮಟ್ಟವನ್ನು ಆಹಾರ ನಿಯಂತ್ರಣ ಇಲಾಖೆ (ಎಫ್.ಸಿ.ಎ) ಪರಿಶೀಲಿಸದ ಅನಂತರವೇ ಅದು ನಮ್ಮ ಇಲಾಖೆಯ ಮದ್ಯಂತರ ಗೋದಾಮಿಗೆ ಬರುತ್ತದೆ. ಅಲ್ಲಿಂದ ಅದನ್ನು ನಮ್ಮ ಇಲಾಖೆ ಸಾರ್ವಜನಿಕ ವಿತರಣೆಗೆ ನೀಡುತ್ತದೆ. ಪ್ರಸ್ತುತ ಕೆ.ಆರ್.ಪೇಟೆ ತಾಲೂಕಿಗೆ ಪೂರೈಕೆಯಾಗಿರುವ ರಾಗಿ ಹಾಸನ ಜಿಲ್ಲೆಯ ಜಾವಗಲ್ ಗೋದಾಮಿನಿಂದ ಪೂರೈಕೆಯಾಗಿದೆ. ನನಗೆ ಹತ್ತು ದಿನಗಳ ಕಾಲಾವಕಾಶ ನೀಡಿ. ಹಾಸನ ಜಿಲ್ಲೆಯ ಆಹಾರ ಇಲಾಖೆಯ ನಿರ್ದೇಶಕರನ್ನು ನನ್ನ ಜೊತೆ ಕೆ.ಆರ್.ಪೇಟೆ ಪಟ್ಟಣಕ್ಕೆ ಕರೆತಂದು ನಿಮ್ಮ ಮುಂದೆ ಮತ್ತೆ ಚರ್ಚಿಸುತ್ತೇನೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆನ್ನುವ ರೈತಸಂಘದ ವಾದಕ್ಕೆ ನನ್ನ ವಿರೋಧವಿಲ್ಲ. ಕಳೆಪ ರಾಗಿ ಪೂರೈಕೆಯಾಗಿರುವ ಬಗ್ಗೆ ನಾನು ಇಲಾಖೆಯ ಮೇಲಧಿಕಾರಿಗಳ ಗಮನಕ್ಕೂ ತಂದು ಸೂಕ್ತ ತನಿಖೆಗೆ ಅಗತ್ಯ ವರದಿ ನೀಡುತ್ತೇನೆ. ಪ್ರತಿ ನ್ಯಾಯಬೆಲೆ ಅಂಗಡಿಗಳ ಮುಂದೆ ನಮ್ಮ ಇಲಾಖೆಯ ಸಹಾಯವಾಣಿ ನಂ.1967 ನ್ನು ಬಹಿರಂಗವಾಗಿ ಪ್ರದರ್ಶಿಸಬೇಕು. ಈಬಗ್ಗೆ ಎಲ್ಲಾ ನ್ಯಾಯಬೆಲೆ ಅಂಗಡಿ ಮಾಲೀಕರಿಗೂ ಸೂಚಿಸುತ್ತೇನೆ. ಗ್ರಾಹಕರು ಕಳಪೆ ಪಡಿತರ ಪೂರೈಕೆಯಾದರೆ ಅದನ್ನು ನಿರಾಕರಿಸಿ ನಮ್ಮ ಇಲಾಖೆಯ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ದೂರು ನೀಡಿದರೆ ತಕ್ಷಣವೇ ಕ್ರಮ ವಹಿಸುತ್ತೇನೆಂದು ಭರವಸೆ ನೀಡಿದರು.

ಕೊಟ್ಟ ಮಾತಿನಂತೆ ಮುಂದಿನ 10 ದಿನಗಳ ಒಳಗಾಗಿ ಕಳಪೆ ರಾಗಿ ಪೂರೈಕೆ ಸಂಬಂಧ ಅಗತ್ಯ ಕ್ರಮವಾಗಬೇಕು. ಇಲಾಖೆಯ ಅಧಿಕಾರಿಗಳು ತೆಗೆದುಕೊಳ್ಳುವ ಕ್ರಮ ಇತರ ಜಿಲ್ಲೆಗಳಿಗೂ ಮಾದರಿಯಾಗಬೇಕು. ಇಲ್ಲದಿದ್ದರೆ ರಾಜ್ಯ ರೈತಸಂಘ ಉಗ್ರ ಹೋರಟ ನಡೆಸಬೇಕಾಗುತ್ತದೆಂದು ಸಭೆಯಲ್ಲಿದ್ದ ರೈತ ಮುಖಂಡರು ಎಚ್ಚರಿಸಿದರು.

# ಸೂರ್ಯನ ಆರಾಧನೆಯ ರಥಸಪ್ತಮಿ



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಸಪ್ತ ಕುದುರೆಗಳ ರಥವೇರಿದ ಸೂರ್ಯ ತನ್ನ ಪಥವನ್ನು ಉತ್ತರದತ್ತ ತಿರುಗಿಸಿ ಹೊರಡುವ ಪರ್ವಕಾಲವೇ ರಥಸಪ್ತಮಿ ಹಬ್ಬದ ವಿಶೇಷತೆ ಯಾಗಿದೆ.ನಮ್ಮ ದೈನಂದಿನ ಕಾರ್ಯದ ಚಟುವಟಿಕೆಗಳಿಗೆ ಸ್ಫೂರ್ತಿಕೊಡುವ ಮಹಾಮಹಿಮ ಸೂರ್ಯನಾಗಿದ್ದಾನೆ.ರಥಸಪ್ತಮಿಯಂದು ಸೂರ್ಯದೇವನು ಚಾಂದ್ರಮಾನ ಸಂವತ್ಸರದ ಹನ್ನೊಂದನೇಯ ಮಾಸದ ಮಾಘ ಶುಕ್ಲ ಸಪ್ತಮಿ ತಿಥಿ ದಿವಸ ಸಪ್ತಾಶ್ವಗಳಿಂದ ಕೂಡಿದ ರಥವನೇರುವ ದಿವಸವಾಗಿದೆ.ಇದನ್ನು ಮಾಘಸಪ್ತಮಿ ಎಂದೂ ಕರೆಯುತ್ತಾರೆ.ಸೂರ್ಯನನ್ನು ಭಕ್ತಿಯಿಂದ ಪೂಜಿಸಿದರೆ ಏಳು ಜನ್ಮದಲ್ಲಿ ಮಾಡಿದ ಪಾಪಗಳು ಕ್ಷಯವಾಗಿ ಆಯಸ್ಸು,ಆರೋಗ್ಯ,ಸಂಪತ್ತು



ಲಭಿಸುತ್ತದೆ.ನಿತ್ಯವೂ ಸೂರ್ಯೋಪಾಸನೆ ,ಸೂರ್ಯನಮಸ್ಕಾರ,,ಸೂರ್ಯದ್ವಾದಶ ನಾಮ ಸ್ಮರಣೆ ಮಾಡಿದರೆ ಸರ್ವರೋಗ ಪರಿಹಾರವಾಗುವವು. ರಥಸಪ್ತಮಿಯಿಂದ ಚಳಿ ಕಡಿಮೆಯಾಗಿ ಸೂರ್ಯನ ಪ್ರಖರತೆ ಹೆಚ್ಚಾಗಿ ಬಿಸಿಲು ಹೆಚ್ಚುತ್ತದೆ.



**ಎಕ್ಕದೆಲೆಯ ಸ್ನಾನದ ಮಹತ್ವ**

ಎಕ್ಕದೆಲೆಯನ್ನು ಮಂತಾದವೆಂದು ಕರೆಯುತ್ತಾರೆ. ಐತ್ತರೇಯ ಸಂಹಿತೆಯಲ್ಲಿ ಅರ್ಕ,ಉಷ್ಣ,ತೀಕ್ಷ್ಣ ಗುಣ ಹೊಂದಿವೆಯೆಂದು ಹೇಳಲಾಗುತ್ತದೆ. ಆರೋಗ್ಯ ರಕ್ಷಣೆಮಾಡುವ ಸಸ್ಯ ಇದಾಗಿದ್ದು ರಥಸಪ್ತಮಿಯಂದು ಎಕ್ಕದೆಲೆಯನ್ನು ತಲೆ,ಭುಜ,ಕತ್ತು,ಕಂಕುಳ,ತೊಡೆ,ಪಾದಗಳ ಮೇಲೆ ಇರಿಸಿ ಸ್ನಾನಮಾಡುವದು ಕೆಲವರಲ್ಲಿ ಪದ್ಧತಿಇರುವದು ಕಂಡುಬರುತ್ತದೆ.ದೇಹದ ಕೀಲುನೋವು,ಹಲ್ಲುನೋವು,ಹೊಟ್ಟೆನೋವು ನಿವಾರಿಸುವ ಶಕ್ತಿ ಇದರಲ್ಲಿದೆ.


**ಹಬ್ಬದ ಆಚರಣೆ**

ಅಂದಿನ ದಿನ ಸೂರ್ಯೋದಯಕ್ಕೆ ಮೊದಲು ಎದ್ದು ಸ್ನಾನ ಮಾಡಿ ಶುಚಿ ಬಟ್ಟೆಯೊಂದಿಗೆ ಸೂರ್ಯನಿಗೆ ಭಕ್ತಿಯಿಂದ ಕೈಮುಗಿದು ,ಪೂಜಿಸಿ ಅಂದು ಮನೆಬಾಗಿಲಿಗೆ ಸೂರ್ಯನ ರಥವನ್ನು ರಂಗೋಲಿಯಿಂದ ಶೃಂಗರಿಸಿ ಸೂರ್ಯನ ಶಾಖ ಅಥವಾ ಬೆರಣಿಯಿಂದ ಹಾಲು ಉಕ್ಕಿಸಿ ,ಅವಲಕ್ಕಿ ಪಾಯಸ ಸೂರ್ಯನಿಗೆ ಅರ್ಪಿಸುವ ಪದ್ಧತಿ ನಮ್ಮಲ್ಲಿದೆ.ನಮ್ಮಲ್ಲಿ ಯುಗಾದಿ ಹೊಸತನ ಹೊತ್ತು ತಂದರೆ ಅದಕ್ಕೆ ಮುನ್ನ ಬರುವ ರಥಸಪ್ತಮಿ ಹಳೆಯ ಜಾಗದಲ್ಲಿ ಹೊಸದನ್ನು ತಂದಿಟ್ಟು,ಬದುಕನ್ನು ಆನಂದಮಯವಾಗಿಸಲು ಪ್ರೇರೇಪಿಸುತ್ತದೆ. ಚಳಿಗೆ ಮುದುಡಿದ ಶರೀರ ರಥಸಪ್ತಮಿ ಬಳಿಕ ಸೂರ್ಯನ ಶಾಖಕ್ಕೆ ಅರಳಿ ನವಚೈತನ್ಯ ತುಂಬಿಕೊಳ್ಳುತ್ತದೆ.ನಾವೆಲ್ಲ ಸೂರ್ಯನ ಆರಾಧನೆ ಮಾಡಿ ಒಳ್ಳೆಯ ಆರೋಗ್ಯ ಪಡೆಯೋಣ.

**ನಾಡಿನ ಜನತೆಗೆ ರಥಸಪ್ತಮಿ ಹಬ್ಬದ ಶುಭಾಶಯಗಳು.**

# ಗಣೇಶ ಉತ್ಸವ ಮತ್ತು ಮುನ್ನಿ ಬದನಾಮ ಹುಯಿ"

ಮನದ ಮಾತು...



| ಸಾಕ್ಷಿ ಶ್ರೀಕಾಂತ್ ತಿಕೋಟಿಕರ

ಗಣೇಶ ಉತ್ಸವವು ಲೋಕಮಾನ್ಯ ಬಾಲಗಂಗಾಧರ ತಿಲಕರಿಂದ ಹೇಗೆ ಪ್ರಾರಂಭವಾಯಿತು ಎಂಬುದನ್ನು ಸರಳವಾಗಿ ತಿಳಿಯೋಣ. ಅದು ಬ್ರಿಟಿಷರ ಆಡಳಿತದ ಕಾಲ. ಭಾರತೀಯ ಜನರು ಒಟ್ಟಾಗಿ ಸಭೆ ಸೇರಲು ಗುಂಪುಗಾರಿಕೆ ಮಾಡಲು ಮತ್ತು ಪಥಸಂಚಲನ ಮಾಡಲು ಸರ್ಕಾರವು ಕಾನೂನಿನ ಪ್ರಕಾರ ನಿರ್ಬಂಧ ಹೇರಿತ್ತು.

**ಗಣೇಶ ಉತ್ಸವದ ಆರಂಭ ?:** ತಿಲಕರ ಪಾತ್ರ ಬ್ರಿಟಿಷರ ಆಡಳಿತದ ಕಾಲದಲ್ಲಿ (1890ರ ದಶಕದಲ್ಲಿ) ಭಾರತೀಯರಿಗೆ ಒಟ್ಟಾಗಿ ಸೇರಲು, ಸಭೆ ನಡೆಸಲು ನಿರ್ಬಂಧ ಇತ್ತು. ಆದರೆ ಧಾರ್ಮಿಕ ಹಬ್ಬಗಳಿಗೆ ಬ್ರಿಟಿಷರು ಅವಕಾಶ ನೀಡುತ್ತಿದ್ದರು.

ಈ ಪರಿಸ್ಥಿತಿಯನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡ ಲೋಕಮಾನ್ಯ ತಿಲಕರು,

1893ರಲ್ಲಿ ಪುಣೆಯಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಪ್ರಾರಂಭಿಸಿದರು.

ಗಣೇಶನು ಎಲ್ಲರಿಗೂ ಪ್ರಿಯನಾದ ದೇವರು ಜಾತಿ, ವರ್ಗ, ಭಾಷೆ ಎಲ್ಲವನ್ನೂ ಮೀರಿ ಜನರನ್ನು ಒಗ್ಗೂಡಿಸುವ ಶಕ್ತಿ ಹಬ್ಬದ ನೆಪದಲ್ಲಿ ಜನರು ಸೇರಬಹುದು ತಿಲಕರ ಉದ್ದೇಶ ಜನರಲ್ಲಿ ರಾಷ್ಟ್ರೀಯ ಚೈತನ್ಯ ಮೂಡಿಸುವುದು ಸ್ವಾತಂತ್ರ್ಯ ಚಳವಳಿಗೆ ಸಾಮಾಜಿಕ ವೇದಿಕೆ ಸೃಷ್ಟಿಸುವುದು ಭಾಷಣ, ಕವಿತೆ, ನಾಟಕ, ಕೀರ್ತನೆಗಳ ಮೂಲಕ ದೇಶಭಕ್ತಿ ಸಂದೇಶ ಹರಡುವುದು. ಸ್ವಾತಂತ್ರ್ಯ ಸಂಬಂಧಿತ ಚರ್ಚೆ ಮತ್ತು ಯೋಜನೆಗಳನು ರೂಪಿಸಲು ಹೋರಾಟಗಾರರಿಗೆ ಅವಕಾಶ ಇದಾಗಿತ್ತು.

ಫಲಿತಾಂಶ ಗಣೇಶೋತ್ಸವ ಧಾರ್ಮಿಕ ಹಬ್ಬದಿಂದ ಸಾಮಾಜಿಕ?ರಾಷ್ಟ್ರೀಯ ಹಬ್ಬವಾಗಿ ಪರಿವರ್ತಿತವಾಯಿತು

ಜನರಲ್ಲಿ ಒಗ್ಗಟ್ಟು, ಧೈರ್ಯ, ಸ್ವಾತಂತ್ರ್ಯದ ಆಸೆ ಬೆಳೆದಿತು ಇದು ಮುಂದೆ ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿ ತುಂಬಿದ ಚಳವಳಿಯಾಗಿ ಪರಿಣಮಿಸಿತು

**ಮೊದಲು ಗಣೇಶ ಉತ್ಸವ:** ಗಣೇಶ ಚತುರ್ಥಿಯನ್ನು ಭಾರತದಲ್ಲಿ ಬಹುಕಾಲದಿಂದಲೇ ಆಚರಿಸಲಾಗುತ್ತಿತ್ತು. ಆದರೆ ಆರಂಭದಲ್ಲಿ ಈ ಹಬ್ಬವು ಮನೆಯೊಳಗಿನ ಖಾಸಗಿ ಪೂಜೆಯಾಗಿ ಮಾತ್ರ ನಡೆಯುತ್ತಿತ್ತು. ಕುಟುಂಬದ ಸದಸ್ಯರು ಸೇರಿ ಗಣೇಶನನ್ನು ಪೂಜಿಸುವ ಪದ್ಧತಿ ಇತ್ತು. ಸಾರ್ವಜನಿಕವಾಗಿ, ಎಲ್ಲರೂ ಸೇರಿ ಆಚರಿಸುವ ಪದ್ಧತಿ ಇರಲಿಲ್ಲ.


1893ರಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ಮೊದಲ ಸಾರ್ವಜನಿಕ ಗಣೇಶ ಉತ್ಸವ ನಡೆಯಿತು. ಈ ಉತ್ಸವವನ್ನು ಲೋಕಮಾನ್ಯ ಬಾಲಗಂಗಾಧರ ತಿಲಕರು ಪ್ರಾರಂಭಿಸಿದರು.

ಪುಣೆಯ ಜನಸಂಚಾರ ಹೆಚ್ಚು ಇರುವ ಪ್ರದೇಶದಲ್ಲಿಸಾರ್ವಜನಿಕವಾಗಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು

ಎಲ್ಲ ವರ್ಗದ ಜನರು ಬಂದು ಒಟ್ಟಾಗಿ ಪೂಜೆ ಮಾಡುವ ಅವಕಾಶ ದೊರೆಯಿತು ಪೂಜೆಯ ಜೊತೆಗೆ

ದೇಶಭಕ್ತಿ ಭಾಷಣಗಳು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ವಿಚಾರಗಳು ನಾಟಕಗಳು ಮತ್ತು ಕೀರ್ತನೆಗಳು ಸಾಮಾಜಿಕ ಸಂದೇಶಗಳು ನಡೆಯುತ್ತಿದ್ದವು ಇದು ಜನರಲ್ಲಿ ರಾಷ್ಟ್ರೀಯ ಚೈತನ್ಯ ಮತ್ತು ಒಗ್ಗಟ್ಟನ್ನು ಹೆಚ್ಚಿಸಿತು.

**ಇದರ ಮಹತ್ವ:** ಗಣೇಶೋತ್ಸವವು ಮನೆಯ ಪೂಜೆಯಿಂದ ಹೊರಬಂದು ಜನೋತ್ಸವವಾಗಿ ಬದಲಾಗಿತು ಜಾತಿ, ಧರ್ಮ, ಶ್ರೀಮಂತ?ಬಡ ಎಂಬ ಭೇದಗಳಿಲ್ಲದೆ ಜನರು ಒಂದಾಗಿ ಸೇರಿದರು ಈ ಉತ್ಸವವು ಮುಂದೆ ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿ ತುಂಬಿದ ಸಾಮಾಜಿಕ ಚಳವಳಿಯಾಗಿ ಬೆಳೆದಿತು ಹೀಗೆ ಗಣೇಶೋತ್ಸವದ ಮುಖ್ಯ ಉದ್ದೇಶವೇ ಸಾರ್ವಜನಿಕರಲ್ಲಿ ದೇಶಭಕ್ತಿಯನ್ನು ತುಂಬುವುದು ಮತ್ತು ಒಗ್ಗಟ್ಟನ್ನು ಮೂಡಿಸುವುದು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಅರಿವುಗಳನ್ನು ತುಂಬುವುದು ಇದಾಗಿತ್ತು ಮಹಾರಾಷ್ಟ್ರದಲ್ಲಿ ಪ್ರಾರಂಭವಾದ ಗಣೇಶೋತ್ಸವ ನಿಧಾನಕ್ಕೆ ದೇಶದ ತುಂಬ ಹರಡಿತು.ಹೀಗೆ ಪ್ರತಿ ಓಣಿಗಳಲ್ಲಿ ವೃತ್ತಗಳಲ್ಲಿ ಮುಖ್ಯವಾದ ಸ್ಥಳಗಳಲ್ಲಿ ಸಾರ್ವಜನಿಕವಾಗಿ ಗಣಪತಿಯನ್ನು ಕೂಡಿಸಿ ಆರಾಧನೆ ಮಾಡುವ ಸಂಪ್ರದಾಯ.



ಈ ಸಂಪ್ರದಾಯ ಈಗಲೂ ಮುಂದುವರೆದುಕೊಂಡು ಬಂದಿದೆ ಆದರೆ ಉದ್ದೇಶ ಮಾತ್ರ ಶೂನ್ಯವಾಗಿದೆ ಗಣೇಶೋತ್ಸವದ ಅಂಗವಾಗಿ ಜನರ ಬಳಿ ಮೊದಲೇ ಚಂದಾ ರೂಪದಿಂದ ಹಣವನ್ನು ಸಂಗ್ರಹಿಸುತ್ತಾರೆ. ಯಾರು ಎಷ್ಟು ದೊಡ್ಡ ಗಣಪತಿಯನ್ನು ಕೂಡಿಸುತ್ತಾರೋ... ಎಷ್ಟು ಮಂಟಪದ ಅಲಂಕಾರ ಮಾಡುತ್ತಾರೋ... ಅದು ಗಣೇಶೋತ್ಸವದ ಒಂದು ಗರ್ವದ ಸಂಕೇತ ಮತ್ತು ಪ್ರತಿಷ್ಠೆ ಕೂಡ ಆಗಿದೆ. ಈ ಐದು ದಿನಗಳ ಉತ್ಸವದಲ್ಲಿ ಹಲವು ಸಾಂಸ್ಕೃತಿಕ ಮತ್ತು ಅನ್ನದಾನದಂತಹ ಸೇವೆಗಳು ನಡೆಯುತ್ತವೆ. ಅದು ಸಂತೋಷದ ವಿಷಯ ಆದರೆ ದೀಪದ ಕೆಳಗೆ ನೆರಳು ಎಂಬಂತೆ ಉತ್ಸವ ಇತ್ತೀಚಿನ ದಿನಗಳಲ್ಲಿ ತನ್ನ ಮೂಲ ಉದ್ದೇಶ ರೂಪದಿಂದ ಹಿಂದೆ ಸರಿದಿದೆ.



ಐದು ದಿನ ನಡೆಯುವ ಉತ್ಸವದಲ್ಲಿ ಭಕ್ತಿಗಿಂತ ಯಾರು ಗಣಪತಿಯನ್ನು ಕೂಡಿಸಿರುತ್ತಾರೆ ಅವರ ಪ್ರತಿಷ್ಠೆ ಮತ್ತು ಸನ್ಮಾನ ಕಾರ್ಯಕ್ರಮಗಳೇ ಹೆಚ್ಚಾಗಿರುತ್ತವೆ. ಗಣೇಶೋತ್ಸವದಲ್ಲಿ ಗಣಪತಿಯನ್ನು ಕೂಡಿಸುವಾಗ ಮತ್ತು ವಿಸರ್ಜಿಸುವಾಗ ವಿಪರೀತವಾಗಿ ಶಬ್ದ ಕೇಳುವ ಡಿಜೆ ಧ್ವನಿವರ್ಧಕಗಳ, ಆ ಶಬ್ದ ತರಂಗಗಳು ಎಷ್ಟು ಬಲವಾಗಿರುತ್ತವೆ ಎಂದರೆ ಗಣಪತಿ ವಿಸರ್ಜನೆ ಮಾಡುವಾಗ ನಡೆಯುವ ಮೆರವಣಿಗೆಯಲ್ಲಿ ಆ ಡಿಜೆ ಶಬ್ದಗಳ ತರಂಗದ ಆಘಾತವನ್ನು ತಡೆಯದೆ ಹಲವು ಸಾರಿ ಗೋಡೆಗಳ ಟೈಲ್ಸ್ ಕೂಡ ಬಿದ್ದು ಹೋಗುತ್ತದೆ. ಇನ್ನು ವಿಸರ್ಜನೆ ಕೆಲವೇ ನಿಮಿಷಗಳಲ್ಲಿ ಮುಗಿದು ಹೋಗುವ ವಸ್ತುವಾಗಿ ಉಳಿದಿಲ್ಲ.

ತಡ ಮಧ್ಯರಾತ್ರಿವರೆಗೂ ಗಣೇಶನನ್ನು ಮೆರವಣಿಗೆ ಮಾಡಿಸುತ್ತಾ ಬಂದರೆ ಹಿಂದೆ ಒಂದರಂತೆ ಒಂದು ಬರುವ ಗಣೇಶನ ವಿಸರ್ಜನಾ ಡಿಜೆ ಉತ್ಸವಗಳು ಸಾಕಷ್ಟು ಪ್ರಮಾಣದ ಶಬ್ದ ಮಾಲಿನ್ಯವನ್ನು ಉಂಟುಮಾಡುತ್ತದೆ ಇನ್ನು ಆ ಗಣೇಶನ ಮುಂದೆ ಹಚ್ಚುವ ಹಾಡುಗಳು ಮೂಲವಾಗಿದೆ ದೇಶಭಕ್ತಿಯ ಉದ್ದೇಶ ಹೊಂದಿದರು ಕನಿಷ್ಠ ಅದು ನೇಪಥ್ಯಕ್ಕೆ ಸರಿದರೆ ಧಾರ್ಮಿಕ ಗೀತೆಗಳನ್ನು ಕೂಡ ಹಚ್ಚುವುದಿಲ್ಲ..

ಗಣಪತಿಯನ್ನು ಟ್ರ್ಯಾಕ್ಟರ್ ನಲ್ಲಿ ಕೂಡಿಸಿ ಅದರ ಮುಂದೆ ಗಣಪತಿ ಗಿಂತ ಬೃಹದಾಕಾರದ ಧ್ವನಿ ವರ್ಧಕ ಇಟ್ಟುಕೊಂಡು ಅದರ ಮುಂದೆ ನೂರಾರು ಸಾವಿರ ಸಂಖ್ಯೆಯಲ್ಲಿ ಜನ ಕುಣಿಯುತ್ತಿರುತ್ತಾರೆ . ಹೀಗೆ ಎಚ್ಚರ ತಪ್ಪಿ ಕುಣಿಯುವಾಗ ಮಧ್ಯಪಾನ ಸೇವನೆ ಕೂಡ ಮಾಡಿರುತ್ತಾರೆ ಇನ್ನು ಗಣೇಶನ ಮುಂದೆ ಹಚ್ಚುವ ಹಾಡುಗಳು... " ಮುನ್ನಿ ಬದನಾಮ ಹುಯಿ...ಡಾರ್ಲಿಂಗ್ ತೆರೆಲಿಯೇ... ಕಂಬಕ್ತ ಇಷ್ಕ...ಬಸಣ್ಣಿ ಬಾ... ಎಂಬಂಥ ಬಾರಗಳಲ್ಲಿ ಹಚ್ಚುವ ಅತರೇಕದ ಅಪಾರ್ಥ ಕಲ್ಪಿಸುವ ಹಾಡು. ಹೀಗೆ ಇಂತಹ ಹಾಡುಗಳಿಗೆ ಹುಚ್ಚೆದ್ದು ಕುಣಿದು ಕುಪ್ಪಳಿಸುತ್ತಾರೆ.

ಇದು ಕೆಲವೇ ಸಮಯದಲಿ ಮುಗಿಯುವ ಮೆರವಣಿಗೆ ಆಗಿರುವದಿಲ್ಲ. ಸಾಯಂಕಾಲ ಶುರುವಾಗಿ ತಡರಾತ್ರಿಯವರಗೆ ಈ ಮೆರವಣಿಗೆ ವಿಪರೀತ ಶಬ್ದದ ಸಂಗೀತ ಮತ್ತು ಕುಣಿತ ನಡೆಯುತದೆ. ವೃದ್ಧರು ಮತ್ತು ಸಣ್ಣಮಕ್ಕಳು ಬಾಲರು ಈ ಶಬ್ದಗಳಿಂದ ಬೆಚ್ಚಿ ಬೀಳುತ್ತಾರೆ. ಮನೆಯಲಿ ಮತ್ತೆ ಆಸ್ಪತ್ರೆಯಲಿ ಇರುವ ರೋಗಿಗಳಿಗೆ ವಿಪರೀತ ಮಾನಸಿಕ ಹಿಂಸೆ. ಈ ಮೆರವಣಿಗೆಗಳನು ನಿಯಂತ್ರಿಸಲು ಸಾವಿರಾರು ಸಂಖ್ಯೆಯಲಿ ಪೋಲಿಸರನು ನೇಮಿಸಬೇಕು. ಈ ವಿಪರೀತ ಗಲಾಟೆಯಲಿ ಕೆಲವೊಮ್ಮೆ ಕೋಮು ಗಲಭೆಗಳಾಗುವದು ಸಾಮಾನ್ಯ. ಇದನು ನಿಯಂತ್ರಿಸಲು ಪೋಲಿಸರು ಹರಸಾಹಸಪಡುತ್ತಾರೆ. ಹಬ್ಬದದಿನ ಹೆಚ್ಚಿನ ಕರ್ತವ್ಯ ಅವರಪಾಲಿಗೆ.

ಗಣಪತಿಯ ಮೂಲರೂಪ ಬಿಟ್ಟು ವಿವಿಧ ವೇಷಗಳನು ಹಾಕಿಸಿದ ಗಣಪತಿಯನು ಕೂಡಿಸುವದು... ಇದು ದೈವಿಕತೆಯ ವಿಡಂಬನೆ ಅಲ್ಲದೆ ಧರ್ಮ ಪಾಲನೆ ಅಂತೂ ಖಂಡಿತ ಅಲ್ಲ. ಇನ್ನು ಗಣಪತಿಯನ್ನು ವಿಸರ್ಜನೆ ಮಾಡುವಾಗ ಆಗುವ ಅವಾಂತರಗಳು ಅಂತ ಹೇಳತೀರದು , ಬೃಹದಾಕಾರದ ಗಣಪತಿಯ ಪ್ಲಾಸ್ಟರ್ ಆಫ್ ಪ್ಯಾರಿಸ್ ನಿಂದ ಮಾಡಿರುತ್ತಾರೆ.ಇದು ಬೇಗ ನೀರಿನಲ್ಲಿ ಕರಗುವುದಿಲ್ಲ. ಗಣೇಶ ಚತುರ್ಥಿ ಎಂದು ಮೃತ್ತಿಕೆಯ ಮೂರ್ತಿಯನ್ನು ಕೂಡಿಸುವ ವಾಡಿಕೆ ಆ ಮೂರ್ತಿಯನ್ನು ನದಿ ಮತ್ತು ಕೆರೆಗಳಲ್ಲಿ ಇರುವ ಆವೆ ಮಣ್ಣನ್ನು ತಂದು ಅದರಿಂದ ಮಾಡಬೇಕು ಎಂದು ಸಂಪ್ರದಾಯ.ಆದರೆ ವಿಪರೀತ ರಾಸಾಯನಿಕ ಬಣ್ಣ ಅಲಂಕಾರಿಕಮಣಿ ಪ್ಲಾಸ್ಟಿಕ್ ಸರಗಳು ಇಂತಹವುಗಳಿಂದ ಮಾಡಿದ ಪ್ಲಾಸ್ಟರ ಆಫ ಪ್ಯಾರಿಸನ ಗಣಪತಿ ನೀರಿನಲ್ಲಿ ವಿಸರ್ಜನೆ ಆದ ತಕ್ಷಣ ಬೇಗ ಕರಗದೆ ಖಂಡ ತುಂಡವಾಗಿ ದಡದಲ್ಲಿ ಉಳಿದುಬಿಡುತ್ತಾನೆ...ವಿಸರ್ಜನೆಯ ನಂತರ ಕೆರೆ ದಡಗಳನ್ನು ನೋಡಿದರೆ ಕೆರೆಯ ತುಂಬಾ ಕಾಣುವ ಗಣಪತಿಯ ರುಂಡ ಮುರಿದ ಕೈಗಳು ಬಿದ್ದ ಕಿರೀಟ ದೇಹದ ಅವಶೇಷ ನೋಡಿದರೆ ನಮಗೆ ದುಃಖವಾಗುವುದು ಅದಲ್ಲದೆ ಗಣಪತಿಯ ಬಣ್ಣಿಸಲು ಬಳಿದ ಬಣ್ಣಗಳಲ್ಲಿ ಸಾಕಷ್ಟು ಪ್ರಮಾಣದ ರಾಸಾಯನಿಕಗಳು ಇರುವುದರಿಂದ ನೀರು ವಿಷಯುಕ್ತವಾಗಿ ಜಲಚರಗಳಿಗೆ ಹಾನಿಯಾಗುವುದು.

**ಗಣಪತಿಯ ರೂಪದ ವಿಶ್ಲೇಷಣೆ**

1. ಆನೆಯ ತಲೆ ವಿಶಾಲ ಚಿಂತನೆ, ಬುದ್ಧಿವಂತಿಕೆ, ಸ್ಥಿರತೆ ಸಣ್ಣ ಮನಸ್ಸನ್ನು ಬಿಟ್ಟು ದೊಡ್ಡದಾಗಿ ಯೋಚಿಸಬೇಕೆಂಬ ಸಂದೇಶ
2. ಮಾನವ ದೇಹ: ದೈವತ್ವ ಮಾನವನಲ್ಲಿಯೇ ಅಡಗಿದೆ ಶ್ರಮ ಮತ್ತು ಸಾಧನೆ ಮೂಲಕ ದೇವತ್ವವನ್ನು ಪಡೆಯಬಹುದು
3. ದೊಡ್ಡ ಕಿವಿಗಳು: ಹೆಚ್ಚು ಕೇಳಬೇಕು, ಕಡಿಮೆ ಮಾತನಾಡಬೇಕು ಜ್ಞಾನ ಕೇಳುವಿಕೆಯಿಂದ ಬರುತ್ತದೆ
4. ಸಣ್ಣ ಕಣ್ಣುಗಳು: ಏಕಾಗ್ರತೆ, ದೃಢ ನಿಶ್ಚಯ, ಸೂಕ್ಷ್ಮಾವಲೋಕನ ಗುರಿಯಿಂದ ಗಮನ ತಪ್ಪಿಸಬಾರದು
5. ಉದ್ದವಾದ ಸೂಂಡು: ಬಲ + ಸೂಕ್ಷ್ಮತೆ ಶಕ್ತಿಯನ್ನು ಬುದ್ಧಿಯಿಂದ ಬಳಸಿ
6. ದೊಡ್ಡ ಹೊಟ್ಟೆ: ಜೀವನದ ಸಿಹಿ?ಕಹಿ ಎಲ್ಲವನ್ನೂ ಸಹಿಸುವ ಶಕ್ತಿ ಸಹನೆ ಮತ್ತು ಸಮತೋಲನ
7. ಒಡೆದ ದಂತ (ಏಕದಂತ) ಒಳ್ಳೆಯದನ್ನು ಉಳಿಸಿ, ಕೆಟ್ಟದನ್ನು ತ್ಯಜಿಸುವ ವಿವೇಕ ತ್ಯಾಗದ ಸಂಕೇತ
8. ಇಲಿ ವಾಹನ: ಆಸೆ, ಅಹಂಕಾರವನ್ನು ನಿಯಂತ್ರಿಸುವ ಬುದ್ಧಿ ಸಣ್ಣದು ದೊಡ್ಡದನ್ನು ನಡೆಸುವ ಸಂಕೇತ

**ತಾತ್ವಿಕ ಅರ್ಥ**

ವಿಘ್ನನಿವಾರಕ ? ಒಳಗಿನ ಭಯ, ಸಂಶಯ, ಅಹಂಕಾರಗಳನ್ನು ನಿವಾರಿಸುವುದು ಪ್ರಥಮ ಪೂಜ್ಯ ? ಯಾವುದೇ ಕಾರ್ಯಕ್ಕೂ ಮೊದಲು ಮನಸ್ಸನ್ನು ಶುದ್ಧಗೊಳಿಸಬೇಕು ಜ್ಞಾನ ಮತ್ತು ವಿನಯ ? ನಿಜವಾದ ಜ್ಞಾನ ವಿನಯದಿಂದಲೇ ಬರುತ್ತದೆ

ಹೀಗೆ ಅಪರೂಪದ ಜ್ಞಾನದಾಹಿ ಗಣಪತಿ, ಗಣಗಳಿಗೆ ಒಡೆಯ, ವ್ಯಾಸ ಮಹರ್ಷಿ ಹೇಳಿದ ಮಹಾಭಾರತ ಬರೆದ ದೃಷ್ಟಾಂತ ವಾಗ್ಮಿ. ವಿದ್ಯೆ ಸಂಗೀತಕೆ ಅಧಿಪತಿಯಾಗಿ ನಿಷ್ಟೆಯಲಿ ಬ್ರಹ್ಮಚಾರಿ ಆಗಿರುವ ಗಣಪತಿಬಾಲ ಬ್ರಹ್ಮಚಾರಿ. ಅವನ ಮುಂದೆ ಕುಡಿದು ಕುಣಿಯುವದು ಎಷ್ಟು ಸರಿ?

**ಮತ್ತೊಂದು ಮನದ ಮಾತು ಮತ್ತೆ ಮುಂದಿನವಾರ.**

# ನಂಬಿಕೆ ಎಂಬ ಅಡಿಪಾಯ




ಸ್ನೇಹ ಲೋಕ



| ಸ್ನೇಹಾ ಆನಂದ್

ಒಂದು ಕೆಲಸಕ್ಕೆ ವಿದ್ಯೆ ಎಷ್ಟು ಮುಖ್ಯವೋ ಅಷ್ಟೇ ನಂಬಿಕಸ್ಥ ಜನರು ಮುಖ್ಯ! ಆದರೆ ಎಷ್ಟು ಸಂಸ್ಥೆಗಳು ಈ ರೀತಿ ಯೋಚಿಸುತ್ತವೆ! ವಿದ್ಯೆಗೆ ಮಾತ್ರ ಬೆಲೆ ಕೊಡುವುದು ಜಾಸ್ತಿ! ಹೀಗಾಗಿ ಲಂಚಕೋರರ ಪಟ್ಟಿ ದೇಶದಲ್ಲಿ ಬೆಳೆದು ಬಂದಿದೆ !

ವಿದ್ಯೆಯನ್ನು ಶ್ರದ್ಧೆ, ಭಕ್ತಿಯಿಂದ ಒಂದಿಷ್ಟು ತಿಂಗಳಲ್ಲಿ ಕಲಿತು ಬಿಡಬಹುದು, ಒಂದೇ ಕೆಲಸದಲ್ಲಿ ವ್ಯಕ್ತಿ ಕೆಲಸದಲ್ಲಿ ನಿರತರಾದರೆ ಕೆಲಸದ ಅನುಭವ ವಿದ್ಯೆಯನ್ನು ಖಂಡಿತಾ ಕೊಡುತ್ತದೆ! ವಿದ್ಯೆ ಗಳಿಸಲು ದುಡ್ಡು ಬೇಕು! ಆದರೆ ನಂಬಿಕೆ ಗಳಿಸಲು ಬಂಗಾರದಂತಹ ಮನಸ್ಸು ಬೇಕು!

ಒಂದು ಸಂಸ್ಥೆ ನಡೆಸಲಿಕ್ಕೆ ನಂಬಿಕಸ್ಥ ಜನರು ಮುಖ್ಯವಾಗಿ ಇರಲೇ ಬೇಕು! ಇಲ್ಲದಿದ್ದರೆ ಆ ಸಂಸ್ಥೆ ದಿವಾಳಿಯಾಗುವುದು ಖಂಡಿತಾ!

ಹೀಗಾಗಿ ವಿದ್ಯಾವಂತರು , ಬುದ್ಧಿವಂತರಿಗಿಂತ ನಂಬಿಕೆಗೆ ಅರ್ಹನಾದ ವ್ಯಕ್ತಿಗಳು ಅತಿ ಮುಖ್ಯ!

ವಂಚಕರು, ವಿಶ್ವಾಸ ದ್ರೋಹಿಗಳು ಎಷ್ಟೇ ವಿದ್ಯೆ ಗಳಿಸಿದರೂ ಸಿಕ್ಕ ಕೆಲಸವನ್ನು ತಮ್ಮ ಸ್ವಾರ್ಥಕ್ಕೆ ಮಾತ್ರ ಬಳಸಿಕೊಳ್ಳುತ್ತಾರೆ, ಸಂಸ್ಥೆಯ ಏಳಿಗೆಗಲ್ಲ !

ವಿದ್ಯೆ ಜೀವನಕ್ಕೆ ತುಂಬಾ ಮುಖ್ಯ ನಿಜ ಅದಕ್ಕೆ ತಕ್ಕ ಹಾಗೆ ಬುದ್ಧಿಯೂ ಬೇಕು, ವಿದ್ಯೆ ನಾವು ಗಳಿಸಿದರೆ ಬುದ್ಧಿ ನಮ್ಮ ಒಳಗಡೆಯೇ ಇರುತ್ತದೆ!



ಹೀಗಾಗಿ ಹಿರಿಯರು ಸಿಟ್ಟು ಬಂದಾಗ ಏನು ಬುದ್ಧಿಗೇಡಿ ಕೆಲಸ ಮಾಡಿದೆ ಎಂದು ಬಯ್ದಿದ್ರು!

"ಬುದ್ಧಿಗೇಡಿ"ಅವನು ಎನ್ನುವ ಮಾತು ನೀವು ಕೇಳಿರಬಹುದು!

ಒಬ್ಬ ಅರ್ಹ ವ್ಯಕ್ತಿಗೆ ಕೆಲಸ ಹೇಳಿಕೊಟ್ಟು ಅವರನ್ನು ತಮ್ಮ ಸಂಸ್ಥೆಯಲ್ಲಿ ನೇಮಕ ಮಾಡಿಕೊಂಡರೆ ಆಗ ಸಂಸ್ಥೆ ಅಭಿವೃದ್ಧಿ ಹೊಂದುತ್ತದೆ!

ಯಾರೇ ಕೆಲಸಕ್ಕೆ ಇಂಟರ್ವ್ಯೂ ಹೋದಾಗ ಮೊದಲು ನೋಡುವುದೇ ವಿದ್ಯೆ, ಆ ವ್ಯಕ್ತಿಯ ಸ್ವಭಾವವಲ್ಲ! ಆ ವ್ಯಕ್ತಿಯ ಸ್ವಭಾವ ಸರಿಯಿಲ್ಲವೆಂದರೆ ಆ ಸಂಸ್ಥೆಗೆ ಅಪಾಯ ತಪ್ಪಿದಲ್ಲ!

ಹೀಗಾಗಿ ವಿದ್ಯೆಗಿಂತ ಬುದ್ಧಿ ಮೇಲು, ಬುದ್ಧಿಗಿಂತ ನಂಬಿಕೆ ಮೇಲು! ನಂಬಿಕಸ್ಥ ವ್ಯಕ್ತಿಗಳು ಚಿನ್ನದ ಗಣಿಗಳಂತೆ, ಅವರ ಮೇಲೆ ಭರವಸೆ ಇಟ್ಟು ಇಡೀ ಸಂಸ್ಥೆಯನ್ನೇ ಒಪ್ಪಿಸಬಹುದು! ಆದರೆ ವಿದ್ಯೆ, ಬುದ್ಧಿ ಅತಿಯಾಗಿದ್ದು ಕುತಂತ್ರಿಯಾಗಿದ್ದರೆ ಸಂಸ್ಥೆಗೆ ಅಪಾಯ ತಪ್ಪಿದಲ್ಲ! ಲಂಚಕೋರರು ಬಂಗ್ಲೆ ಕಟ್ಟಿಸಿ ಗತ್ತಿನಿಂದ ಬಾಳುತ್ತಾರೆ,ಅದೇ ಸತ್ಯವಂತ ಒಂದು ಚಿಕ್ಕ ಮನೆಯಲ್ಲಿ ಪರದಾಡುತ್ತಾನೆ! ಆದರೆ ಭಗವಂತನ ಹತ್ತಿರ ಹೋದಾಗ ಲಂಚಕೋರ ಇಂಚಿಂಚು ಲೆಕ್ಕ ಒಪ್ಪಿಸಲೇ ಬೇಕು!


ದೊಡ್ಡ ಮಟ್ಟದ ವ್ಯವಹಾರದಲ್ಲಿ, ಕೆಲಸದಲ್ಲಿ ಯಾವುದೇ ರೀತಿಯ ಮೋಸ ಹೋಗ ಬಾರದೆಂದರೆ ಒಂದು ಸಂಸ್ಥೆಗೆ ನಂಬಿಕಸ್ಥ ಕೆಲಸದವರು ಇರಲೇಬೇಕು! ಆಗ ನಮ್ಮ ಮನೆಯ ಸದಸ್ಯರಂತೆ ಅವರನ್ನೂ ಕೂಡ ನಂಬಬಹುದು!

ಮೊಲದಷ್ಟು ಅತಿ ವೇಗವಾಗಿ ಓಡುವದಕ್ಕಿಂತ ಆಮೆಯ ನಡಿಗೆಯ ಜನರೇ ವಾಸಿ!

ತಮ್ಮ ಕೆಲಸದಲ್ಲಿ ನಿಷ್ಠೆಯಿಟ್ಟು ವಿಶ್ವಾಸ ಗಳಿಸಿಕೊಂಡು ನಿಧಾನವಾಗಿಯಾದರೂ ಸಂಸ್ಥೆಯನ್ನು ಗಟ್ಟಿಯಾಗಿ ನಿಲ್ಲಿಸುತ್ತಾರೆ,ಭದ್ರ ಬುನಾದಿಗೆ ನಂಬಿಗೆಯೆಂಬ ಅಡಿಪಾಯ ಬೇಕು ,ಆಗ ಸಂಸ್ಥೆ ಅಭಿವೃದ್ಧಿಯ ಎಷ್ಟು ಅಂತಸ್ತನ್ನು ಏರಿದರೂ ಒಂದಿಂಚೂ ಅಲುಗಾಡದಂತೆ ಉಳಿಯುತ್ತದೆ ! ಇದರಿಂದ ತಿಳಿಯುವುದು ಮುಖ್ಯವಾಗಿ ನಂಬಿಕೆ ಜನರು ಪ್ರತಿಯೊಂದು ಕೆಲಸಕ್ಕೂ ಅರ್ಹರು ಎಂದು! "ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು" ಎಂಬಂತೆ "ವಿದ್ಯಾವಂತರಿಗಿಂತ ಸತ್ಯವಂತರೇ ಮೇಲು" ಎಂದು ತಿಳಿದು ನಡೆದರೆ ಪ್ರತಿಯೊಂದು ವಿಷಯದಲ್ಲೂ ಜಯ ತನ್ನಿಂತಾನೇ ದೊರಕುತ್ತದೆ!

ಅಭಯ ಹಸ್ತ ಇದ್ದರೆ ಭಯ ಓಡಿ ಹೋಗುತ್ತದೆ, ಹೀಗಾಗಿ ಒಂದು ದೊಡ್ಡ ಸಂಸ್ಥೆಗಳು, ಕಛೇರಿಗಳಲ್ಲಿ ಬೇಕಾಗಿದ್ದು ಮುಖ್ಯವಾಗಿ ನಂಬಿಕೆಗೆ ಅರ್ಹರಾದ ವ್ಯಕ್ತಿಗಳು! ಅವರ ಜೊತೆಗೂಡಿ ಮಾಡುವ ಕೆಲಸ ಆನೆಯ ಬಲವಿದ್ದಂತೆ!

# ರಥಸಪ್ತಮಿ: ಸೂರ್ಯನ ರಥ ಉತ್ತರಾಯಣದ ಪಥ



ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿಯಂದು ಆಚರಿಸಲಾಗುವ 'ರಥಸಪ್ತಮಿ' ಪ್ರಕೃತಿ, ವಿಜ್ಞಾನ ಮತ್ತು ಆಧ್ಯಾತ್ಮದ ತ್ರಿವೇಣಿ ಸಂಗಮ. ಸೂರ್ಯನ ರಥವು ಉತ್ತರಾಯಣದ ಪಥದಲ್ಲಿ ಸಾಗುತ್ತಾ ಭೂಮಿಗೆ ಹೊಸ ಚೈತನ್ಯವನ್ನು ನೀಡುವ ದಿನ.

ಸೂರ್ಯ: ವಿಶ್ವದ ಆತ್ಮ ಮತ್ತು ಶಕ್ತಿಯ ಮೂಲ

ಆಧ್ಯಾತ್ಮಿಕವಾಗಿ ಸೂರ್ಯನನ್ನು 'ಜಗತ್ತಿನ ಕಣ್ಣು' ಎಂದು ಬಣ್ಣಿಸಲಾಗಿದೆ. ಋಗ್ವೇದದ ಮಂತ್ರವೊಂದು ಹೀಗೆ ಹೇಳುತ್ತದೆ:

"ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ" ಅಂದರೆ, ಚಲಿಸುವ ಮತ್ತು ಸ್ಥಿರವಾಗಿರುವ ಸಮಸ್ತ ಜೀವರಾಶಿಗಳಿಗೂ ಸೂರ್ಯನೇ ಆತ್ಮ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ತನ್ನ ವಿಭೂತಿಗಳನ್ನು ವಿವರಿಸುವಾಗ, "ಜ್ಯೋತಿಷಾಂ ರವಿರಂಶುಮಾನ್" ಎನ್ನುತ್ತಾನೆ.

ಸೂರ್ಯನ ಚಲನೆಯು ನಮಗೆ 'ಕಾಲ'ದ ಅರಿವನ್ನು ನೀಡುತ್ತದೆ. ರಥಸಪ್ತಮಿಯ ದಿನದಿಂದ ಸೂರ್ಯನ ಕಿರಣಗಳು ನೇರವಾಗಿ ಬೀಳಲಾರಂಭಿಸಿ, ಚಳಿಗಾಲದ ಜಡತ್ವವನ್ನು ಕಳೆದು ಪ್ರಕೃತಿಯಲ್ಲಿ ಹೊಸ ಚಿಗುರು ಮೂಡಿಸುತ್ತವೆ.

ಆದಿತ್ಯ ಹೃದಯಂ: ಅಚಲ ಆತ್ಮವಿಶ್ವಾಸದ ಮಂತ್ರ

ರಾಮಾಯಣದ ಯುದ್ಧಕಾಂಡದಲ್ಲಿ ಬರುವ 'ಆದಿತ್ಯ ಹೃದಯಂ' ಸ್ತೋತ್ರವು ರಥಸಪ್ತಮಿಯಂದು ಪಠಿಸಲು ಅತ್ಯಂತ ಪ್ರಶಸ್ತವಾದುದು. ರಾವಣನೊಂದಿಗೆ ಯುದ್ಧ ಮಾಡುವಾಗ ಶ್ರೀರಾಮನು ಮಾನಸಿಕವಾಗಿ ದಣಿದಿದ್ದಾಗ, ಅಗಸ್ತ್ಯ ಮುನಿಗಳು ಈ ಮಂತ್ರವನ್ನು ಉಪದೇಶಿಸುತ್ತಾರೆ.

**"ಸರ್ವಮಂಗಲ ಮಾಂಗಲ್ಯಂ ಸರ್ವಪಾಪ ಪ್ರಣಾಶನಮ್ ।**
**ಚಿಂತಾಶೋಕ ಪ್ರಶಮನಮ್ ಆಯುರ್ವರ್ಧನ ಮುತ್ತಮಮ್ ॥"**

**ಇದರ ಅರ್ಥ:** ಸಕಲ ಮಂಗಲಗಳನ್ನುಂಟು ಮಾಡುವ, ಪಾಪಗಳನ್ನು ನಾಶಮಾಡುವ, ಚಿಂತೆ ಮತ್ತು ಶೋಕಗಳನ್ನು ಶಮನಗೊಳಿಸುವ ಸೂರ್ಯದೇವನ ಉಪಾಸನೆಯು ಆಯುಸ್ಸನ್ನು ಹೆಚ್ಚಿಸುವ ಅತ್ಯುತ್ತಮ ಮಾರ್ಗ. ಈ ಮಂತ್ರವು ಕೇವಲ ದೇವರ ಸ್ತುತಿಯಲ್ಲ; ಇದು ಮನುಷ್ಯನ ಮನೋಬಲವನ್ನು ಹೆಚ್ಚಿಸಿ, ಸೋಲೊಪ್ಪದ ಗುಣವನ್ನು ಬೆಳೆಸುವ "ಮಾನಸಿಕ ಸಂಜೀವಿನಿ". ರಥಸಪ್ತಮಿಯಂದು ಇದನ್ನು ಪಠಿಸುವುದರಿಂದ ಮನುಷ್ಯನಲ್ಲಿ ಕತ್ತಲೆಯನ್ನು ಸೀಳಿ ಗೆಲ್ಲುವ ಸೂರ್ಯನಂತಹ ದೃಢತೆ ಮೂಡುತ್ತದೆ.

ಸೂರ್ಯ ನಮಸ್ಕಾರ: ದೈಹಿಕ ಮತ್ತು ಮಾನಸಿಕ ಯೋಗ

ವಿಜ್ಞಾನ ಮತ್ತು ಯೋಗದ ದೃಷ್ಟಿಯಿಂದ ರಥಸಪ್ತಮಿಯ ಮಹತ್ವವು 'ಸೂರ್ಯ ನಮಸ್ಕಾರ'ದಲ್ಲಿ ಅಡಗಿದೆ. ಸೂರ್ಯನ ಕಿರಣಗಳ ಸಾನ್ನಿಧ್ಯದಲ್ಲಿ ಮಾಡುವ ಈ 12 ಹಂತಗಳ ವ್ಯಾಯಾಮವು ಸಂಪೂರ್ಣ ಆರೋಗ್ಯಕ್ಕೆ ದಾರಿಯಾಗಿದೆ.

* ವೈಜ್ಞಾನಿಕ ಲಾಭ: ಸೂರ್ಯ ನಮಸ್ಕಾರವು ದೇಹದ ಸ್ನಾಯುಗಳನ್ನು ಬಲಪಡಿಸುವುದಲ್ಲದೆ, ಎಂಡೋಕ್ರೈನ್ ಗ್ರಂಥಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಬೆಳಗಿನ ಸೂರ್ಯನ ಕಿರಣಗಳಿಂದ ವಿಟಮಿನ್-ಡಿ ಲಭ್ಯವಾಗಿ ಮೂಳೆಗಳು ಬಲಗೊಳ್ಳುತ್ತವೆ.
* ಪ್ರಾಣಾಯಾಮ ಮತ್ತು ಧ್ಯಾನ: ಪ್ರತಿಯೊಂದು ನಮಸ್ಕಾರದ ಹಂತದೊಂದಿಗೆ ಮಾಡುವ ಉಸಿರಾಟದ ಪ್ರಕ್ರಿಯೆಯು ಶ್ವಾಸಕೋಶವನ್ನು ಶುದ್ಧೀಕರಿಸುತ್ತದೆ. ಸೂರ್ಯನ ಮಂತ್ರಗಳನ್ನು ಪಠಿಸುತ್ತಾ ನಮಸ್ಕಾರ ಮಾಡುವುದರಿಂದ ಮನಸ್ಸು ಏಕಾಗ್ರತೆಯನ್ನು ಸಾಧಿಸುತ್ತದೆ.

**"ಆದಿತ್ಯಸ್ಯ ನಮಸ್ಕಾರಂ ಯೇ ಕುರ್ವಂತಿ ದಿನೇ ದಿನೇ ।**
**ಜನ್ಮಾಂತರ ಸಹಸ್ರೇಷು ದಾರಿದ್ರ್ಯಂ ನೋಪಜಾಯತೇ ॥"**

**ಅರ್ಥ:** ಯಾರು ಪ್ರತಿದಿನ ಸೂರ್ಯನಿಗೆ ನಮಸ್ಕರಿಸುತ್ತಾರೋ, ಅವರಿಗೆ ಸಾವಿರ ಜನ್ಮಗಳವರೆಗೂ ದಾರಿದ್ರ್ಯ (ಬಡತನ ಮತ್ತು ಮನಸ್ಸಿನ ಬಡತನ) ಬರುವುದಿಲ್ಲ. ಇಲ್ಲಿ ದಾರಿದ್ರ್ಯ ಎಂದರೆ ಕೇವಲ ಹಣದ ಕೊರತೆಯಲ್ಲ, ಬದಲಿಗೆ ಆರೋಗ್ಯ ಮತ್ತು ಜ್ಞಾನದ ಕೊರತೆಯೂ ಹೌದು.

ಸಪ್ತಾಶ್ವಗಳ ರಥ ಮತ್ತು ವೈಜ್ಞಾನಿಕ ದೃಷ್ಟಿಕೋನ

ಪುರಾಣಗಳ ಪ್ರಕಾರ, ಸೂರ್ಯನು ಏಳು ಕುದುರೆಗಳಿರುವ ರಥವನ್ನು ಏರಿ ಸಂಚರಿಸುತ್ತಾನೆ. ಈ ಏಳು ಕುದುರೆಗಳು ಬೆಳಕಿನ ಏಳು ವರ್ಣಗಳನ್ನು (VIBGYOR) ಪ್ರತಿನಿಧಿಸುತ್ತವೆ ಎಂದು ಆಧುನಿಕ ವಿಜ್ಞಾನವೂ ಒಪ್ಪುತ್ತದೆ. ರಥಸಪ್ತಮಿಯಂದು ಏಳು ಎಕ್ಕದ ಎಲೆಗಳನ್ನು (ಅರ್ಕ ಪತ್ರ) ತಲೆಯ ಮೇಲೆ ಇಟ್ಟುಕೊಂಡು ಸ್ನಾನ ಮಾಡುವ ಸಂಪ್ರದಾಯವಿದೆ. ವೈಜ್ಞಾನಿಕವಾಗಿ ಎಕ್ಕದ ಎಲೆಗಳು ಔಷಧೀಯ ಗುಣಗಳನ್ನು ಹೊಂದಿದ್ದು, ಚರ್ಮದ ಕಾಯಿಲೆಗಳನ್ನು ನಿವಾರಿಸುವ ಮತ್ತು ದೇಹದ ವಿಷಕಾರಿ ಅಂಶಗಳನ್ನು ಹೊರಹಾಕುವ ಶಕ್ತಿ ಹೊಂದಿವೆ.

ಉಪನಿಷತ್ತಿನ ಸಾರ ಮತ್ತು ಜೀವನ ಸಂದೇಶ

ಈಶಾವಾಸ್ಯೋಪನಿಷತ್ತಿನ ಮಂತ್ರಗಳಲ್ಲಿ ಸೂರ್ಯನನ್ನು ಹೀಗೆ ಪ್ರಾರ್ಥಿಸಲಾಗುತ್ತದೆ:

"ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ । ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥" (ಹೇ ಸೂರ್ಯದೇವನೇ, ಸತ್ಯದ ಮುಖವು ಬಂಗಾರದ ಪಾತ್ರೆಯಿಂದ ಮುಚ್ಚಲ್ಪಟ್ಟಿದೆ. ಸತ್ಯಧರ್ಮವನ್ನು ಅರಿಯಲು ನೀನು ಆ ಮುಚ್ಚಳವನ್ನು ತೆಗೆದು ನಮಗೆ ಜ್ಞಾನದ ದಾರಿಯನ್ನು ತೋರಿಸು.)

ರಥಸಪ್ತಮಿಯು ನಮಗೆ ಬದಲಾವಣೆಯ ಮಹತ್ವವನ್ನು ತಿಳಿಸುತ್ತದೆ. ಕಾಲವು ಹೇಗೆ ಚಲಿಸುತ್ತದೆಯೋ, ಹಾಗೆಯೇ ನಮ್ಮ ಜೀವನವೂ ಸತತ ಕರ್ಮದ ಹಾದಿಯಲ್ಲಿ ಸಾಗಬೇಕು. ಕತ್ತಲೆಯಿಂದ ಬೆಳಕಿನೆಡೆಗೆ (ತಮಸೋಮಾ ಜ್ಯೋತಿರ್ಗಮಯ) ಸಾಗುವ ಈ ಪಯಣದಲ್ಲಿ ಸೂರ್ಯನೇ ನಮಗೆ ಆದರ್ಶ. ಈ ಶುಭ ದಿನದಂದು ನಾವು ಕೇವಲ ಸೂರ್ಯನಿಗೆ ಕೈಮುಗಿಯುವುದಷ್ಟೇ ಅಲ್ಲ, ನಮ್ಮೊಳಗಿನ ಅಜ್ಞಾನದ ಕತ್ತಲನ್ನು ಕಳೆದು ಜ್ಞಾನದ ದೀಪವನ್ನು ಹಚ್ಚುವ ಸಂಕಲ್ಪ ಮಾಡೋಣ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,